# ಹರಕೆಯ ಕುರಿ

## ಒಂದು ಮಾತು

ಈ ನಾಟಕವನ್ನು ನಾನು ಬೆಂಗಳೂರಿನ ಉಪಭಾಷೆಯಲ್ಲಿ ಬರೆದಿರುವುದಕ್ಕೆ ಕಾರಣ ಸ್ಪಷ್ಟವಿದೆ. ಇಲ್ಲಿಯ ಘಟನೆಗಳೆಲ್ಲ, ಅವು ಕಲ್ಪಿತವಾಗಿದ್ದರೂ ಘಟಿಸುವುದು ಬೆಂಗಳೂರಿನಲ್ಲಿ. ಮಧ್ಯಮ ವರ್ಗ ಸ್ಪಷ್ಟವಾಗಿ ಗೋಚರಿಸುವುದೂ ಬೆಂಗಳೂರಿನಂಥ ಸಿಟಿಗಳಲ್ಲಿ. ಈ ನಾಡಿನ ರಾಜಕೀಯ ಚಟುವಟಿಕೆಗಳ ಕೇಂದ್ರವೂ ಇದೇ. ಅಥವಾ ಪೂರ್ತಿ ಓದಿದ ಮೇಲೆ ಯಾರಿಗಾದರೂ ಹೊಳೆಯಬೇಕಾದ ಮಾತಿದು.

ಈ ಘಟನೆಗಳು ಕಾಲ್ಪನಿಕವೆಂದುದರಿಂದ - ಅಸಂಭಾವ್ಯ ಎಂಬಂಥ ದಡ್ಡ ಕಲ್ಪನೆ ಮಾಡಿಕೊಂಡ ವಿಮರ್ಶಕರಿಗೆ ಒಂದು ಮಾತನ್ನಂತೂ ಹೇಳಲೇಬೇಕು. ಫ್ರೆಂಚ್ ವಿಂಡೋ (ಇರುವ ಮನೆಗಳು ಈಗೀಗ ಕಡಿಮೆ ಅಥವಾ ಇಲ್ಲ ಅಲ್ಲವೇ? ಹೀಗಿದ್ದಾಗ ಇಂಥದೊಂದು ಘಟನೆ ನಡೆಯುವುದು ಹ್ಯಾಗೆ ಸಾಧ್ಯ-ಇಂಥ ಪ್ರಶ್ನೆ ಕೇಳುವವರಿಗೆ ಏನು ಹೇಳಲಾದೀತು? ಅಂಥದೊಂದು ಮಧ್ಯಮ ವರ್ಗದ ಮನೆ ಇದೆ ಅಂತ ತಿಳಿದು ಮುಂದುವರಿಯಬೇಕು ಅಷ್ಟೆ. ಕಲೆಗಳಲ್ಲಿ ಕಾವ್ಯ ನ್ಯಾಯ ಎನ್ನುವುದೊಂದು ಇರುತ್ತಲ್ಲ?

ಈ ನಾಟಕದಲ್ಲಿ 'ಮನೆ' 'ಮನೆತನ' 'ಗೃಹಿಣಿ' 'ಗೃಹಸ್ಥ' - ಈ ಕಲ್ಪನೆಗಳನ್ನು ವ್ಯಾಪಕವಾಗಿ ಬಳಸಿಕೊಂಡಿದ್ದೇನೆ. ಈ ಮನೆಯೊಳಕ್ಕೆ ಮುಂಬಾಗಿಲು ಕಿಟಕಿ, ಫೋನು ಹಾಗೂ ರೇಡಿಯೋಗಳ ಮೂಲಕ ಹೊರ ಪ್ರಪಂಚ ಪ್ರವೇಶಿಸುತ್ತ, ಖಾಸಗಿಯೆಂದು ಭ್ರಮಿಸಿದ್ದ ಮನೆ ಸಾರ್ವಜನಿಕವಾಗುತ್ತ ಹೋಗುತ್ತದೆ. 'ಹರಕೆಯ ಕುರಿ'ಯ ಬಲಿಯಿಂದ ಈ ಮನೆಯಲ್ಲೊಂದು ಬೆಳಕು ಮೂಡುತ್ತದೆ. ನಮ್ಮ ಬದುಕಿಗೆ ಇದು ಪ್ರಾರಂಭವಾಗಬೇಕು. ಇದು ಲೀ ನಾಟಕದ ಉದ್ದೇಶ.

ಈ ನಾಟಕಕ್ಕೆ ಉಪಯುಕ್ತವಾದ ಮುನ್ನುಡಿ ಬರೆದ ಶ್ರೀ ಕೀರ್ತಿನಾಥ ಕುರ್ತಕೋಟಿ ಅವರಿಗೆ ಆಭಾರಿಯಾಗಿದ್ದೇನೆ. ಇದನ್ನು ಪ್ರಕಟ ಮಾಡಿದ 'ಅಂಕಿತ ಪುಸ್ತಕ'ದ ಪ್ರಕಾಶ್ ಕಂಬತ್ತಳ್ಳಿ ದಂಪತಿಗಳಿಗೆ , ಮುದ್ರಿಸಿದ ಸ್ಯಾನ್ ಪ್ರಿಂಟರ್ಸ್ ಅವರಿಗೆ ಕೃತಜ್ಞನಾಗಿದ್ದೇನೆ.

**– ಚಂದ್ರಶೇಖರ ಕಂಬಾರ**

## ಮುನ್ನುಡಿ (ಮೊದಲ ಮುದ್ರಣಕ್ಕೆ ಬರೆದುದು)

ಗೆಳೆಯ ಚಂದ್ರಶೇಖರ ಕಂಬಾರರು ಈ ನಾಟಕದ ವಸ್ತುವನ್ನು ಕೆಲ ತಿಂಗಳುಗಳ ಹಿಂದೆ ನನಗೆ ವಿವರಿಸಿದ್ದರು. ಅವರ ವಿಶಿಷ್ಟವಾದ ಕಥನ ಶೈಲಿಯಲ್ಲಿ ನನಗೆ ಕೆಲವು ಅಂಶಗಳು ಆಗ ಮುಖ್ಯವಾಗಿ ಕಂಡಿದ್ದವು. ಈ ನಾಟಕದಲ್ಲಿ ರುದ್ರಪ್ಪ, ಸಿದ್ಧಲಿಂಗು ಮೊದಲಾದವರು ಪ್ರಕಾಶ್ - ಸರೋಜರ ಮನೆಯನ್ನು ತಮ್ಮ ಚಟುವಟಿಕೆಗಳಿಗಾಗಿ ಉಪಯೋಗಿಸಿಕೊಳ್ಳುವದು, ಸರೋಜ ತನ್ನ ಜೈನಿಗಾಗಿ ಬಂಗಾರದ ಬಳೆಗಳನ್ನು ಖರೀದಿ ಮಾಡಲು ಸಾಲ ತೆತೆಯುವದು ಇಂಥ ಕೆಲವು ಸಂಗತಿಗಳು ಸಹಜ ಜೀವನದ ಮೇಲೆ ರಾಜಕೀಯ ನಡೆಸಿದ ದುರಾಕ್ರಮಣವನ್ನು ಸೂಚಿಸುತ್ತವೆ. ರಾಜಕೀಯದಿಂದ ಬೇರ್ಪಡಿಸಿದರೆ ಪ್ರಕಾಶ್ ಮತ್ತು ಸರೋಜರ ಜೀವನ ಸೃಜನಶೀಲತೆಯ ಸಂಭಾವ್ಯತೆಗಳಿಂದ ತುಂಬಿಕೊಂಡದ್ದಾಗಿದೆ. ಪ್ರಕಾಶ್ ಕವಿ, ಸರೋಜ ಅವನಿಗೆ ಸ್ಫೂರ್ತಿ ಕೇಂದ್ರ, ಹೀಗೆಯೇ ಮುಂದುವರಿದರೆ ಅವರ ಬಾಳು ಸಾರ್ಥಕತೆಯನ್ನು ಪಡೆಯಬಲ್ಲುದು. ಆದರೆ ರಾಜಕೀಯ ಅವರ ದಾರಿ ಕಟ್ಟುತ್ತದೆ, ಅಡ್ಡದಾರಿಗೆ ಎಳೆದೊಯ್ಯುತ್ತದೆ. ರಾಜಕೀಯದ ಸ್ಪರ್ಶದ ಮಾಂತ್ರಿಕತೆ ಸೃಜನಶೀಲತೆಯನ್ನು ಹಾಳು ಮಾಡಬಲ್ಲದು. ಮಿಡಾಸನ ಸ್ಪಶದಂತೆ ಅದು ಜೀವನ

ವಿರೋಧಿಯಾದ ತತ್ವವಾಗಿದೆ. ಆದರೂ ರಾಜಕೀಯದ ಶಕ್ತಿ ಮತ್ತು ವ್ಯಾಪ್ತಿಗಳು ಕೂಡ ಸೃಜನಶೀಲತೆಯಷ್ಟೇ ದೊಡ್ಡದಾಗಿವೆ ಎಂಬುದನ್ನು ಮರೆಯುವಂತಿಲ್ಲ.

ಕಂಬಾರರ ನಾಟಕ ಈ ಸತ್ಯವನ್ನು ಶಕ್ತಿಯುತವಾಗಿ ಮನಗಾಣಿಸುತ್ತದೆನ್ನುವುದರಲ್ಲಿ ಸಂಶಯವೇ ಇಲ್ಲ. ಪ್ರಕಾಶ ಮತ್ತು ಸರೋಜರ ಜೀವನದ ರೀತಿಯಲ್ಲಿ ಪಾಪ ಪುಣ್ಯಗಳ ದ್ವಂದ್ವಕ್ಕೆ ಅವಕಾಶವೇ ಇಲ್ಲ. ಸರೋಜ ಸಾಲ ಮಾಡಿ ಬಂಗಾರದ ಬಳೆಗಳನ್ನು ತಂದಿರದಿದ್ದರೆ ಅವಳ ಜೀವನದ ದುರಂತ ತಪ್ಪಬಹುದಾಗಿತ್ತೆಂದು ಖಚಿತವಾಗಿ ಹೇಳಬರುವದಿಲ್ಲ. ರಾಜಕೀಯದ ಅಕ್ಟೋಪಸ್‌ಹಿಡಿತ ಸರ್ವವ್ಯಾಪಿಯಾಗಿರುವುದರಿಂದ ಅದರಿಂದ ತಪ್ಪಿಸಿಕೊಳ್ಳಲು ಮಾರ್ಗವೇ ಇಲ್ಲ. ಪ್ರಕಾಶನ ಕಾವ್ಯ ನಿರ್ಜೀವವಾಗುತ್ತಿರುವುದು ಈ ಮಾತಿಗೆ ಒಳ್ಳೆಯ ಉದಾಹರಣೆಯಾಗಿದೆ. ಬಹುಶಃ ಇಂದಿನ ಯುಗದಲ್ಲಿ ರಾಜಕೀಯದಿಂದ ದೂರವಿರುವದೇ ಅಸಾಧ್ಯವೆಂಬಂತೆ ಇಲ್ಲಿಯ ಚಿತ್ರಣವಿದೆ.

ನಾಟಕದ ವಸ್ತು ಇದಿಷ್ಟೇ ಆಗಿದ್ದರೆ ಈ ನಾಟಕದ ಇತಿಮಿತಿಗಳನ್ನು ಕುರಿತು ಸ್ಪಷ್ಟವಾದ ನಿರ್ಣಯವನ್ನು ಹೇಳಿಬಿಡಬಹುದಾಗಿತ್ತು. ನಾವು ಇತಿಹಾಸವನ್ನು ಕಟ್ಟುತ್ತಿದ್ದೇವೆ ಎಂಬ ಭ್ರಮೆ ಜನಸಾಮಾನ್ಯರಿಗಿರುವಾಗ ರಾಜಕೀಯದ ಆಕ್ರಮಣದಿಂದ ವೈಯಕ್ತಿಕ ಜೀವನ ಹೇಗೆ ಹಾಳಾಗುತ್ತಿದೆಯೆಂದು ನಾಟಕ ತೋರಿಸುತ್ತದೆಂದು ಹೇಳಬಹುದಾಗಿತ್ತು. ಆದರೆ ರುದ್ರಪ್ಪ ಮತ್ತು ಸಿದ್ದಲಿಂಗು - ಈ ವ್ಯಕ್ತಿಗಳು ನಾಟಕದ ವಸ್ತುವನ್ನು ಇನ್ನೂ ಗಹನವಾಗಿಸುತ್ತಾರೆ. ಅವರಿಬ್ಬರಿಂದಾಗಿ ರಾಜಕೀಯ ಕೇವಲ ಒಂದು ವಿನಾಶಕ ಶಕ್ತಿಯಾಗಿ ಉಳಿಯುವುದಿಲ್ಲ. ಸಿಡುಬು, ಕಾಲರಾ ಪ್ಲೇಗುಗಳಂತೆ ರಾಜಕೀಯ ಒಂದು ಅದೃಶ್ಯ ಶಕ್ತಿಯಾಗಿದ್ದರೆ ಆ ಮಾತು ಬೇರೆ. ಬೆಂಕಿಯ ವಿನಾಶಕತೆ ಅದರ ದಾಹಕ ಶಕ್ತಿಯ ಮೇಲೆ ಅವಲಂಬಿಸಿರುವಂತೆ ಈ ವಿನಾಶಕ ಶಕ್ತಿಗಳು ಕೂಡ ಎಷ್ಟು ಉರಿದರೂ ಆರಲೇಬೇಕು. ರಾಜಕೀಯ ಮನುಷ್ಯ ನಿರ್ಮಿತವಾಗಿರುವುದರಿಂದ ಅದು ಒಂದು ಸಂಸ್ಥೆಯಾಗಿ ಉಳಿಯಬೇಕೆನ್ನುತ್ತದೆ. ಈ ಉಳಿವಿಗೆ ರಾಜಕೀಯ ಕೊಡಬೇಕಾದ ಬೆಲೆ ಮಾತ್ರ ಬಹಳ ದೊಡ್ಡದು. ಜೀವನದ ಮೌಲ್ಯಗಳನ್ನು ಪಣಕ್ಕಿಟ್ಟು ಸೋತರೆ, ಮೌಲ್ಯಗಳ ಸುಳ್ಳು ಪ್ರತಿಗಳನ್ನು ತಯಾರಿಸಿಯಾದರೂ ಬದುಕಬೇಕೆನ್ನುವ ಹಟ ಅದರದು. ಈ ಹಟದ ಎದುರಿಗೆ ಮನುಷ್ಯ ಜೀವನದ ಅಳಿವು-ಉಳಿವುಗಳು ಗಣನೀಯವಲ್ಲ.

ರುದ್ರಪ್ಪ ಮತ್ತು ಸಿದ್ದಲಿಂಗು ಇವರ ಸಂಬಂಧ ನಾಟಕ ಬೆಳೆದಂತೆಲ್ಲ ಸ್ಪಷ್ಟವಾಗುತ್ತ ಹೋಗುತ್ತದೆ. ಮೊದಲ ದೃಶ್ಯದಲ್ಲಿ ಬರುವ ಸಿದ್ದಲಿಂಗು ತಾನೊಬ್ಬ ರಾಜಕೀಯ ಕೊಲೆಗಾರ ಎಂಬ ಹಮ್ಮಿನಲ್ಲಿ ಬಂದರೂ ಅವನು ರುದ್ರಪ್ಪನ ಕೈಯ ಆಯುಧವೆಂದು ಆಮೇಲೆ ಗೊತ್ತಾಗುತ್ತದೆ. ಆಯುಧದಂತೆ ಅವನಿಗೆ ಸ್ವಂತವೆನ್ನಬಹುದಾದ ಮನಸ್ಸಿಲ್ಲ. ಆದರೆ ರುದ್ರಪ್ಪನ ಜಾಲ ವ್ಯಾಪಕವಾಗುತ್ತ ಸಂಬಂಧವಿಲ್ಲದವರನ್ನೂ ಪೇಚಿಗೆ ಸಿಲುಕಿಸಿದಾಗ ಸಿದ್ದಲಿಂಗು ಸ್ವತಂತ್ರವಾಗಿ ಯೋಚಿಸುತ್ತಾನೆ. ಶ್ರೀಕಾಂತಜೀಯವರನ್ನು ಕೊಲೆ ಮಾಡಿದ್ದ ಸಿದ್ದಲಿಂಗು ತಾನೇ ಬಲಿಪಶು ಎಂಬ ನಿರ್ಧಾರಕ್ಕೆ ಬಂದು ತಲುಪುತ್ತಾನೆ. ಸಿದ್ಧಲಿಂಗುವಿನ ವ್ಯಕ್ತಿತ್ವದಲ್ಲಾಗುವ ಈ ಪರಿಣಿತಿ ಈ ನಾಟಕದ ಮಹತ್ವದ ಸಾರ್ಥಕತೆಯಾಗಿದೆ. ತಾನು ಬಲಿಯಾದರೂ ತನ್ನ ಆತ್ಮ ಸ್ವತಂತ್ರವಾಗಿದೆ ಎಂಬ ತಿಳುವಳಿಕೆ ಸಾಮಾನ್ಯವಾದ ಸಾರ್ಥಕತೆಯಲ್ಲ. ಸಿದ್ದಲಿಂಗುವಿನ ಸಾರ್ಥಕತೆಯ ಈ ಹೊತ್ತಿನಲ್ಲಿ ನಾಟಕ ವಾಸ್ತವತೆಯ ತಾರ್ಕಿಕತೆಯನ್ನು ಕೈ ಬಿಡುತ್ತದೆ. ಪ್ರಕಾಶನ ಕಾವ್ಯದ ನಿರ್ಜೀವತೆಯನ್ನು, ಪ್ರಕಾಶ ಮತ್ತು ಸರೋಜರ ಬದುಕಿನ ಅರ್ಥಹೀನತೆಯನ್ನು ವಿಮರ್ಶಿಸುವಂಥ ಪ್ರಜ್ಞೆ ಮತ್ತು ಸಂಸ್ಕಾರಗಳನ್ನು ಅವನು ಹೇಗೆ ಮತ್ತು ಎಲ್ಲಿಂದ ಪಡೆದ ಎಂಬ ಪ್ರಶ್ನೆಗಳು ಇಲ್ಲಿ ಗೌಣವಾಗುತ್ತವೆ. ಸಿದ್ಧಲಿಂಗುವಿನ ವ್ಯಕ್ತಿತ್ವ ಪವಾಡ ಸದೃಶವಾದ ಪುನರ್ಜನ್ಮವನ್ನು ಪಡೆಯುತ್ತದೆಂಬುದು ಇಲ್ಲಿ ಮುಖ್ಯವಾಗುತ್ತದೆ. ಕೊನೆಯ ಎರಡು ದೃಶ್ಯಗಳಲ್ಲಿ ಕಂಬಾರರು ಸಂಭಾಷಣೆಯ ಶೈಲಿಯನ್ನು ಬದಲಾಯಿಸಿ ಬಿಟ್ಟಿದ್ದಾರೆ. ಅಲ್ಲಿಯವರೆಗೆ ವಾಸ್ತವ ಜೀವನದ ತಾರ್ಕಿಕತೆಯನ್ನು ಸಂಭಾಷಣೆ ಒಳಗೊಂಡಿದ್ದರೆ ಕೊನೆ ಕೊನೆಗೆ ಅದು ಕಾವ್ಯದ ನಿಯಮಗಳನ್ನು ಅನುಸರಿಸುತ್ತದೆ. ಪ್ರಕಾಶನ ತಕರಾರಿನ ಮಾತಿಗೆ ಸಿದ್ದಲಿಂಗು ಕೊಡುವ ಈ ಉತ್ತರವನ್ನು ಗಮನಿಸಬೇಕು.

....ನಾನೂ ನಿನ್ನ ಹಾಗೆ ಬಲಿಪಶು. ದೇವತೆಯೊಬ್ಬ ದೂರದಲ್ಲಿ ನಿಂತುಕೊಂಡು ನಮ್ಮ ಮೂವರ ಸೂತ್ರಗಳನ್ನು ಆಡಿಸ್ತಿದಾನೆ ಗೊತ್ತಾ? ದಪ್ಪ ಹೊಟ್ಟೆಯ ಆ ದೇವರು ಉಪ್ಪರಿಗೆಯ ಮನೆಯಲ್ಲಿದ್ದಾನೆ...

ಇದು ರುದ್ರಪ್ಪನ ವಾಸ್ತವ ವರ್ಣನೆಯಲ್ಲ, ಸಾಮಾನ್ಯನಂತೆ ಕಾಣುವ ರುದ್ರಪ್ಪನ ವ್ಯಕ್ತಿತ್ವದಲ್ಲಿ ಹುದುಗಿದ ಅಸಾಮಾನ್ಯ ಕ್ರೌರ್ಯವನ್ನು, ನಿರ್ಘೃಣತೆಯನ್ನು ಸಾಂಕೇತಿಕವಾಗಿ ಇಲ್ಲಿ ಬಣ್ಣಿಸಲಾಗಿದೆ. ಬಲಿ ಕಾರ್ಯದ ಪ್ರತೀಕ ಈ ನಾಟಕದ ಅರ್ಥಕೇಂದ್ರವಾಗಿದೆ, ಅಥವಾ ಕಂಬಾರರ ಎಲ್ಲ ನಾಟಕಗಳ ಕೇಂದ್ರ ಪ್ರತೀಕವಾಗಿದೆಯೆಂದರೂ ತಪ್ಪಿಲ್ಲ. 'ಋಷ್ಯಶೃಂಗ' ನಾಟಕದ ಬಾಳಗೊಂಡ, 'ಜೋಕುಮಾರ ಸ್ವಾಮಿ'ಯ ಬಸಣ್ಣಾ ಮತ್ತು ಈ ನಾಟಕದ ಸಿದ್ದಲಿಂಗು ಇವರೆಲ್ಲ ಬಲಿಪಶುಗಳು. ಬಲಿಯಾಗುವ ವ್ಯಕ್ತಿ ದೇವತೆಗಳ ಪಂಕ್ತಿಗೆ ಸೇರಬೇಕಾಗಿರುವುದರಿಂದ ಅವನು ಬಾಹ್ಯಾಭ್ಯಂತರಗಳಲ್ಲಿ ಪರಿಪೂರ್ಣನಾಗಿರಬೇಕು. ಆದರೆ ಕಂಬಾರರ ಈ ಮೂರೂ ನಾಯಕರು ಪರಿಪೂರ್ಣರಲ್ಲ ಮತ್ತು ಅವರು ಸೇರಬೇಕಾಗಿರುವ ದೇವತೆಗಳು ಸುಳ್ಳು ದೇವತೆಗ ಳು. ರಾಮಗೊಂಡನ ತಂದೆ ಒಬ್ಬ ರಾಕ್ಷಸನಾಗಿದ್ದನೆಂದು 'ಹೇಳತೇನ ಕೇಳ'ದ ಕಥೆ ಹೇಳುತ್ತದೆ. 'ಜೋಕುಮಾರ ಸ್ವಾಮಿ'ಯ ಗೌಡ ತನ್ನ ನಪುಂಸಕವಾದ ಆಕ್ರಮಣದಿಂದ ಇನ್ನೊಬ್ಬ ಸುಳ್ಳು ದೇವತೆಯಾಗುತ್ತಾನೆ. ಈ ನಾಟಕದ ರುದ್ರಪ್ಪ ಸಿದ್ದಲಿಂಗುವೇ ಹೇಳುವಂತೆ ಯೋಗ್ಯತೆಯಿಲ್ಲದೆ ಜೀವನ ಸೂತ್ರಗಳನ್ನು ಆಡಿಸುವ ಇನ್ನೊಬ್ಬ ರಾಕ್ಷಸ. ಇಂಥವರ ಕ್ರೌರ್ಯದಲ್ಲಿ ಬಂಜೆತನ ತುಂಬಿರುವುದರಿಂದ ಬಲಿ ಕಾರ್ಯ ಅರ್ಥವಿಲ್ಲದ ಕ್ರಿಯೆಯಾಗುತ್ತದೆ.

ಸಿದ್ದಲಿಂಗುವಿನ ಇನ್ನೊಂದು ಸಂಭಾಷಣೆಯಲ್ಲಿ ಕೂಡ ಇಂಥ ಪ್ರತೀಕಗಳು ಹೇರಳವಾಗಿ ತುಂಬಿಕೊಂಡಿವೆ :

'ಶ್ರೀಕಾಂತಜೀ ರುದ್ರಪ್ಪನ ಶತ್ರುವಾದರೆ ನನಗೆ ಅವರಿಬ್ಬರು ಶತ್ರುಗಳು. ಇಬ್ಬರೂ ನಮ್ಮ ದಡ್ಡತನದಿಂದಲೇ ಬೆಳೆದವರು. ನಾವೆಲ್ಲ ನಾಲಿಗೆ ಚಾಚಿ ಅದರ ಮೇಲೆ ಅವನನ್ನು ಕೊಂದು, ನೆಲಕ್ಕೆ ರಕ್ತಬೀಳದ ಹಾಗೆ ಕುಡಿಯಬೇಕು.'

ಶ್ರೀಕಾಂತಜೀ ಮತ್ತು ರುದ್ರಪ್ಪ ಇವರಿಬ್ಬರ ವ್ಯಕ್ತಿ ಚಿತ್ರಣ ಇಲ್ಲಿ ದೊರೆಯುತ್ತಿದ್ದು ರಾಜಕೀಯ ವ್ಯಕ್ತಿಗಳನ್ನು ರೂಪಿಸುವ ಬಗೆಯನ್ನೂ ಇಲ್ಲಿ ಸೂಚಿಸಲಾಗಿದೆ. ರಾಜಕೀಯದ ಲೋಕ ನಮ್ಮ ಜಗತ್ತಿಗಿಂತ ಭಿನ್ನವಾದ, ಆದರೆ ಸಮಾನಾಂತರವಾಗಿರುವ ಲೋಕ. ಅಲ್ಲಿಯ ಬದುಕು, ಸಾವುಗಳೆರಡೂ ನಮಗೆ ವಿಸ್ಮಯಗಳು. ಶ್ರೀಕಾಂತಜೀ ಗುಂಡಿನಿಂದ ಸಾಯಬಲ್ಲವನಾಗಿದ್ದರಿಂದ ಸತ್ತ. ಆದರೆ ರುದ್ರಪ್ಪನ ಎದೆ ಗುಂಡುಗಳಿಗೆ ಅಭೇದ್ಯವಾದದ್ದು. ಅವನು ರಾಜಕೀಯ ಶಕ್ತಿಯ ಪ್ರತೀಕ, ರುದ್ರಪ್ಪನ ಜೀವ ನಮ್ಮ ನಿಮ್ಮ ಅಜ್ಞಾನಗಳಲ್ಲಿದೆ ಎಂದು ಹೇಳುವುದು ಒಪ್ಪತಕ್ಕ ಮಾತೇ. ಧಾರ್ಮಿಕ ಮೌಢ್ಯವಿರುವಂತೆ ರಾಜಕೀಯ ಮೌಢ್ಯವೂ ಇದೆ ಎಂಬ ಮಹತ್ವದ ಸತ್ಯವನ್ನು ಹೇಳಿದಂತಾಯಿತು ಆದರೆ ಕಂಬಾರರ ಪ್ರತೀಕ ಯೋಜನೆಯಲ್ಲಿಯ ಧ್ವನಿ ಇಲ್ಲಿಗೇ ನಿಲ್ಲುವುದಿಲ್ಲ. ಈ ಮಾತು ಹೇಳುವವನು ಸಿದ್ದಲಿಂಗು. ಅವನ ಅರಿವಿಗೆ ನಿಲುಕಿದ್ದನ್ನು ಅವನು ಹೇಳುತ್ತಾನೆ. ಆದರೆ ಹೊಸ ಯಾಂತ್ರಿಕತೆಯಂತೆ ಹೊಸ ರಾಜಕೀಯ ಕೂಡ ಈ ಮಾತಿಗಿಂತ ಹೆಚ್ಚು ಗಹನವಾಗಿದೆಯೆಂಬುದನ್ನು ಈ ಮಾತುಗಳು ಪ್ರತಿಧ್ವನಿಸುತ್ತವೆ.

'ಹರಕೆಯ ಕುರಿ' ನಾಟಕದ ವಸ್ತು ರಾಜಕೀಯವಾಗಿರುವುದರಿಂದ ಇಷ್ಟೆಲ್ಲ ಮಾತು ಹೇಳಬೇಕಾಯಿತು. ವಿಶಾಖದತ್ತನ 'ಮುದ್ರಾರಾಕ್ಷಸ' ಶೇಕ್ಸ್‌ಪಿಯರನ - 'ಜ್ಯೂಲಿಯಸ್ ಸೀಝರ್', ಸಾರ್ತ್ರನ 'ನೆಕ್ರೊಸೊವ್' ಇಂಥ ನಾಟಕಗಳಲ್ಲಿ ಕಂಡು ಬರುವ ಒಂದು ನಿರ್ಘೃಣತೆಯ ನಿರೂಪಣೆ ಇಲ್ಲಿಯೂ ಇದೆ. ಚಾಣಕ್ಯ, ಬ್ರೂಟಸ್‌ನಂಥ ಮಹಾವ್ಯಕ್ತಿಗಳು ಇಲ್ಲಿ ಇಲ್ಲ ನಿಜ. ವರ್ತಮಾನದ ರಾಜಕೀಯ ವಸ್ತುವಾಗಿರುವುದೇ ಇದಕ್ಕೆ ಕಾರಣವಾಗಿದೆ. ಆದರೆ ವ್ಯಕ್ತಿಗಳ ಗುಣ ಯಾವುದೇ ಆಗಿರಲಿ ಪ್ರಕ್ರಿಯೆ ಮಾತ್ರ ಒಂದೇ ಆಗಿದೆ.

ಸೀಝರನ ಕೊಲೆ ಒಂದು ತತ್ವದ ಸಮರ್ಥನೆಗಾಗಿ ಅನಿವಾರ್ಯವಾದ್ದರಿಂದ ಅದನ್ನು ಕೊಲೆ ಎಂದು ಕರೆಯದೆ ಬ್ರೂಟಸ್ ಬಲಿಕಾರ್ಯ ಎನ್ನುತ್ತಾನೆ. ಆದರೆ ಕೊಲೆಗಡುಕರು ಸೀಝರನ ರಕ್ತದ ಮಡುವಿನಲ್ಲಿ ಕೈ ಅದ್ದಿ ಕುಣಿದಾಡಿದಾಗ ತತ್ವದ ಹಿಂದಿನ ಬರ್ಬರತೆ ವಿಕರಾಳವಾಗಿ ಪ್ರತ್ಯಕ್ಷವಾಗುತ್ತದೆ. ರುದ್ರಪ್ಪ ಶ್ರೀಕಾಂತಜೀಯ ಕೊಲೆ ಮಾಡಿಸುವುದೂ ಅಂಥ ಒಂದು ಬರ್ಬರ ಕೃತ್ಯ. ಆದರೆ

ಸಿದ್ದಲಿಂಗುವನ್ನು ಹೆಗ್ಗಣದಂತೆ ಬಡಿದು ಕೊಲ್ಲುವುದು ಇನ್ನೂ ಹೆಚ್ಚಿನ ಬರ್ಬರ ಕೃತ್ಯ. ಸಿದ್ದಲಿಂಗುವಿನ ಬಲಿ ತನ್ನ ಸಾರ್ಥಕತೆಯನ್ನು ಪಡೆಯದಿರುವುದು ಹೆಚ್ಚಿನ ದುರಂತ.

ಕಂಬಾರರ ಮೊದಲಿನ ನಾಟಕಗಳಿಗಿಂತ ಇಲ್ಲಿ ಹೆಚ್ಚಿನ ನಾಟ್ಯ ಕೌಶಲ ಕಾಣುತ್ತಿದೆಯೆಂದು ನನ್ನ ಅನಿಸಿಕೆಯಾಗಿದೆ. ಇದಕ್ಕೆ ಕಾರಣ ಹೀಗೂ ಇರಬಹುದು : ತಮ್ಮ ವಾಡಿಕೆಯ ಗೌಡ, ಸೂಳೆ ಮತ್ತು ಮಿಂಡರ ಜಗತ್ತನ್ನು ಬಿಟ್ಟು ಕಂಬಾರರು ಇನ್ನು ಹೆಚ್ಚು ಪರಿಷ್ಕೃತವಾದ ಮತ್ತು ಹೆಚ್ಚು ನಿರ್ದಯವಾದ ರಾಜಕೀಯದ ಲೋಕವನ್ನು ಪ್ರವೇಶಿಸಿದ್ದು. ಹಳ್ಳಿಗಾಡಿನ ರಾಜಕೀಯ ವ್ಯಕ್ತಿನಿಷ್ಠವಾದದ್ದು ಮತ್ತು ಅಲ್ಲಿಯ ಸೇಡು ಮತ್ತು ಕೊಲೆಗಳು ಜೀವನ ಮೌಲ್ಯಗಳ ಕದಡುವಿಕೆಯಿಂದ ಹುಟ್ಟಿ ಬಂದವುಗಳು. ಆದರೆ ಆಧುನಿಕ ರಾಜಕೀಯ ಯಾಂತ್ರಿಕತೆಯಂತೆ ಅವ್ಯಕ್ತವಾದ ಶಕ್ತಿಯ ಅದೃಶ್ಯಜಾಲವಾಗಿದೆ. ಇಲ್ಲಿ ಬದುಕು ಸಾವುಗಳು ಅನುಭವಗಳಲ್ಲ, ಸಂಗತಿಗಳು. ಇಡೀ ದೇಶವನ್ನೇ ತನ್ನ ಖಾಸಗೀ ಆಸ್ತಿಯನ್ನಾಗಿ ಮಾಡಬಲ್ಲ ರುದ್ರಪ್ಪ ಯಾರದೋ ಮನೆಯನ್ನು ತನ್ನ ಆಫೀಸನ್ನಾಗಿ ಮಾಡಿಕೊಂಡು ಅವರಿಗೆ ಗೊತ್ತಿಲ್ಲದಂತೆ ನಾಟಕವಾಡುವುದು ಇಂದಿನ ರಾಜಕೀಯದ ಚಿರಂತನ ಪ್ರತೀಕವಾಗಿದೆ. ಪ್ರಕಾಶ ಮತ್ತು ಸರೋಜರಿಗೆ ಗೊತ್ತಿರುವ ರಾಜಕೀಯ ಪಠ್ಯಪುಸ್ತಕದ ರಾಜಕೀಯದಂತೆ ತಾತ್ವಿಕವಾಗಿದ್ದರೆ ಪ್ರತ್ಯಕ್ಷವಾದ ರಾಜಕೀಯ ಜೀವನ ವೃಕ್ಷದ ಬೇರುಗಳಿಗೆ ಸುರುವಿದ ಕೆಂಡವಾಗುತ್ತದೆ. ರಾಜಕೀಯದ ಲೋಕದಲ್ಲಿ ಶಬ್ದ ಮತ್ತು ಪ್ರತೀಕಗಳಿಗೆ ನಿಶ್ಚಿತಾರ್ಥವೇ ಇಲ್ಲದಿರುವುದರಿಂದ ಹುಟ್ಟುವ ಮೌಲ್ಯಸಂಕರ ಭಯಾನಕವಾಗಿದೆ. ಒಬ್ಬ ವ್ಯಕ್ತಿಯ ದಬ್ಬಾಳಿಕೆ ನಿಂತು ಹೋಗಿ ಸಾರ್ವಜನಿಕ ಅಭಿಪ್ರಾಯದ, ಸ್ಲೋಗನ್ನುಗಳ, ಗುಂಪುಗಾರಿಕೆಯ, ಅರ್ಥವಾಗದ ಅರ್ಥಪ್ರಪಂಚದ ದಬ್ಬಾಳಿಕೆ ತಾನೇ ತಾನಾದಾಗ ವ್ಯಕ್ತಿ ದಿಗ್ಭ್ರಮೆಗೊಳ್ಳುವುದು ಸ್ವಾಭಾವಿಕವಾಗಿದೆ. ಅಂಥ ಒಂದು ಶಕ್ತಿಯುತವಾದ ಚಿತ್ರ ಈ ನಾಟಕದಲ್ಲಿದೆ.

ಕಂಬಾರರ ಈ ನಾಟಕ ಕನ್ನಡದಲ್ಲಿ ಮಹತ್ವದ ಪಾತ್ರವಹಿಸಬಲ್ಲದೆಂದು ನನ್ನ ನಂಬಿಕೆಯಾಗಿದೆ. ಅವರು ಇದಕ್ಕಿಂತ ಹೆಚ್ಚು ಅರ್ಥನಿಬಡತೆಯುಳ್ಳ ನಾಟಕಗಳನ್ನು ಸೃಷ್ಟಿಸಲಿ ಎಂಬ ಹಾರೈಕೆಯೊಂದಿಗೆ ಈ ಮುನ್ನುಡಿಯನ್ನು ಮುಗಿಸುತ್ತೇನೆ.

**– ಕೀರ್ತಿನಾಥ ಕುರ್ತಕೋಟಿ**

# ಪ್ರಸ್ತಾವನೆ

*(ಬಾಡಿಗೆ ಕೊಡಲೆಂದೇ ಕಟ್ಟಿಸಿದ ಸಣ್ಣ ಮನೆ. ನಮಗೆ ಕಾಣುತ್ತಿರುವುದು ಆ ಎತ್ತರ ಮನೆಯ ಎರಡನೆಯ ಅಂತಸ್ತು ಮಾತ್ರ. ಇಕ್ಕಟ್ಟಾದ ಸ್ಟೇರ್ ಕೇಸ್ ಮುಗಿಯುವಲ್ಲಿ ಪ್ರೇಕ್ಷಕರ ಎಡಬದಿಗೆ ಮುಂಬಾಗಿಲಿದೆ, ಮುಕ್ಕಾಲು ರಂಗಭೂಮಿ ಮನೆಯ ಹಾಲ್ ಮತ್ತು ಬೆಡ್ ರೂಂನಿಂದ ತುಂಬಿದೆ. ನೇಪಥ್ಯದ ಕಡೆ ಬೆಡ್ ರೂಮಿನಲ್ಲೊಂದು ಫ್ರೆಂಚ್ ವಿಂಡೋ ಇದೆ. ಅದನ್ನು ತೆರೆದಾಗ ದೂರದಲ್ಲಿಯ ಉಪ್ಪರಿಗೆಯ ಮನೆಗಳ ಹಿಂಭಾಗ ಮತ್ತು ಒಂದೆರಡು ಮರಗಳತುದಿ ಕಾಣಿಸುತ್ತವೆ. ಅವುಗಳಾಚೆಗಿನ ಆಕಾಶ ಖಂಡಿತ ಕಾಣಿಸುವುದಿಲ್ಲ. ಆ ಮನೆಗಳ ಮಧ್ಯೆ ಇಕ್ಕಟ್ಟಾದ ಸಂದಿ ಇರುವುದನ್ನು, ಅಲ್ಲಿ ಬೆಳಕು ಸಾಲದ್ದನ್ನು ಅವುಗಳ ವಿನ್ಯಾಸವೇ ಸೂಚಿಸುತ್ತದೆ. ಹಾಲಿಗಂಟಿ ಕಿಚನ್ನಿದೆ. ನೋಡಿದೊಡನೆ ಈ ಮನೆ ಮಧ್ಯಮ ವರ್ಗದವರದೇ ಎಂದು ತೋರುವಂತೆ ಅಸಹ್ಯ ಅಭಿರುಚಿಯಿಂದ ಸಿಂಗರಿಸಿರಬೇಕು. ಅಲ್ಲಿ ಬೆಲೆಬಾಳುವ ವಸ್ತುಗಳ ಅನಗತ್ಯ. ಪ್ರದರ್ಶನವಿದೆ. ಕೃತಕತೆ ಮತ್ತು ಶ್ರೀಮಂತಿಕೆಯ ಅನುಕರಣೆ ಇದೆ. ಕಿಚನ್ ಬಾಗಿಲ ಬಳಿ ಒಂದು ಫ್ರಿಜ್ಜಿದೆ. ನೇಪಥ್ಯದ ಗೋಡೆಗಂಟಿ ಒಂದು ಟೇಬಲ್ಲಿದೆ. ಅದರ ಮೇಲೊಂದು ರೇಡಿಯೋ ಸೆಟ್ಟಿದೆ. ಟೇಬಲ್ಲಿನ ಅಕ್ಕಪಕ್ಕ ಎರಡು ಬೆತ್ತದ ಕುರ್ಚಿಗಳಿವೆ. ಹಾಲಿನಲ್ಲಿ ರತ್ನಗಂಬಳಿ ಹಾಸಿದ್ದು ಮಧ್ಯೆ ಒಂದು ಸೋಫಾ ಸೆಟ್ಟಿದೆ. ಫೋನಿದೆ. ಬೆಡ್‌ರೂಮಿನಲ್ಲಿ ಉಮರ್ ಖಯ್ಯಾಂ ಮತ್ತು ಅವನ ಹೆಂಗಸಿನ ಚಿತ್ರವಿದೆ. ಒಂದು ಡ್ರೆಸ್ಸಿಂಗ್ ಟೇಬಲ್ಲಿದೆ. ಈ ಮನೆಗೆ ಹೊರತಾಗಿ ರಂಗದ ಒಂದು ಮೂಲೆಯಲ್ಲಿ ಸದಾ ಕತ್ತಲೆಯಲ್ಲಿರುವ ಒಂದು ಶೂನ್ಯ ಸ್ಥಳವಿದೆ. ಅಲ್ಲಿ ಒಂದು ಫೋನಿದೆ. ಅಗತ್ಯಬಿದ್ದಾಗ ಅಲ್ಲಿ ಆಯಾ ವ್ಯಕ್ತಿಗಳು ಬಂದು ಮಾತಾಡುತ್ತಾರೆ. ತೆರೆ ಸರಿದಾಗ*

*ಸೋಫಾದಲ್ಲಿ ಕೂತ ಪ್ರಕಾಶ್ ಪದ್ಯ ಬರೆಯುತ್ತಿರುವುದು ಕಾಣಿಸುತ್ತದೆ. ಬರೆದದ್ದನ್ನು ಓದುತ್ತಾನೆ, ತಿದ್ದುತ್ತಾನೆ, ಧ್ಯಾನಿಸುತ್ತಾನೆ. ವಯಸ್ಸು ಮೂವತ್ತೈದು. ಹೊರಗಡೆ ಹೋಗುವುದಕ್ಕೆ ಸಿದ್ಧನಾಗಿದ್ದಾನೆ. ಆದರೆ ಅಗತ್ಯಕ್ಕಿಂತ ಮುಂಚೆಯೇ ಸಿದ್ಧನಾಗಿರುವುದರಿಂದ ಆ ಸಮಯವನ್ನು ತನ್ನ ಇತ್ತೀಚಿನ ಪದ್ಯ ತಿದ್ದುವುದರಲ್ಲಿ ಕಳೆಯುತ್ತಿದ್ದಾನೆ. ಸುಮಾರು ಸಂಜೆ ಏಳು ಗಂಟೆ. ತಿದ್ದಿದ ಮೇಲೆ ಗಟ್ಟಿಯಾಗಿ ಓದುತ್ತಾನೆ).*

ಪ್ರಕಾಶ್ : ಚಿನ್ನ,
ಕಣ್ಣಿಂದ ಪಿನ್ನು ಚುಚ್ಚಿ ಗೋಡೆಗಂಟಿಸಬೇಡ ನನ್ನ
ಉಟ್ಟ ಮುಗ್ಧತೆ ಕಳಚಿ ಬೆತ್ತಲೆ ಮಾಡಿ
ಒಳಗಿನ ಗೂಢ ದುಡುಕುಗಳ ಕೆಡಕುಗಳ
ಪತ್ತೆ ಹಚ್ಚಿ ತೋರಿಸಬೇಡ
ನಿನ್ನ ನೋಟಕ್ಕೆ ತಕ್ಕ ಆಟವಾಡಿಸುತ್ತ
ನನ್ನನ್ನ ಆತ್ಮಹತ್ಯೆಗೆ ಒತ್ತಾಯಿಸಬೇಡ.
ಬದುಕುವ ಒಪ್ಪಂದಗಳಿಗೆ ಸಹಿಹಾಕುವ
ಪುಕ್ಕ ನಾನೆಂದು ನೀಬಲ್ಲೆ.
ವಿದೂಷಕನಿಗೆ ರಾಜನ ಪಾರ್ಟು ಕೊಡಬೇಡ.
ನಾನು ಮುಂದೆ ಆಗಲಿರುವುದಕ್ಕೆ,
ಎತ್ತರವೇರಲಿಕ್ಕೆ, ಪಾತಾಳಕ್ಕಿಳಿಯಲಿಕ್ಕೆ-
ಇಲ್ಲವೇ ನಿನ್ನ ಕಣ್ಣ ಪಿನ್ನುಗಳಿಂದ ಸಾಯಲಿಕ್ಕೆ
ನೀನೇ ಕಾರಣವೆಂದು ಹೆಮ್ಮೆ ಪಡಬೇಡ,
ಆದರೆ ಇದೂ ನಿನಗೆ ತಿಳಿದಿರಲಿ;
ಹಾಗಾಗಲಿಕ್ಕೆ ಆರಿಸಿಕೊಂಡವನು
ಮತ್ತು ಹಾಗೆ ಆದವನು ನಾನೇ ಮತ್ತು
ನಾನು ಮಾತ್ರವೆಂದು,

*(ಹೀಗೆ ಓದುತ್ತಾ ತಿದ್ದುತ್ತಿರುವಂತೆ ಸರೋಜಾ ಬರುತ್ತಾಳೆ, ವಯಸ್ಸು ಮೂವತ್ತು. ಮಧ್ಯಮವರ್ಗದ ಎಲ್ಲ ತೆವಲುಗಳ ಪರಿಣಾಮಗಳನ್ನು ಅವಳಲ್ಲಿ ಕಾಣಬಹುದು. ಆಫೀಸಿನಿಂದ ಬಂದರೂ ಯಾವ ಆಯಾಸವೂ ಅವಳ ಮುಖದಲ್ಲಿಲ್ಲ. ಲಿಪ್‌ಸ್ಟಿಕ್, ಪೌಡರ್ ತಾಜಾ ಇವೆ. ಬಾಬ್‌ಕಟ್ ನೀಟಾಗಿದೆ, ಸೀರೆ ಕೂಡ ಈಗಷ್ಟೆ ಉಟ್ಟಿರುವಂತಿದೆ. ಅವಳನ್ನು ಕಂಡೊಡನೆ ಪ್ರಕಾಶ್ ಕಳೆಕಳೆಯಾಗುತ್ತಾನೆ. )*

ಸರೋಜ : ಹಾಯ್ ಹನಿ.

ಪ್ರಕಾಶ್ : ರೋಜಿ, ಒಂದ್ನಿಮಿಷ. ಹೊಸಾ ಪದ್ಯ ಬರೆದಿದೇನೆ; ಕೇಳು.

ಸರೋಜ : ಇರಿ ಇರಿ, ಬಂದೆ . ಸೀರೆ ಕೊಳೆಯಾಗುತ್ತೆ. ಬಟ್ಟೆ ಬದಲಾಯ್ಸಿ ಬರ್ತೀನಿ.

ಪ್ರಕಾಶ್ : ಬಾರೇ ಒಂದು ನಿಮಿಷ, ಪ್ಲೀಸ್.

ಸರೋಜ : *(ಕೂರುತ್ತ)* ನೀವಿನ್ನೂ ಬಟ್ಟೆ ಬದಲಾಯಿಸಿಲ್ಲ, ಹೊರಗಡೆ ಹೊರಟಹಾಗಿದೆ?

ಪ್ರಕಾಶ್ : ಮೊದಲು ಪದ್ಯ ಕೇಳು. *(ಓದುವನು)*

ಕಣ್ಣಿಂದ ಪಿನ್ನು ಚುಚ್ಚಿ ಗೋಡೆಗಂಟಿಸಬೇಡ ನನ್ನ
ಉಟ್ಟ ಮುಗ್ಧತೆ ಕಳಚಿ ಬೆತ್ತಲೆ ಮಾಡಿ…….

*(ಅಷ್ಟರಲ್ಲಿ ಎಡರಂಘದ ಅಭ್ಯರ್ಥಿಗೆ ನಿಮ್ಮ ಮತ, ಎಡರಂಗಕ್ಕೆ ಮತ, ದೇಶಕ್ಕೆ ಹಿತ, ತಪ್ಪಿದ ತಾಳ, ಆಳುವ ಮೇಳ- ಇತ್ಯಾದಿ ಗುಂಪು ಘೋಷಣೆಗಳು ಕೇಳಿ ಬರುತ್ತವೆ. ಇಬ್ಬರೂ ಅಸಹ್ಯಪಟ್ಟವರಂತೆ ಮುಖ ಕಿವುಚಿ ಘೋಷಣೆಗಳು ಕರಗಿದ ಮೇಲೆ ಮಾತಾಡುತ್ತಾರೆ.)*

ಸರೋಜ : ಕಣ್ಣಿಂದ ಪಿನ್ನು ಚುಚ್ಚೋಳು, ಯಾರ್ರೀ ಅವಳು?

ಪ್ರಕಾಶ್ : ಆಹ್ಹಾ ಯಾರಿರ್ಬೇಕು ಹೇಳು ನೋಡೋಣ.

ಸರೋಜ : ನಿಮ್ಮ ಕಾಲೇಜಲ್ಲಿ ಯಾವ್ಯಾವ ಹುಡ್ಗೇರಿದ್ದಾರೊ, ನಿಮ್ಮ ಮೇಲೆ ಎಂಥೆಂಥಾ ಬಲೆ ಬೀಸಿದಾರೊ ನನಗೇನ್ರಿ ಗೊತ್ತು? ನೋಡಿ, ನಮ್ಮೆ ಜಮಾನ್ರು ನನ್ಮೇಲೆ ತುಂಬಾ ಪ್ರೀತಿ ಅಂತ ನಿಶ್ಚಿಂತಳಾಗಿ ನನ್ನ ಆಫೀಸಾಯ್ತು, ಮನೆಯಾಯ್ತು, ಅಂತ ಇದ್ರೆ, ನೀವೇನೇನೋ ರೊಮಾನ್ಸ್ ಮಾಡ್ತಿದೀರಾ.

ಪ್ರಕಾಶ್ : *(ಖುಷಿಯಾಗಿ)* ಲೇಲೇ ಈ ಪದ್ಯದ ಹೀರೋಯಿನ್ ನೀನೇ ಕಣೆ. ನಿನಗಿದು ಗೊತ್ತಿದೆ. ಆದ್ರೂ ಸುಳ್ಳು ಹೇಳಿ ಆಟ ಆಡಿಸ್ತೀಯಾ; ಪ್ರಿಯೆ ಕಳ್ಳುಲ ಕುಡಿಸಿದ ಹಾಗೆ ನಿನ್ನ ಸುಳ್ಳು.

ಸರೋಜ : *(ವಯ್ಯಾರ ಮಾಡುತ್ತಾ)* ನಿಜ ಹೇಳಿ; ಕಣ್ಣಿಂದ ಪಿನ್ನು ಚುಚ್ಚಿ…ಅಂತ ಏನೇನೋ ಹೇಳಿದಿರಲ್ಲಾ, ನಾನೆಂದಾದರೂ ಹಾಗೆ ಮಾಡಿದ್ದೀನಾ?

ಪ್ರಕಾಶ್ : *(ಪದ್ಯ ಸರಿಸಿ ನೆಲದ ಮೇಲೆ ಕೂತು ಅವಳ ತೊಡೆ ಮೇಲೆ ಮುಖ ಇಟ್ಟು ಅವಳನ್ನೇ ನೋಡುತ್ತಾ)* ಅಲ್ಲಾ ಈ ಮಾದಕ ಕಣ್ಣುಗಳಿಂದ ನನ್ನ ಹೃದಯಾನ ಇರಿಯೋದಿಲ್ವಾ ನೀನು? ಹಾರಿಸುವ ಹುಬ್ಬಿನಿಂದ ನನ್ನ ತಿವಿಯೋದಿಲ್ವಾ ನೀನು?

ಎಲೆ ನೀರೆ ನೀ ಎನ್ನ ಮದಿರೆ
ವೈನಿನಂತೊಳಗಿಂದ ಪರಿಮಳವ ಬೀರೆ
ನೊರೆಗರೆವ ನಗೆಯವಳೆ ಗ್ಲಾಸಿನೊಳಗಿನ ಬೀರೆ

ಸರೋಜ : ಥೂ ಹೋಗಿಯಪ್ಪಾ, ನಿಮಗೆ ಕಾವ್ಯದ ನಶೆ ಏರಿದರೆ ಏನೇನೋ ಅಂತೀರ. ಮಕ್ಕಳ ಥರಾ ಕೆಳಗಡೆ ಉರುಳಾಡಿದರೆ ಬಟ್ಟೆ ಕೊಳೆ ಆಗೋದಿಲ್ವಾ? ಎದ್ದು ಮೇಲೆ ಕೂತ್ಕೊಳ್ಳಿ; ರೀ ನಿಮಗೆ ನನ್ನಲ್ಲೇನೂ ಛೇಂಜ್ ಕಾಣಲಿಲ್ವಾ?

ಪ್ರಕಾಶ್ : *(ಎದ್ದು ನಿಂತು ಅವಳನ್ನು ನೋಡುತ್ತಾ)* ಇಲ್ವಲ್ಲ. ದಿನಾ ಇರೋ ಹಾಗೇ, ಪುಟ್ಟ ಗೊಂಬೆ ಥರ ಇದ್ದೀಯಾ.

ಸರೋಜ : ಹಾಗಾದರೆ ನೀವು ನನ್ನ ಪ್ರೀತಿಸೋದೆಲ್ಲ ಸುಳ್ಳು,

ಪ್ರಕಾಶ್ : *(ಪರೀಕ್ಷಿಸಿ ನೋಡುತ್ತ)* ಹಾಳಾದ್ದು ಏನೂ ಬದಲಾವಣೆ ಕಾಣ್ತಾ ಇಲ್ವಲ್ಲಾ. ಅದೇ ಮುಖ, ಅದೇ ಕಣ್ಣು, ಅದೇ ತುಟಿ, ಆದರೆ …..

ಸರೋಜ : *(ಎರಡೂ ಕೈ ವಯ್ಯಾರದಿಂದ ತಿರುವಿ ತೋರಿಸುತ್ತಾ)* ಕೈ ಅವೇನಾ? ಚಿನ್ನದ ಬಳೆ ಕಾಣಿಸ್ಲಿಲ್ವಾ?

ಪ್ರಕಾಶ್ : *(ಚಕಿತನಾಗಿ)* ಚಿನ್ನದ ಬಳೇನಾ? ಯಾವಾಗ ಕೊಂಡೆ? ನನಗೆ ಹೇಳ್ಳೇ ಇಲ್ಲ.

ಸರೋಜ : ಸಾಲಮಾಡಿ ತಂದೆ *(ಪ್ರಕಾಶ್ ಚಿಂತಾಮಗ್ನನಾಗುತ್ತಾನೆ).*

ಪ್ರಕಾಶ್ : ಸಾಲದ ಮೇಲೆ ಸಾಲ; ಮತ್ತೆ ಇದನ್ಯಾಕೆ ತಂದೆ? ಸ್ಕೂಟರ್ ಸಾಲ, ಫ್ರಿಜ್ ಸಾಲ, ಹಳೇ ಸಾಲ ತೀರ್ಸೋಕೇ ಆಗ್ತಾ ಇಲ್ಲ. ಇನ್ನು ಇದು ಬೇರೆ.

ಸರೋಜ : ಚೇಷ್ಟೆಗೆ ಹಾಗಂದೆ. ನಿಜಾ ಅಂತ ಅಂದ್ಕೋಬೇಡಿ ಮಾರಾಯ್ರೆ. ಇದು ಉಮಾ ಗೋಲ್ಡ್ ಬಳೆ.

ಪ್ರಕಾಶ್ : ಸಧ್ಯ!

*(ಅಷ್ಟರಲ್ಲಿ ಹೊರಗಡೆ ಘೋಷಣೆಗಳು ಕೇಳಿಸುತ್ತವೆ. ಅದರ ಅಬ್ಬರ ಕಡಿಮೆ ಆಗುವ ತನಕ ನಿಂತು ಆಮೇಲೆ ಮಾತಾಡುವರು.)*

ಪ್ರಕಾಶ್ : ರೋಜಾ, ನಿಜ ಹೇಳೆ; ನನ್ನ ಪದ್ಯ ಕೇಳಿ ನಿನಗೆ ಸಂತೋಷ ಆಗಲಿಲ್ವಾ?

ಸರೋಜ : ಇಲ್ಲ *(ಏಳುವಳು).*

ಪ್ರಕಾಶ್ : ಸುಳ್ಳು.

ಸರೋಜ : ನಿಮ್ಜೊತೆ ಏನ್ ಮಾತು.

ಪ್ರಕಾಶ್ : ಇರೆ, ಏನೋ ಹೇಳ್ತೀನಿ *(ನಿಲ್ಲುವಳು, ಪ್ರಕಾಶ್ ಅವಳ ಮುಖವನ್ನೇ ನೋಡುವನು).*

ಸರೋಜ : ಏನೋ ಹೇಳ್ತೀನಿ ಅಂತೀರಾ ಬರೀ ನನ್ಮುಖ ನೋಡ್ತೀರಾ, ಈಗೇನು ಹೇಳ್ತೀರಾ ಇಲ್ವಾ?

ಪ್ರಕಾಶ್ : ಹೇಳ್ತೀನಿ ನೀನು ಆ ಕಡೆ ಮುಖ ಮಾಡು.

ಸರೋಜ : *(ಮುಖ ಓರೆ ಮಾಡಿ)* ಸರಿ. ಅದೇನು ಬೇಗ ಹೇಳಿ.

ಪ್ರಕಾಶ್ : ಏನೋ ಹೇಳ್ಬೇಕಂತಿದ್ದೆ. ಮರೆತ್ಹೋಯ್ತು.

ಸರೋಜ : ಸರಿ ನಿತ್ಯದ ನಿಮ್ಮ ಕಿರಿ ಕಿರಿ ಸುರುವಾಯ್ತು.

ಪ್ರಕಾಶ್ : ಏನೋ ಹೇಳ್ಬೇಕಂತೀನಿ ಅಂದ್ರೆ.

ಸರೋಜ : ನಂಗೊತ್ತು ನೀವೇನ್ ಹೇಳ್ತೀರಿ ಅಂತ.

ಪ್ರಕಾಶ್ : ಹಾಗಿದ್ರೆ ಹೇಳ್ಲಾ? ಬೇಡ್ವಾ?

ಸರೋಜ : ಹೇಳಿ.

ಪ್ರಕಾಶ್ : ಎಲ್ಲಿಂದ ಶುರು ಮಾಡ್ಬೇಕು ಅಂತ....
*(ಸರೋಜ ಹೊರಡುವಳು)* ಹಾ ಗೊತ್ತಾಯ್ತು ಹೇಳ್ಲಾ?
ನಿನ್ನ ಹತ್ರ ಇದ್ರೆ ಬೆಳದಿಂಗಳಲ್ಲಿ ಇದ್ದ ಹಾಗೆ ಅನ್ಸತ್ತೆ.

ಸರೋಜ : ಇಷ್ಟೇನಾ?

ಪ್ರಕಾಶ್ : ಆಹಾ ಹೌದು *(ನಗುವನು)*

ಸರೋಜ : ಥೂ ನಗೋದನ್ನ ನಿಲ್ಲಿಸ್ತೀರಾ?

ಪ್ರಕಾಶ್ : ನಿಲ್ಲಿಸ್ತೀನಿ, ಆದ್ರೆ ನಿನ್ನ ಹತ್ರ ಇದ್ದಾಗೆಲ್ಲ ನನಗೆ ಸಂತೋಷ ಆಗುತ್ತೆ. ಅದನ್ನು ಹ್ಯಾಗೆ ನಿಲ್ಲಿಸಲಿ?

ಸರೋಜ : *(ಹುಸಿಕೋಪದಿಂದ ಬೆಡ್ ರೂಮಿನ ಕಡೆ ಹೋಗುತ್ತಾ)* ನಿಲ್ಲಿಸ್ಬೇಡಿ ನಗ್ತಾ ಇರಿ, *(ಮಾತಿನ ಧಾಟಿ ಬದಲಿಸಿ)* ಹೊರಗಡೆ ಹೋಗ್ತಿದೀರಾ?

ಪ್ರಕಾಶ್ : ಹೌದು.

ಸರೋಜ : ಅದೇನೊ ಇವೊತ್ತು ಭಾರಿ ಗಲಾಟೆ ಆಗೋ ಹಾಗಿದೇರಿ ಕಾಲೇಜ್ ಗ್ರೌಂಡ್‌ನಲ್ಲಿ ಭಾರ ಈ ಜನ ಸೇರೋಂಡ್ಕಿದಾರೆ. ಅಷ್ಟೇ ಜನ ಪೋಲೀಸರಿದ್ದಾರೆ. ಎರಡೂ ಪಾರ್ಟಿಯವರು ಎದುರೆದುರಿಗೇ ಪೆಂಡಾಲ್ ಹಾಕಿದ್ದಾರೆ...

ಪ್ರಕಾಶ್ : ಮತ್ತು ಇಬ್ಬರೂ ಏಕಕಾಲಕ್ಕೆ ಒಂದೇ ಭಾಷಣ ಮಾಡ್ತಾರೆ, ಜೋಡಾಟದ ಹಾಗೆ.

ಸರೋಜ : ಜೋಡಾಟ ಅಂದ್ರೆ?

ಪ್ರಕಾಶ್ : ಮಲೆನಾಡ ಕಡೆ ಜೋಡಾಟ ಅಂತ ಆಡ್ತಾರೆ. ಎದುರು ಬದುರು ಎರಡು ಸ್ಟೇಜು, ಎರಡು ತಂಡ; ಆದರೆ ಒಂದೇ ಅಡಿಯನ್ಸು, ಇಬ್ರೂ ಆಡೋದು ಒಂದೇ ಆಟ. ಇವರಾಡಿದ್ದನ್ನೇ ಅವರಾಡ್ತಾರೆ. ಅವರಾಡಿದ್ದನ್ನೇ ಇವರಾಡ್ತಾರೆ. ಆಡಿಯನ್ಸ್ ನಕ್ಕೂ ನಕ್ಕೂ ಸುಸ್ತಾಗಬಹುದು.

ಸರೋಜ : ಗಲಾಟೆ ಆಗಬಹುದೋ ಏನೋ ಯಾಕ್ಹೋಗ್ತೀರಿ? ಸುಮ್ನೆ ಕೂತಿರ್ ಬಾರ್ದ?

ಪ್ರಕಾಶ್ : ಜನ ಇದ್ದಲ್ಲಿ ಕವಿ, ಜನವಾಣಿ ಬೇರು, ಕವಿವಾಣಿ
ಹೂವು. *(ಈ ಸಲ ಮತ್ತೆ ಘೋಷಣೆಗಳು ಕೇಳುತ್ತವೆ. ಆದರೆ ಅಬ್ಬರ ಮೊದಲಿನಷ್ಟಿಲ್ಲ.)*

ಸರೋಜ : ಈ ಎಲೆಕ್ಷನ್ ಅಗತ್ಯ ಇತ್ತು ಅಂತೀರಾ?

ಪ್ರಕಾಶ್ : ಮತ್ತೆ ಪ್ರಜಾಪ್ರಭುತ್ವ ಅಂದ್ರೆ ಬಿಟ್ಟಿ ಅಂದ್ಕೊಂಡ್ಯೇನು?

ಸರೋಜ : ಬಿಟ್ಟೀನೋ ತುಟ್ಟೀನೊ! ಆರಿಸಿ ಬರೊ ಪಾರ್ಟಿ ಯಾವ್ದು ಅಂತ ಗೊತ್ತೇ ಇದೆ . ಸುಮ್ನೆ ಈಗಿದ್ದವರೇ ಆಳಿಕೊಂಡು ಹೋದರಾಯ್ತಪ್ಪ. ಐದು ವರ್ಷಕ್ಕೊಮ್ಮೆ ಈ ನಾಟಕ ಯಾಕೆ ಬೇಕು? ದುಡ್ಡೂ ದಂಡ ಟೈಮೂ ಹಾಳು.

ಪ್ರಕಾಶ್ : ಈ ಸಲ ಏನೇನೋ ಬದಲಾವಣೆ ಕಾಣ್ತಾ ಇದೆ. ಜನ ರೋಶಿ ಹೋಗಿದಾರೆ ಕಣೆ. ರೂಲಿಂಗ್ ಪಾರ್ಟಿ ಕಂಡ್ರೆ ಒಳಗೊಳಗೇ ಕುದೀತಿದಾರೆ, ರಾಜಕೀಯ ಭಾಷಣಗಳಿಗೆ ಜನ ಈ ರೀತಿ ಸೇರಿದ್ದನ್ನ ಎಂದಾದ್ರೂ ಕಂಡಿದ್ಯಾ?

ಸರೋಜ : ಜನ ಸೇರೋದು ರಾಜಕೀಯ ಭಾಷಣ ಕೇಳಲಿಕ್ಕಲ್ಲ. ಶ್ರೀಕಾಂತಜೀನ್ನ ನೋಡಲಿಕ್ಕೆ.

ಪ್ರಕಾಶ್ : ಅದಕ್ಕೇ ಸೇರಲೇಳು. ರೂಲಿಂಗ್ ಪಾರ್ಟಿ ಕಡೆ ಗ್ಲಾಮರ್ ಇದೆ. ಇತ್ತ ಶ್ರೀಕಾಂತಜೀ ಭಾರಿ ಸಿನೇಮಾ ನಟ. ಅವನಿಗೂ ಗ್ಲಾಮರ್ ಇದೆ. ಮುಳ್ಳಿನಿಂದ ಮುಳ್ಳು ತೆಗೆಯೋ ಹಾಗೆ, ಗ್ಲಾಮರ್ ನಿಂದ ಗ್ಲಾಮರ್ ತೆಗೀತಾರೆ. ತಪ್ಪೇನು? ಮುಯ ರೂಲಿಂಗ್ ಪಾರ್ಟೀನ್ನ ಇರೀಬೇಕು. ಅದಕ್ಕಾಗಿ ವಿರೋಧ ಪಕ್ಷಗಳಿಗೆ ಒಂದು ಸರಿಯಾದ ಆಯುಧ ಬೇಕಿತ್ತು. ಶ್ರೀಕಾಂತಜೀ ಸಿಕ್ಕ, ಅಷ್ಟೆ. ನೋಡು, ಅಕ್ಕಪಕ್ಕ ರಾಜ್ಯಗಳಲ್ಲಿ ಏನಾಗಿದೆ? ಅಂಥಾದ್ದು ನಮ್ಮಲ್ಲೂ ಅಗೋ ಹಾಗಿದ್ರೆ ಆಗ್ಲೇಳು. ಶ್ರೀಕಾಂತಜೀ ರಾಜಕೀಯ ಸೇರಿದಾಗಿನಿಂದ ಎಲೆಕ್ಷನ್ ಸೀನೇ ಛೇಂಜಾಗಿದೆ ಗೊತ್ತಾ?

ಸರೋಜ : ಸರಿ ಬಿಡಿ. ನಿಮ್ಮ ಓಟು ಯಾರಿಗೆ ಅಂತ ಗೊತ್ತಾಯ್ತು. ಈ ಸಲ ಓಟು ಹಾಕಿಯೇ ಬಿಡ್ತೀರೊ ಏನೊ.

ಪ್ರಕಾಶ : ಹಾಕೋಣ ಅದಕ್ಕೇನಂತೆ.

ಸರೋಜ : ಆ ಕೊಳಕು ಜನಗಳ ಸಾಲಿನಲ್ಲಿ ತಾಸುಗಟ್ಟಳೆ ಕ್ಯೂ ನಿಂತು ಓಟು ಹಾಕೋದು ನನ್ನಿಂದಾಗಲ್ಲಪ್ಪ, ಬೇಕಾದ್ರೆ ನೀವು ಹಾಕಿ ಬನ್ನಿ. ಯಾಕೆಂದ್ರೆ ನೀವು ಕವಿಗಳು, ಬದ್ಧತೆ, ಮಲಬದ್ಧತೆ ಅಂಥಾ ಏನೇನೋ ಹೇಳ್ತೀರಾ.

ಪ್ರಕಾಶ್ : ಅದನ್ನ ಆಮೇಲೆ ತೀರ್ಮಾನ ಮಾಡೋಣ, ಹಾ, ನೆನಪಾಯ್ತು ರೋಜಿ. ನನಗೊಂದು ಕನಸು ಬಿದ್ದಿತ್ತು. ಕನಸಿನಲ್ಲಿ ಭಾರತ ಮಾತೆ ಬಂದಿದ್ಲು.

ಸರೋಜ : ಏನು, ಭಾರತಮಾತೇನಾ? *(ನಗುವಳು)*

ಪ್ರಕಾಶ್ : ನಗಬೇಡ, ಸೀರಿಯಸ್. ಇಬ್ರೂ ಮನೇಲಿದ್ವಿ. ಜೋರಾಗಿ ಮಳೆ ಬರ್ತ ಇತ್ತು. ಇದ್ದಕ್ಕಿದ್ದ ಹಾಗೆ ಬಾಗಿಲು ನಾಕ್ಕಾಯ್ತು ಹೋಗಿ ತೆಗೀಬೇಕನ್ನೋದರಲ್ಲಿ ಬಾಗಿಲು ತಂತಾನೆ ತೆರೆದು ಒಳಕ್ಕೆ ಒಬ್ಬಳು ಹೆಂಗಸು ಬಂದಳು.

ಸರೋಜ : ಎಂತ ಸೀರೆ ಉಟ್ಟಿದ್ದಳು?

ಪ್ರಕಾಶ್ : ಬಹುಶಃ ಬಿಳೀದಿತ್ತು.

ಸರೋಜ : *(ತಾತ್ಸಾರದಿಂದ)* ಅದೆ, ಖದ್ದರ್ ತಾನೆ?

ಪ್ರಕಾಶ್ : ಸುಮ್ನೆ ಕೇಳು.

ಸರೋಜ : ಗೊತ್ತು ಕಣ್ರೀ ನಿಮ್ಮನ್ನ ಆಕೆ ಯಾವುದೊ ಪ್ರತಿಷ್ಠಾನದ ಛೇರ್ಮನ್ ಮಾಡಿದ್ಳು. ಕರು, ಬಾರು, ಅಶೋಕ ಹೋಟ್ಲಲ್ಲಿ ನಮಗೆ ಡಿನ್ನರ್ ಪಾರ್ಟಿ, ಸನ್ಮಾನ.... ಸರಿ ತಾನೆ?

ಪ್ರಕಾಶ್ : ಹೆಚ್ಚೂಕಮ್ಮಿ ಹೀಗೇ ಅನ್ನು. ನನ್ನ ಹೃದಯವನ್ನು ಮಾತ್ರವಲ್ಲ. ನನ್ನ ಕನಸನ್ನೂ ಕದ್ದು ನೋಡ್ತೀಯಲ್ಲೆ. ರೋಜಾ ಐ ಲವ್ ಯೂ. ಛೇ ನೀನು ಒಮ್ಮೆಯೂ ಹೀಗೆ ಅನ್ನಿದಿಲ್ವಲ್ಲಾ?

ಸರೋಜ : ನನಗೆ ಕೆಲಸ ಇದೆ, ನಿಮಗಿಲ್ಲ
ನೀವಂತೀರಿ. *(ಫೋನ್ ರಿಂಗಾಗುವುದು. ಸರೋಜ ಎತ್ತಿ ಕೇಳಿ ರಾಂಗ್ ನಂಬರ್ ಎಂದು ಕುಕ್ಕುವಳು)* ಫೋನ್ ಎತ್ತಿದಾಗೊಮ್ಮೆ ರುದ್ರಪ್ಪ ಇದಾರ ಅಂತ ಕೇಳ್ತಾರಲ್ಲ, ಯಾರ್ರೀ ಆ ರುದ್ರಪ್ಪ?

ಪ್ರಕಾಶ್ : ವಿರೋಧ ಪಕ್ಷದ ನಾಯಕ ಕಣೆ. ಈ ಮನೆ ನಮಗೆ ಬಾಡಿಗೆ ಕೊಡಿಸಿದರಲ್ಲ, ಅವ್ರು. ನಾವು ಬರೋಕೆ ಮುಂಚೆ ಇಲ್ಲಿ ಅವರ ಸ್ನೇಹಿತ ಇದ್ದರಂತೆ. ಎಡರಂಗ ಗೆದ್ದು ಬಂದರೆ ಅವರೂ ಮಂತ್ರಿ ಆಗೋರು ಗೊತ್ತಾ? ರೋಜಾ, ಫೋನ್ ಬಿಲ್ ಬಂತಾ?

ಸರೋಜ : ಬಂದಿಲ್ಲ. ಬಂದ್ರೆ ನಾವು ಕಟ್ಟೋದು ಸಾಧ್ಯ ಇಲ್ಲ. ಸಾವಿರಾರು ರೂಪಾಯಿ ಒಮ್ಮೆಲೇ ಬಿಲ್ ಬಂದ್ರೆ ಕಟ್ಟೋರು ಯಾರು? ಫೋನ್ ಬೇಡ ಅಂತ ಹೇಳಿ ವರ್ಷ ಆಯಿತು. ಆದ್ರೂ ಕಿತ್ಕೊಂಡು ಹೋಗಲ್ಲ ಅಂದ್ರೆ ಏನರ್ಥ? ಮೊದಲೇ ಮೈ ತುಂಬಾ ಸಾಲ. ಅದರಲ್ಲಿ ಇದು ಬೇರೆ ದಂಡ.

ಪ್ರಕಾಶ್ : ರೋಜಾ ನಮ್ಮ ಫೋನ್ ಬಿಲ್ಲು ಬೇರೆ ಯಾರಾದ್ರೂ ಕಟ್ಟಿರಬಹುದು?

ಸರೋಜ : ಹಾಗೇ ನಂಬಿಕೊಂಡಿರಿ. ಒಂದು ದಿನ ಇದ್ದಕ್ಕಿದ್ದ ಹಾಗೆ ಬಿಲ್ ಬರ್ಲಿ. ಆವಾಗ ಗೊತ್ತಾಗುತ್ತೆ. ನೀವ್ಯಾಕಿನ್ನೂ ವಿಚಾರಿಸಿಲ್ಲ?

ಪ್ರಕಾಶ್ : ಫೋನ್‌ಮಾಡಿದ್ದೆ ಮಾರಾಯ್ತೆ. ಬಿಲ್ ಬಂದಿಲ್ಲ ಅಂದ ಮೇಲೆ ನೀವ್ಯಾಕೆ ತಲೆ ಕೆಡಿಸಿಕೊಳ್ತೀರಿ ಸಾರ್ ಅಂತ ಅವ ಫೋನ್ ಕೆಳಗಿಟ್ಟ. ಪೋಸ್ಟ್ ಆಫೀಸಿನಲ್ಲಿ ಕೇಳಿದೆ. ಆ ಪೋಸ್ಟ್‌ಮಾಸ್ಟರ್ ನನ್ನನ್ನು ಒಂದು ಸಲ ನೋಡಿ ತನ್ನ ಹಳದಿ ಹಲ್ಲಿನ ಅಖಂಡ ಸಾಲು ಕಾಣೋ ಹಾಗೆ ನಕ್ಕು ತನ್ನ ಪಾಡಿಗೆ ತಾನು ತಲೆ ಕೆಳಗ್ಹಾಕಿ ಬರೀತಾ ಕೂತ! ಮನೆ ಯಜಮಾನ ಕಟ್ಟಿರಬಹುದಾ, ಅಂತ ಕೇಳಿ ನೋಡಿದೆ. ಅವನು ಹುಬ್ಬು ನೆತ್ತಿಗೇರಿಸಿ- 'ನಾನು ಟಾಟಾ ಬಿರ್ಲಾ ಅಲ್ಲಾ ಸ್ವಾಮಿ, ಹಾಗಾದಾಗ ನೋಡೋಣ' ಅಂತ ನಕ್ಕ. ಅದ್ಯಾಕೆ ಆ ಥರ ನಗತಾರೆ? ಅವರ ಮುಖದ ಮೇಲೆ ವಾಂತಿ ಮಾಡಿಕೊಳ್ಳೋಣ ಅನ್ನಿಸತ್ತೆ. *(ಎದ್ದು ಭಾವುಕನಾಗಿ ಭಾಷಣ ಮಾಡುವ ಸ್ಟೈಲಿನಲ್ಲಿ)* ಈ ದೇಶ ಅನಾಥವಾಗಿದೆಯೇ! ಇಲ್ಲಿ ಏನೂ ಆಗಬಹುದು. ಏನೂ ನಡೆಯಬಹುದು. ಒಂದಕ್ಕೂ ಕಾರ್ಯಕಾರಣ ಸಂಬಂಧ ಇಲ್ಲ. ಈ ಜನಗಳ ನಿರ್ಲಕ್ಷದಿಂದ ನಮ್ಮಲ್ಲಿ ನಾಚಿಕೆ ಕೂಡ ಉಳಿದಿಲ್ಲ.

ಸರೋಜ : ಭಾಷಣ ಮಾಡ್ತೀರಾ? ಇರಿ, ಒಂದು ಟೇಬಲ್ ತರ್ತೀನಿ.
*(ನಗುವಳು. ಆತ ಹಾಗೇ ಮುಂದುವರಿಸುವನು.)*

ಪ್ರಕಾಶ್ : ಈ ದೇಶದಲ್ಲಿ ಕಪ್ಪು ಹಣ ಕೊಟ್ಟು ದೇವರನ್ನ ಸಾಕ್ಷಾತ್ಕಾರ ಮಾಡಿಕೊಳ್ಳಬಹುದು. ಭಾಷಣ ಒದರಿ ಮಳಲಿನಲ್ಲಿ ಹಸಿರು ಕ್ರಾಂತಿ ಮಾಡಬಹುದು. ಬಾರಿನಲ್ಲಿ ಕ್ರಾಂತಿಯ ಡಿಸ್ಕೊ ಕುಣಿಯಬಹುದು.

ಸರೋಜ : ಯಜಮಾನರು ಕದ್ದು ಸಿಗರೇಟು ಸೇದಬಹುದು.

ಪ್ರಕಾಶ್ : *(ವಾಸ್ತವಕ್ಕೆ ಳಿದು)* ಯಾಕೆ, ಈ ಹೊತ್ತೂ ಸಿಗರೇಟು ತುಂಡು ಸಿಕ್ಕಿತ್ತಾ?

ಸರೋಜ : ಅಕಾ ಅಲ್ಲಿ, ಇನ್ನೂ ಬಿದ್ದಿದೆ ನೋಡಿ.

ಪ್ರಕಾಶ್ : ನಿಜ ಹೇಳ್ತೀನಿ ಮಾರಾಯಳೆ ನಾನು ಸಿಗರೇಟು ಸೇದೋಲ್ಲ. ಯಾರಾದ್ರೂ ಸ್ನೇಹಿತರು ಬಂದಿದ್ರಾ?

ಸರೋಜ : ನಾನಿದ್ದಾಗ ಬಂದಿಲ್ಲ.

ಪ್ರಕಾಶ್ : ಭೂತ ಚೇಷ್ಟೆ ಇರಲಾರದು. ಸಿಗರೇಟಿನ ತುಂಡು ಹ್ಯಾಗ್ಬರುತ್ತೆ ಇಲ್ಲಿ? *(ಹೊರಗಡೆ ಜಯಕಾರ, ಘೋಷಣೆಗಳು ಕೇಳಿಸುತ್ತವೆ)* ಮೆರವಣಿಗೆ ಬಂತೂ ಅಂತ ಕಾಣ್ಸುತ್ತೆ. ಇರು ಭಾಷಣ ಕೇಳಿ ಬರ್ತೀನಿ. *(ಹೊರಡುವನು)* ಬಂದ ಮೇಲೆ ಸಿಗರೇಟು ತುಂಡಿನ ಬಗ್ಗೆ ಅನ್ವೇಷಣೆ ಮಾಡೋಣ.

ಸರೋಜ : ನೀವು ಭಾಷಣ ಕೇಳಲಿಕ್ಕೆ ಹೊರಟಿಲ್ಲ ಅಂತ ಗೊತ್ತು.

ಪ್ರಕಾಶ್ : ಆಯ್ತು. ಶ್ರೀಕಾಂತಜೀನ್ನ ನೋಡಲಿಕ್ಕೇ ಹೊರಟೇನಿ ಅಂತ ಇಟ್ಕೊ. ಆ ಮನುಷ್ಯನ್ನ ಬೆಳ್ಳೀತೆರೆ ಮೇಲೆ ನೋಡಿದೇನೆ. ನಿಜ ಜೀವನದಲ್ಲಿ ಹ್ಯಾಗಿದಾನೆ, ನೋಡಿ ಬರ್ತೀನಿರು. ಬೇಕಾದ್ರೆ ನೀನೂ ಬಾ.

ಸರೋಜ : ನನಗೆ ಹಸಿವಾಗಿದೆ. ಇನ್ನೂ ಅನ್ನ ಸಾರು ಬೇಯಿಸಬೇಕು. ಇಂಥ ಗಲಾಟೇಲಿ ನೀವಾದ್ರೂ ಯಾಕೆ ಹೋಗ್ತೀರಿ?

ಪ್ರಕಾಶ್ : ಬೇಗ ವಾಪಸ್ ಬರ್ತೀನಿ. *(ಹೋಗುವನು)*

ಹರಕೆಯ ಕುರಿ : ಮತ್ತು ಭರತ ವಾಕ್ಯ

*(ಅದೇ ಮನೆ. ಮಾರನೇ ದಿನದ ಸಂಜೆ. ಸರೋಜಾ ಮತ್ತು ಪ್ರಕಾಶ್ ರೇಡಿಯೋದ ಅಕ್ಕಪಕ್ಕ ಕೂತಿದ್ದಾರೆ. ಪರಸ್ಪರ ನೋಡುತ್ತಿಲ್ಲ. ರೇಡಿಯೋದಲ್ಲಿ ಹಿಂದೀ ಚಿತ್ರಗೀತೆ ಎತ್ತರದ ದನಿಯಲ್ಲಿ ಕೇಳಿಸುತ್ತಿದೆ. ಅಷ್ಟರಲ್ಲಿ ಬಾಗಿಲು ತಟ್ಟಿದ ಸಪ್ಪಳಾಗುತ್ತದೆ. ಆದರೆ ರೇಡಿಯೋ ಅವಾಜದಲ್ಲಿ ಅದು ಸ್ಪಷ್ಟವಾಗಿ ಕೇಳಿಸುವುದಿಲ್ಲ. ಇನ್ನಷ್ಟು ಜೋರಾಗಿ ತಟ್ಟಿದಾಗ ರೇಡಿಯೋ ನಿಲ್ಲಿಸಿ ಕೇಳುತ್ತಾರೆ. ಮತ್ತೆ ಶಬ್ದವಾದೊಡನೆ ಪರಸ್ಪರ ಮುಖ ನೋಡಿಕೊಳ್ಳುತ್ತಾರೆ. ಸಪ್ಪಳಾಗುತ್ತಿದ್ದುದು ಕಿಟಕಿಯಲ್ಲಾದ್ದರಿಂದ ತುಸು ಗೊಂದಲಗೊಂಡು ಕೊನೆಗೂ ಪ್ರಕಾಶ್ ಹೋಗಿ ಕಿಟಕಿ ಬಾಗಿಲು ತೆರೆಯುತ್ತಾನೆ. ಸರೋಜ ಬೆಡ್ ರೂಮಿನ ಬಾಗಿಲಲ್ಲಿ ನಿಂತಿದ್ದಾಳೆ. ಕಿಟಕಿಯಿಂದ ಸಿದ್ದಲಿಂಗು ಒಳಬಂದು ಇಬ್ಬರೂ ಗಂಭೀರವಾಗಿರುವುದನ್ನು ಗಮನಿಸುತ್ತಾನೆ.)*

ಸಿದ್ದಲಿಂಗು : ನಮಸ್ಕಾರ

ಪ್ರಕಾಶ್ : ಯಾರು ನೀನು?

ಸರೋಜ : ಫೋನ್ ಮಾಡಿದವರು ಇವರೇ.

ಪ್ರಕಾಶ್ : ಓಹೋ ನೀವೂ!

ಸಿದ್ದಲಿಂಗು : ಬನ್ನಿ ಅಂತಿಲ್ಲ. ಕೂತ್ಕೊಳ್ಳಿ ಅಂತಿಲ್ಲ. ಟೀ ಕಾಫಿ ಏನ್ಬೇಕು ಅಂತಿಲ್ಲ. ಅತಿಥಿ ದೇವರು ಅಂತಾರೆ. ಖಂಡಿತ ಇದು ಅತಿಥಿಯನ್ನ ಸತ್ಕರಿಸೋ ರೀತಿ ಅಲ್ಲ. ಪ್ರಕಾಶ್ ನೀನು ಬಾರೀ ಕೆಟ್ಟ ಗೃಹಸ್ಥ.

ಪ್ರಕಾಶ್ : ಅದನ್ನೆಲ್ಲಾ ತಮ್ಮಿಂದ ಕಲಿಯೋಣ ಅಂತ ಕೂತಿದ್ದೆ.

ಸಿದ್ದಲಿಂಗು : ಕಲಿಸೋಣ ಅದಕ್ಕೇನಂತೆ. ಮೊದಲನೇ ಪಾಠ; ನನ್ನಂಥ ಗೌರವಾನ್ವಿತ ಸಭ್ಯನೊಬ್ಬ ನಿಮ್ಮ ಮನೆಗೆ ಬಂದು ತನ್ನ ಪರಿಚಯ ಹೇಳಿದೊಡನೆ 'ಹಲೋ, ದಯವಿಟ್ಟು ಒಳಗೆ ಬನ್ನಿ; ಯೂ ಆರ್ ವೆಲ್‌ಕಂ' ಅನ್ನಬೇಕು. ಹೇಳಲಾ? ನನ್ನ ಹೆಸರು ಸಿದ್ದಲಿಂಗು. ನಟಸಾರ್ವಭೌಮ ಶ್ರೀಕಾಂತಜೀ ಕೊಲೆ ಮಾಡಿದವನು, *(ಕೈ ಚಾಚುವನು. ಪ್ರಕಾಶ್ ಕೈ ತಿರಸ್ಕರಿಸಿ ಸಿಟ್ಟಿನಿಂದ ನೋಡುವನು)* ಅರೆ, ನಿನಗೆ ಅಘಾತವಾಗುತ್ತೆ, ಮೂರ್ಛೆ ಬೀಳುತ್ತಿ ಅಂದುಕೊಂಡಿದ್ದೆ, ನಿನಗೆಲ್ಲ ಗೊತ್ತು ಹಾಗಾದರೆ. ಹೋಗಲಿ ಕೂತುಕೊಳ್ಳಲಾ?

ಪ್ರಕಾಶ್ : ತಾವು ಈ ಮನೆಗೆ ಹೊಸಬರಲ್ಲವಲ್ಲ.

ಸಿದ್ದಲಿಂಗು : ವ್ಯಂಗ್ಯ ಗೊತ್ತು ನಿನಗೆ; ಕವಿಯಲ್ಲವೆ? ನಿನ್ನ ಲೇಟೆಸ್ಟ್ ಪ್ರೇಮಗೀತೆ ಓದು ಕೇಳೋಣ.

ಪ್ರಕಾಶ್ : *(ಕನಲಿ)* ತಲೆಹರಟೆ ಬೇಡ, ನೇರವಗಿ ಮಾತಾಡಿ. ಎಷ್ಟು ದಿನದಿಂದ ನೀವು ಸರೋಜನನ್ನ ಬಲ್ಲಿರಿ?

ಸಿದ್ದಲಿಂಗು : ಇರೋ ರಾಜಾ ಸುಧಾರಿಸಿಕೋತೀನಿ, ಹ್ಯಾಗಿದ್ದೀ ಸರೋಜಾ?

ಸರೋಜ : ಪ್ರಕಾಶ್ ಏನೋ ಕೇಳ್ತಿದಾರೆ; ಉತ್ತರ ಹೇಳಿ.

ಸಿದ್ದಲಿಂಗು : ಹೇಳತೀನಿ ಹೇಳಲಿಕ್ಕೇ ಬಂದೀನಿ, ಮೊದಲು ನಿಮಗೆ ಥ್ಯಾಂಕ್ಸ್ ಹೇಳಬೇಕು ಕಟ್ಟುನಿಟ್ಟಾಗಿ ಗುಟ್ಟನ್ನ ಕಾಪಾಡಿದ್ದಕ್ಕೆ. ಈತನ ವಿಷಯ ನನಗಿರಲಿ, ಏನಯ್ಯಾ ರಾಜಕುಮಾರ?

ಪ್ರಕಾಶ್ : ಮರ್ಯಾದೆ ಕೊಟ್ಟು ಮಾತಾಡಿ, ನೀನು ತಾನು ನನಗಾಗೋದಿಲ್ಲ.

ಸಿದ್ದಲಿಂಗು : ನಾನು ಮಾತಾಡೋದೆ ಹೀಗೆ. ಈಗೇನು ಮಾತಾಡ್ಲಾ ಬೇಡವ?

ಪ್ರಕಾಶ್ : ನೀವು ಹಾಗೇ ಮಾತಾಡೋದಾದರೆ ನಾನು... ನಾನೂ ಒರಟಾಗಿ...

ಸಿದ್ದಲಿಂಗು : ಮಾತಾಡಬೇಕಾಗುತ್ತೆ. ಅಷ್ಟೇ ತಾನೆ? ಇದಕ್ಕೆ ಅಷ್ಟೊಂದು ಯಾಕೆ ಬೆವರಬೇಕು?

ಪ್ರಕಾಶ್ : ನನ್ನ ತಾಳ್ಮೆ ಪರೀಕ್ಷೆ ಮಾಡ್ತಾ ಇದ್ದೀ ನೀನು *(ಸಿಟ್ಟಿನಿಂದ ಕೈ ಕುಟ್ಟುವನು.)*

ಸಿದ್ದಲಿಂಗು : ಯಾಕೆ ಫಿಟ್ಸ್ ಬಂತ? ತುಂಬ ಕೋಮಲ ನೀನು, ಲಾಲ್‌ಬಾಗ್‌ನಲ್ಲಿ ಪ್ರೀತಿಸಲಿಕ್ಕೆ ಹುಟ್ಟಿದವನು. ನಿನ್ನ ನೀನೇ ಯಾಕೆ ಹಿಂಸೆ ಮಾಡಿಕೊಳ್ತೀಯ? ಎದುರಿಗೆ ನಾನಿಲ್ಲವ? ಹೇಳು ನಿನಗೇನು ವಿಷಯಬೇಕು?

ಪ್ರಕಾಶ್ : ನಿನಗೂ ಸರೋಜಳಿಗೂ ಏನು ಸಂಬಂಧ?

ಸಿದ್ದಲಿಂಗು : ಸರೋಜಾ ಹೆಣ್ಣು, ನಾನು ಗಂಡು!

ಪ್ರಕಾಶ್ : *(ಹತಾಶರಾಗಿ ಉತ್ತರ ಸಿಕ್ಕಂತೆ ಸರೋಜಳ ಕಡೆ ನೋಡಿ)* ಆಯ್ತಲ್ಲ!

ಸರೋಜ : ಏನ್ರೀ ನೀವು ಹೇಳೋದು?

ಸಿದ್ದಲಿಂಗು : ನೀವಿಬ್ಬರು ದೊಡ್ಡ ಮನಸ್ಸು ಮಾಡಿ ಚಪ್ಪಾಳೆ ತಟ್ಟೋದಾದರೆ ನಾನು ಒಂದು ಭಾಷಣ ಮಾಡುತ್ತೇನೆ.

ಸರೋಜ : ರೀ ನಿಮ್ಮ ಚೇಷ್ಟೆಗೆ ನಗೋ ಸ್ಥಿತಿಯಲ್ಲಿ ಇಲ್ಲಾರೀ ನಾವು. ಅದೇನು ಬೊಗಳ್ತೀರೋ ಬೇಗನೆ ಬೊಗಳಿ.

ಪ್ರಕಾಶ್ : ಹೇಳೋದಿನ್ನೇನಿದೆ!

ಸಿದ್ದಲಿಂಗು : ಅಯೋಗ್ಯ ಮುಂಡೇದೆ. ನೀನು ಹೀಗೇ ಇರಬೇಕಂತ ಅಂದುಕೊಂಡಿದ್ದೆ : ನೀನು ಏನನ್ನ ಮೆಚ್ಚಬಲ್ಲೆ, ಎಲ್ಲಿ ಸಿಟ್ಟಿಗೇಳಬಲ್ಲೆ, -ಎಲ್ಲಿ ಹಸ್ತ ಹೊಸೀ ಬಲ್ಲೆ,- ಎಲ್ಲಾ ತದ್ರೂಪು, ನಿನ್ನ ಲೇಟೆಸ್ಟ್ ಪದ್ಯದ ಹೆಸರು ಹೇಳಲಾ? ಚೆಂಗುಲಾಬಿ! ಅಥವಾ ಇನ್ನಾವುದೋ ಹೂವಿನ ಹೆಸರಿರಬೇಕು. ಅಥವಾ ಚೆಂಗುಲಾಬಿಯೂ ದುಂಬಿಯೂ-ಅಂತಿರಬೇಕು. ಪದ್ಯದ ಸಾಲುಗಳೇ ನಿನಗೆ ಜೀವನ ತೋರಿಸಬೇಕು, ಹೆಂಡತಿ ಬಗೆಗಿನ ಅನುಮಾನ ಕೂಡ ನೀನು ಕಂಡುಕೊಂಡದ್ದಲ್ಲ; ಯಾರಿಂದಲೋ ಬಂದದ್ದು! ಸರಿತಾನೆ? ಸರಿ ಅಂತ ಒದರು.

ಪ್ರಕಾಶ್ : ನನಗೂ ಕಣ್ಣಿವೆ.

ಸಿದ್ದಲಿಂಗು : ಅದು ಸುಳ್ಳು ಕವಿಯ ಜಂಬದ ಮಾತು.

ಪ್ರಕಾಶ್ : ನಾ ಕೇಳಿದ್ದು ಅದಲ್ಲ.

ಸಿದ್ದಲಿಂಗು : ನನಗ್ಗೊತ್ತು. ಅದಕ್ಕುಂಚೆ ನಾ ಕೇಳಿದ್ದಕ್ಕೆ ಉತ್ತರ ಕೊಡು. ನನಗೂ ಸರೋಜಂಗೂ ಸಂಬಂಧ ಇದೆ ಅಂತ ಹೇಳಿದವರ್ಯಾರು?

ಪ್ರಕಾಶ್ : ನನಗೂ ಕಣ್ಣಿವೆ ಅಂತ ಹೇಳಿದ್ದಾಯ್ತು.

ಸಿದ್ದಲಿಂಗು : ನಿನಗೆ ಸ್ವಂತ ಕಣ್ಣಿಲ್ಲ ಅಂತ ನಾನೂ ಹೇಳಿದ್ದಾಯ್ತು. ಹೇಳಲು ನನಗೆ ಯಾರು ಹೇಳಿದ್ದು?

ಸರೋಜ : ನೀವು ಬಿಟ್ಟ ಪಿಸ್ತೂಲಿದೇರಿ.

ಸಿದ್ದಲಿಂಗು : ಪಿಸ್ತೂಲು ಇಲ್ಲಿದೆ ಅಂತ ಹೇಳಿದವರ್ಯಾರು?

ಸರೋಜ : ಹಾಸಿಗೆ ಕೆಳಗಿಟ್ಟರೆ ಮಲಗಿದವರಿಗೆ ಗೊತ್ತಾಗೋದಿಲ್ಲವೇನ್ರಿ?

ಸಿದ್ದಲಿಂಗು : ಐದಾರು ದಿನ ಮಲಗಿದ್ದೀರಿ. ನಿನ್ನೆ ಮಾತ್ರ ಗೊತ್ತಾಯ್ತಲ್ಲವ? ನಿನಗೆ ಸರೋಜಾ ಹೇಳಿಲ್ಲಂತ ನನಗ್ಗೊತ್ತು.

ಪ್ರಕಾಶ್ : ಅಷ್ಟೊಂದು ವಿಶ್ವಾಸ ಅಲ್ಲವೆ ಅವಳ ಮೇಲೆ?

ಸಿದ್ದಲಿಂಗು : ಅದನ್ನೇ ಕೇಳ್ತಾ ಇದ್ದೀನಿ. : ವಿಶ್ವಾಸ ಇದೆ ಅಂತ ನಿನಗ್ಯಾರು ಹೇಳಿದ್ದು? ಬಾಯಿ ಬಿಡದಿದ್ದರೆ, ಬಾಯಿ ಬಿಡಿಸೋದು ಹ್ಯಾಗಂತ ನನಗ್ಗೊತ್ತು. ಶ್ರೀಕಾಂತಜೀನ್ನ ಕೊಂದವನಿಗೆ ನೀನು ಈಡಲ್ಲ ಮರಿ. ಬಾಯಿ ಬಿಡು.

ಪ್ರಕಾಶ್ : ಗುಂಡಾಗಿರಿ ಮಾಡ್ತೀರೇನ್ರಿ?

ಸಿದ್ದಲಿಂಗು : ಅದು ನನ್ನ ಕಸಬು. ಅದನ್ನ ಮಾಡೋದಕ್ಕೆ ನೀನೇ ಕೇಳಿಕೊಳ್ತಿದೀಯಾ.

ಪ್ರಕಾಶ್ : ಈ ಕ್ಷಣವೇ ನಿನ್ನನ್ನ ಪೋಲೀಸರಿಗೆ ಕೊಡಬಲ್ಲೆ.

ಸಿದ್ದಲಿಂಗು : ಅಷ್ಟು ಧೈರ್ಯ ಇದೆಯೆ ಬಾ.
*(ಹೋಗಿ ಸಿದ್ದಲಿಂಗು ಫೋನೆತ್ತಿ ಅವನ ಕೈಗೆ ಕೊಡಲು ಹಿಡಿಯುವನು. ಪ್ರಕಾಶ್ ಹೋಗುವುದಿಲ್ಲ.)*
ನಿನಗೆ ಆ ತಾಕತ್ತಿಲ್ಲ ಅಂತ ಗೊತ್ತು. ಈಗ ಬಾಯಿ ಬಿಡತೀಯಾ? ಇಲ್ಲದಿದ್ದರೆ ಹಲ್ಲು ಉದುರಿಸ್ತೀನಿ.
*(ಎನ್ನುತ್ತ ಪ್ರಕಾಶನನ್ನು ಸೋಫಾದ ಮೇಲೆ ನೂಕುವನು. ಪ್ರಕಾಶ್ ಕುಕ್ಕರಿಸಿದವನು ಗಾಬರಿಯಿಂದ ಅವನನ್ನು ನೋಡುವನು.)*

ಸರೋಜ : ಏನ್ರೀ ಇದು?

ಸಿದ್ದಲಿಂಗು : ತಾವು ದಯವಿಟ್ಟು ಬಾಯಿ ಮುಚ್ಚಿಕೋಬೇಕು. *(ಪ್ರಕಾಶನಿಗೆ)* ಹೇಳೋ ಮಹಾ ಕವಿ, ಸುಲಿಯೂ ಸುತ್ತಿಕೊಂಡ ಸುಳ್ಳನ್ನ,ಲ ಭಯವ? ಸತ್ಯನಾ ಹೇಳಲಾ? ನಿನ್ನೆ ಸರೋಜಾ ಇಲ್ಲದೇ ಇದ್ದಾಗ ಯಾವನೋ ಬಂದಿದ್ದ, ನಿಜವ?

ಪ್ರಕಾಶ್ : *(ಗಾಬರಿಯಲ್ಲಿ)* ಹೌದು.

ಸಿದ್ದಲಿಂಗು : ಯಾರು ಬಂದಿದ್ದರು?

ಪ್ರಕಾಶ್ : ಯಾರೋ ಸ್ನೇಹಿತರು ಬಂದಿರಬಹುದು.

ಸಿದ್ದಲಿಂಗು : ಸಾಮಾನ್ಯನಲ್ಲ. ಅಸಾಮಾನ್ಯ ಸ್ನೇಹಿತ ಅವನು.

ಪ್ರಕಾಶ್ : ಇರಬಹುದು.

ಸಿದ್ದಲಿಂಗು : ಆ ಚಾಡಿಕೋರನ ಮಾತನ್ನ ನಂಬತಿ. ಈ ನಿನ್ನ ಅರ್ಧಾಂಗಿಯ ಮಾತನ್ನ ನಂಬೋದಿಲ್ಲ, ಅಲ್ಲವೆ? ನಿನ್ನ ಸ್ನೇಹಿತನಿಗೆ ಅದ್ಯಾಕೋ ನಿನ್ನ ಬಗ್ಗೆ ಮಾತ್ರ ಕಾಳಜಿ ಇದೆ, ಅಲ್ಲವ?

ಪ್ರಕಾಶ್ : ನಿನಗೆ ಸರೋಜಳ ಬಗ್ಗೆ ಮಾತ್ರ ಕಾಳಜಿ ಇದ್ದ ಹಾಗೆ.

ಸಿದ್ದಲಿಂಗು : ನೀನು ಕವಿ ಅಂತ ಗೊತ್ತು ನನಗೆ. ಪ್ರಶ್ನೆಗೆ ಉತ್ತರ ಬೇಕು.

ಪ್ರಕಾಶ : ಉತ್ತರ ಬೇಕಾದ್ದು ನನಗೆ.

ಸಿದ್ದಲಿಂಗು : ಓಹೋ, ನಾನಿನ್ನೂ ನಿನಗೆ ಉತ್ತರ ಕೊಟ್ಟೇ ಇಲ್ಲ; ಅಲ್ಲವ? ನೀನೇನೋ ಬುದ್ಧಿವಂತನೆ, ಆದರೆ ನಿನ್ನ ಬುದ್ಧಿಯೆಲ್ಲ ಬೇರೆಯವರಿಂದ ಬಂದದ್ದು. ಎರವಲು ಬುದ್ಧಿ ಉಪಯೋಗಿಸಿ ಎಷ್ಟೆಷ್ಟು ವಿಚಾರ ಮಾಡ್ತಿಯೋ, ಅಷ್ಟಷ್ಟೂ ನಿನ್ನ ಅಂಗಿ ಕೊಳೆಯಾಗಿ ಕಾಣುತ್ತಪ್ಪ, ಅಂಗಿ ಕೊಳೆಯಾದರೆ ನಿನಗೆ ಅವಮಾನದ ಭಯ, ಅಂತಸ್ತು ಕುಸಿಯುವ ಭಯ, ಹೆಚ್ಚೇನು ನಿನ್ನ ವ್ಯಕ್ತಿತ್ವ ನಿಂತದ್ದೇ ನಿನ್ನ ಈ *(ಸರೋಜಳನ್ನು ತೋರಿಸುತ್ತಾ)* ಟೆರಿಲಿನ್ ಅಂಗೀ ಮೇಲೆ, ನಿನ್ನ ಅರ್ಧಾಂಗೀನ್ನ ಚೆನ್ನಾಗಿ ಇಟ್ಟಕೊಂಡಿದೀಯ; ಬಾಬ್‌ಕಟ್ ಮಾಡಿಸಿದೀಯ, ಹಲೋ ಹೌಡುಯುಡು ಕಲಿಸಿದೀಯ, ಪಾರ್ಟೀಲೀ ಯಾರ್ಯಾರಿಗೋ ಪರಿಚಯಿಸಿ ಹೆಮ್ಮೆ ಪಟ್ಟಿದ್ದೀಯ, ಕ್ಲಬ್ಬಲ್ಲಿ ಸರಿಕರ ಹಸಿದ ಕಣ್ಣು ಇದರ ಬೆನ್ನಿನಿಂದ ಕೆಳಗಿಳಿದಾಗೆಲ್ಲ ಅಸೂಯೆಯಿಂದ ಆನಂದಪಟ್ಟಿದೀಯ ಅದಕ್ಕೊಂದು ಆತ್ಮ ಇದ್ದಿದ್ದರೆ ಆ ಕಥೆ ಬೇರೆ ಇತ್ತು.

ಪ್ರಕಾಶ್ : ನನಗೆ ನೇರ ಉತ್ತರ ಬೇಕು.

ಸಿದ್ದಲಿಂಗು : ಅದನ್ನೇ ಹೇಳ್ತಾ ಇದ್ದೀನಿ. ಮುಚ್ಚಿಕೊಂಡು ಕೇಳು. ಈ ಗೊಂಬೇನ್ನೋಡಿ ಬೇರೆಯವರು ನಿನ್ನ ಬಗ್ಗೆ ಅಸೂಯೆ ಪಡಬೇಕೂಂತ ನಿನ್ನಾಸೆ. ನಿನಗೆ ನಿರಾಸೆ ಮಾಡ್ತಾ ಇರೋದಕ್ಕೆ ಕ್ಷಮಿಸು, ನನ್ನಲ್ಲಂಥ ಅಸೂಯೆ ಇಲ್ಲ. ನನ್ನಂಥವನ ಒಂದು ಒದ್ದೆ ಕನಸಿಗೂ ಲಾಯಖ್ಖಾದವಳಲ್ಲ ನಿನ್ನ ಹೆಂಡತಿ! ಯಾಕೆಂದರೆ ನಿನ್ನ ಹಾಗೆ ಅವಳಲ್ಲಿಯೂ ಆತ್ಮ ಇಲ್ಲ. ಕೇಳು! ಶ್ರೀಕಾಂತಜೀನ್ನ ಕೊಂದ ದಿನ ನಾನು ಇಲ್ಲಿಗೆ ಬಂದದ್ದು ನಿಜ. ನಿನ್ನ ಹೆಂಡತೀನ್ನ ಹೆದರಿಸಿದ್ದೂ ನಿಜ,ನೀನು ಹಾಲ್‌ನಲ್ಲಿ ಶ್ರೀಕಾಂತಜೀ ಕೊಲೆ ಸುದ್ದಿ ಹೇಳೋವಾಗ ನಿನ್ನ ಬೆಡ್ ರೂಮಿನಲ್ಲಿದ್ದೆ ನಾನು. ಆ ವಿಷಯ ಸರೋಜಾ ನಿನಗೆ ಹೇಳದೇ ಇರೋದಕ್ಕೆ ಕಾರಣನಾನು, ಯಾಕೆಂದರೆ ಅವಳು ಹೇಳಿದ್ದರೆ ನಿನ್ನ ಕೊಲೆ ಮಾಡ್ತೀನಂತ ನಾನೇ ಹೆದರಿಸಿದ್ದೆ, ಅಷ್ಟೇ ಅಲ್ಲ ಕೇಳು; ಆಗೇನಾದರೂ ನೀನು ಸಾಹಸ ಮಾಡಿದ್ದರೆ ನಿನ್ನನ್ನು ಕೊಂದೂ ಬಿಡುತ್ತಿದ್ದೆ, ಆಮೇಲೂ ಹೇಳಿದರೆ ನಿನ್ನ ಗಂಡ ಆಫೀಸಿನಿಂದ ವಾಪಸ್ ಬರೋದಿಲ್ಲ ಅಂತ ಹೇಳಿದ್ದೆ. *(ಪ್ರಕಾಸ್ ಏನೋ ಕೇಳಬೇಕೆಂದು ಪ್ರಯತ್ನಿಸುತ್ತಾನೆ)* ನೀನೇನು ಕೇಳಬೇಕಂತಿದ್ದೀ ನನಗ್ಗೊತ್ತು ಈ ಕಥೆಯನ್ನ ಹ್ಯಾಗೆ ನಂಬಲಿ-ಅಂತ ತಾನೆ.

ಪ್ರಕಾಶ್ : ಹೌದು.

ಸಿದ್ದಲಿಂಗು : ನಂಬೋದು ಬಿಡೋದು ನಿನ್ನ ಕರ್ಮ. ನನ್ನಲ್ಲಿರೋ ಸತ್ಯ ಹೇಳಿಯಾಯ್ತು. ಈಗ ನೀನು ಬಿಚ್ಚಬೇಕು.ಪಿಸ್ತೂಲು ಇಲ್ಲಿದೆದ ಅಂತ ನಿನಗೆ ಹ್ಯಾಗೆ ಗೊತ್ತಾಯ್ತು?

ಪ್ರಕಾಶ್ : ಹ್ಯಾಗಂದರೆ ನನಗೆ ಕಣ್ಣಿಲ್ಲವ?

ಸಿದ್ದಲಿಂಗು : ಮತ್ತೆ ಮತ್ತೆ ದಾಸಯ್ಯನ ಹಾಗೆ ಅದನ್ನೇ ಹಾಡಬೇಡ. ಕೊನೇ ಸಲ ಕೇಳತೇನೆ ಹೇಳದಿದ್ದರೆ ಮುಂದಿನ ಅನಾಹುತಕ್ಕೆ ನೀನೇ ಕಾರಣ. ನಾನೂ ಕವಿಯೆ, ನನ್ನಲ್ಲಿ ಕೋಪ ಇದೆ. ಆದರೆ ನಾನು ನಿನ್ನಷ್ಟು ದೊಡ್ಡ ಕವಿಯಲ್ಲ. ನೀನೋ ಸಿಹಿಯಾದ ಭ್ರಾಂತಿಗಳನ್ನುಂಡು ಸಕ್ಕರೆ ಕಾವ್ಯ ಬರೆಯೋನು ನಿನ್ನ ಕಾವ್ಯ ಕೀರ್ತಿಯಾಗಿ, ಘೋಷಣೆಯಾಗಿ, ಸಾಪ್ತಾಹಿಕ ಪುರವಣಿಗಳಲ್ಲಿ ವಿಜೃಂಭಿಸುತ್ತದೆ, ನನಗೆ ಆ ಭಾಗ್ಯ ಇಲ್ಲಪ್ಪ. ನನ್ನ ಕಾವ್ಯ ಇನ್ನೊಬ್ಬರ ಕಿವಿ ಒಳಗಡೆ ಇಳಿಯೋದೇ ಇಲ್ಲ. ಅದಕ್ಕೇ ನಾನು ಬರೀಲಿಲ್ಲ. ಆದರೂ ಒಬ್ಬ ಮಹಾಕವಿ ಮತ್ತು ಒಬ್ಬ ಮರಿ ಕವಿಯ ಚಾರಿತ್ರಿಕ ಭೇಟಿ ಇದು, ಕವಿಗೆ ಕವಿ ಸುಳ್ಳು ಹೇಳಬರದು. ನನ್ನ ಪಾಲಿನ ಮರಿ ಸತ್ಯ ಹೇಳಿದ್ದಾಯ್ತು. ಅದರಲ್ಲಿ ನಿಮ್ಮಿಬ್ಬರ ಸಂಬಂಧದ ಗುಟ್ಟು ಮಾತ್ರ ಇತ್ತು. ಆದರೆ ನೀನು ಮಹಾಕವಿ ಹೇಳೋ ಸತ್ಯದಲ್ಲಿ ದೊಡ್ಡ ಗುಟ್ಟಿರಬಹುದು, ಹೇಳು.

ಪ್ರಕಾಶ್ : ಈ ಸಮಸ್ಯೆ ಇರೋದು ನಿಮ್ಮಿಬ್ಬರ ಸಂಬಂಧದದ ಬಗ್ಗೆ. ನೀವಿಬ್ಬರೂ ಇಲ್ಲಿದ್ದೀಋಇ, ಮೂರನೆಯವ ಯಾಕೆ ಬೇಕು?

ಸಿದ್ದಲಿಂಗು : ಯಾಕೆಂದರೆ ಆ ಮೂರನೆಯಾತ ಇಲ್ಲಿದ್ದಾನೆ. ನೀನು ಉಸಿರಾಡ್ತ ಇರೋದು ನಿನ್ನ ಕಿವಿಯಲ್ಲಿ ಆತ ಊದಿದ ಗಾಳಿಯನ್ನ, ನಿನ್ನೊಳಗಿರೋ ಆ ಪ್ರೇತದ ಉಸಿರನ್ನ ಜಾಸ್ತಿ ಹೊತ್ತು ಕುಡೀಲಾರೆ ನಾನು. ಬೇಗ ಹೇಳು.

ಪ್ರಕಾಶ್ : ಹೇಳೋದಿಲ್ಲ.

ಸಿದ್ದಲಿಂಗು : ಹೇಳೋದಿಲ್ಲವ? *(ಉಕ್ಕಿ ಬಂದ ಸಿಟ್ಟನ್ನು ನಿಯಂತ್ರಿಸಿಕೊಳ್ಳುತ್ತ)* ಒಂದು ಜೋಕ್ ಹೇಳಿ ನಿನ್ನ ನಗಿಸಲಾ ಕವಿ? - ನೀನೊಬ್ಬ ವಂಚಕ. ಇದು ಜೋಕು; ತಾವೂ ನಗಬೇಕು.

ಪ್ರಕಾಶ್ : ಸಣ್ಣ ಮನುಷ್ಯ ಸ್ವಾಮೀ ನಾನು; ಇಂಥಾ ದೊಡ್ಡ ಜೋಕಿಗೆ ಹ್ಯಾಗೆ ನಗಲಿ?

ಸಿದ್ದಲಿಂಗು : ನಿನ್ನಿಂದ ಅದೂ ಸಾಧ್ಯವಿಲ್ಲ. ನೀನು ಯಾರದೋ ಹೆಸರನ್ನ ಬಚ್ಚಿಟ್ಟುಕೊಂಡು ಸರೋಜಾಗೆ ಮೋಸ ಮಾಡಬಹುದಂತೆ. ನಿನ್ನ ಜೀವಕ್ಕಾಗಿ ಅವಳು ನನ್ನ ಹೆಸರ್ಹೇಳಲಿಲ್ಲ. ಅದು ನಿನಗೆ ದೊಡ್ಡ ಮೋಸವಾಗಲಿ ಕಂಡಿತಲ್ಲವ? ಆತ ನಿನಗೆ ಪೋಲೀಸರ ಭಯ ಹಾಕಿರಬಹುದು. ಅಥವಾ ನಾನು ಮತ್ತು ಆತ-ಇಬ್ಬರಲ್ಲಿ ಯಾರಿಗೆ ದ್ರೋಹ ಮಾಡಿದರೆ ನಿನಗೆ ಹೆಚ್ಚು ಲಾಭ-ಅಂತ ಯೋಚಿಸಿರಬಹುದು. ಹೆಂಡತಿ ಮತ್ತು ಕಾವ್ಯ ನಿನ್ನ ಮರ್ಮಸ್ಥಳ ಅಂದುಕೊಂಡಿದ್ದೆ, ಕೆರಿಯರೊಂದೇ ನಿನ್ನ ಮರ್ಮಸ್ಥಳ ಕಣೊ, ಅದನ್ನೀಗ ಜಡೀತೇನೆ. ಹೇಳು, ಯಾರು ಬಂದಿದ್ದರು?

ಪ್ರಕಾಶ್ : *(ಮೌನ)*

ಸಿದ್ದಲಿಂಗು : ಹೇಳೋದಿಲ್ಲವ?
*(ರಭಸದಿಂದ ಪ್ರಕಾಶನ ಕೆನ್ನೆಗೆ ಬಾರಿಸುವನು. ಪ್ರಕಾಶ್ ಏಟು ತಾಳಲಾರದೆ ಕುಸಿಯುವನು. ಸರೋಜಾ ಓಡಿಹೋಗಿ ಇಬ್ಬರ ಮಧ್ಯೆ ನಿಂತು.)*

ಸರೋಜ : *(ಗಾಬರಿಯಿಂದೇಳುತ್ತ)* ಏನ್ರೀ ನೀವು ಮಾಡ್ತಿರೋದು?

ಸಿದ್ದಲಿಂಗು : ಅನ್ಯಾಯವಾಗ್ತಿರೋದು ನಿನಗೆ, ನೀನು ಬಾಯಿಮುಚ್ಚಿ ಕೂತಿರಬೇಕು ಸ್ವಲ್ಪ
ಹೊತ್ತು. *(ಅವಳನ್ನು ನಿವಾರಿಸಿ ಮತ್ತೆ ಪ್ರಕಾಶನ ಮೇಲೇರಿ ಹೋಗಿ)* ಹೇಳೋದಿಲ್ಲವಾ

ಪ್ರಕಾಶ್ : *(ಗಾಬರಿಯಿಂದ)* ಹೇಳತೀನಿ.

ಸಿದ್ದಲಿಂಗು : ಹೇಳು.

ಪ್ರಕಾಶ್ : ರು...ರುದ್ರಪ್ಪ ಬಂದಿದ್ದರು!
*(ಸಿದ್ಧಲಿಂಗು, ಸರೋಜಾ ಇಬ್ಬರಿಗೂ ದಿಗಿಲಾಗುತ್ತದೆ.)*

ಸಿದ್ದಲಿಂಗು : ಯಾವ ರುದ್ರಪ್ಪ; ವಿರೋಧ ಪಕ್ಷದ ಲೀಡರ್ ರುದ್ರಪ್ಪನ?

ಪ್ರಕಾಶ್ : ಹೌದು

ಸಿದ್ದಲಿಂಗು : ನಿಜ ಹೇಳು. ಸುಳ್ಳಿಗೆ ನಾ ಕೇಳೋ ಬೆಲೆ ಜಾಸ್ತಿ; ನಿನ್ನ ಪ್ರಾಣ ಕೊಡಬೇಕಾದೀತು.

ಪ್ರಕಾಶ್ : ನಿಜ, ನಿಜ, ನಿಜ ಅವರಿದ್ದಾಗಲೇ ಈ ಮನೆ ಹುಡುಕಿದ್ದು, ಹಾಸಿಗೆ ಕೆಳಗೆ ಪಿಸ್ತೂಲು ಸಿಕ್ಕಿದ್ದೂ ಅವರಿದ್ದಾಗಲೇ ನಿಮ್ಮಿಬ್ಬರಿಗೂ ತನ್ನ ಹೆಸರನ್ನ ಹೇಳಕೂಡದೆಂತಲೂ ಅವನೇ ಹೇಳಿದ್ದು.
*(ಈಗ ಮೂವರೂ ಸ್ತಬ್ಧರಾಗುತ್ತಾರೆ. ಸಿದ್ದಲಿಂಗೂನ ಮುಖದಲ್ಲಿ ಆತಂಕ ಚಿಂತೆಗಳಿದ್ದರೆ, ಸರೋಜಾ ತನ್ನ ಪಾಡಿಗೆ ತಾನು ಹಿಂದಿನ ಘ ಟನೆಗಳನ್ನು ತಾಳೆ ಹಾಕುತ್ತಿದ್ದಾಳೆ. ಪ್ರಕಾಶ್ ಸಿದ್ದಲಿಂಗೂನ ಮುಖವನ್ನೇ ನೋಡುತ್ತಿದ್ದಾನೆ.)*

ಸಿದ್ದಲಿಂಗು : ನಿಮ್ಮ ಮನೆಯಲ್ಲಿ ಸಿಗರೇಟು ತುಂಡು ಬೀಳುತ್ತವೆ?

ಸರೋಜ : ಹೌದು.

ಸಿದ್ದಲಿಂಗು : ಬಹುಶಃ ನೀವು ಫೋನ್ ಬಿಲ್ ಕಟ್ಟಿಲ್ಲ. ಆದರೆ ಫೋನ್ ಬಿಲ್ ಬಂದೇ ಇಲ್ಲ, ಅಲ್ಲವ?

ಸರೋಜ : ಹೌದು.

ಸಿದ್ದಲಿಂಗು : *(ಪಶ್ಚಾತ್ತಾಪದಿಂದ ಕುಸಿಯುತ್ತಾ)* ಛೇ, ಇದು ರುದ್ರಪ್ಪನ ಖಾಸಗಿ ಆಫೀಸಂತ ಗೊತ್ತಾಗಲೇ ಇಲ್ಲ.

ಪ್ರಕಾಶ್ : ಅಂದರೆ?

ಸಿದ್ದಲಿಂಗು : ಅಂದರೆ ನೀವಿಬ್ಬರೂ ಆಫೀಸಿಗೆ ಹೋದಾಗ ಈ ಮನೆಯನ್ನಾತ ತನ್ನ ಖಾಸಗಿ ಆಫೀಸಿನ ಥರ ಉಪಯೋಗಿಸ್ತಿದಾನೆ ಅಂತ.

ಸರೋಜ : ಬಾಗಿಲು ಕೀಲಿ ಹಾಕಿರೋದಿಲ್ಲವ?

ಸಿದ್ದಲಿಂಗು : ನಾನು ಬಂದ ಹಾಗೆ ಕಿಟಕಿಯಿಂದ ಹಾರಿ ಬರಬಹುದು. ಅಥವಾ ಆತ ದಾರಿಯಿಲ್ಲದಲ್ಲಿ ದಾರಿ ಹುಡುಕಬಲ್ಲ. ಅಥವಾ ದಾರಿ ಇಲ್ಲವೇ ಇಲ್ಲ ಅನ್ನೋಣ. ಗಾಳಿಗುಂಟ ಬಂದು ನಿಮ್ಮ ಮನೆ ಮತ್ತು ಮನಸ್ಸನ್ನ ಆಕ್ರಮಿಸಬಲ್ಲ, ಎಂಥಾ ಮೂರ್ಖ ಕವಿ ನೀನು! ಆ ಚಂಡಾಲ ರುದ್ರಪ್ಪನ ಮಾತನ್ನ ನಂಬಿದೆ; ನಿನ್ನ ಹೆಂಡತೀನ್ನ ನಂಬಲಿಲ್ಲ, ಅಲ್ಲವೆ? ಈ ಊರ್ನಲ್ಲಿ ಅವನ ಇಂಥ ಆಫೀಸುಗಳ ಗುಟ್ಟು ಗೊತ್ತಿತ್ತು ನನಗೇ ಇದೊಂದನ್ನ ಬಿಟ್ಟು.

ಪ್ರಕಾಶ್ : ಅವನಿಗೇನು ಮನೆ ಇಲ್ಲವೆ? ಆಫೀಸಿಲ್ಲವೆ? ಎಲ್ಲ ಬಿಟ್ಟು ನನ್ನ ಮನೆಯನ್ನ, ಅದೂ ಕಳ್ಳನ ಹಾಗೆ ಬಂದು ಉಪಯೋಗಿಸ್ತಾನೆ ಅಂದರೆ….ನಾನಿದನ್ನ ನಂಬೋದಿಲ್ಲ.

ಸಿದ್ದಲಿಂಗು : ರಾಜಕೀಯದ ರಹಸ್ಯಗಳನ್ನ ಒಬ್ಬನೇ ಬಲ್ಲವನ ಹಾಗೆ ಒದರಬೇಡ. ನಿಮ್ಮಂಥಾ ಮಧ್ಯಮ ವರ್ಗದ ಬಕರಾಗಳ ಮನೆ ಬೇಕವನಿಗೆ. ಯಾಕೆಂದರೆ ಚಂಡಾಲ ಕೆಲಸ ಮಾಡೋದಕ್ಕೆ. ನಾನು ಮತ್ತು ಅವನು ಸೇರಿ ಶ್ರೀಕಾಂತಜೀನ್ನ ಕೊಲೆ ಮಾಡೋದಕ್ಕೆ ಹೊಂಚಿದ್ದು ಇಂಥಾದ್ದೊಂದು ಮನೆಯಲ್ಲಿ. ಆ ಮನೆ ಬಕರಾ ನಿಮ್ಮ ಹಾಗೆ ಆಫೀಸಿಗೆ ಹೋದ ಸಮಯದಲ್ಲಿ. ಅವರ ಮನೆಯಲ್ಲೂ ಸಿಗರೇಟು ತುಂಡು ಬೀಳುತ್ತವೆ. ಆಗಾಗ ಖಾಲಿ ಬಾಟ್ಲಿ ಕೂಡ. ಫೋನಿಲ್ಲ ಅಷ್ಟೆ. ಥೂ ನಿಮ್ಮ ದಡ್ಡತನಕ್ಕೆ ನನಗೆ ಹೇಸಿಗೆ ಕೂಡ ಬರ್ತಾ ಇಲ್ಲ.
*(ಈ ತನಕ ಚಕಿತಳಾಗಿ ಇವರ ಸಂಭಾಷಣೆ ಕೇಳುತ್ತಿದ್ದ ಸರೋಜಾಳ ದುಃಖದ ಕಟ್ಟೆ ಒಡೆದು ಅಳುವಾಗಿ ಹೊಮ್ಮುತ್ತದೆ.)*

ಸರೋಜ : ನಾಶ ನಾಶ ಸತ್ಯನಾಶವಾಯ್ತು. ಹಾಳಾದ್ವಿ ಪ್ರಕಾಶ್, ನಾವು ಹಾಳಾದ್ವಿ. ನನ್ನ ಹತ್ರಾನೂ ಆ ಶನಿ ರುದ್ರಪ್ಪ ಬಂದಿದ್ದ.

ಪ್ರಕಾಶ್ : ಯಾವಾಗ ಬಂದಿದ್ದ?

ಸರೋಜ : ಮೊನ್ನೆ ನೀವು ಕಾಲೇಜಿನಲ್ಲಿದ್ದಾಗ.

ಸಿದ್ದಲಿಂಗು : ಹಾಗಿದ್ರೆ ನೀನು ಪ್ರಕಾಶನಿಂದ ಬಚ್ಚಿಟ್ಟುಕೊಂಡ ಖಾಸಗಿ ಗುಟ್ಟಿರಬೇಕು.

ಸರೋಜ : ಹೌದು ಈ ಹಾಳಾದ ಬಳೆ ಉಮಾ ಗೋಲ್ಡಂತ ಪ್ರಕಾಶ್ ನಿನಗೆ ಸುಳ್ಳು ಹೇಳಿದೆ, ಆದರಿದು ಚಿನ್ನದ್ದು. ನಿಮಗೊತ್ತಾಗದ ಹಾಗೆ ಸಾಲ ಮಾಡಿ ತಂದಿದ್ದೆ.

ಸಿದ್ದಲಿಂಗು : ಅದು ಅವನಿಗೆ ಗೊತ್ತಾಗಿ ಬ್ಲಾಕ್ ಮೇಲ್ ಮಾಡಿದ.

ಸರೋಜ : ಹೌದು, ಪ್ರಕಾಶ್ ಮುಂದೆ ನಾನು ಬಂದದ್ದನ್ನು ಹೇಳಿದರೆ ಸಂಸಾರ ಹಾಳಾಗ್ತದೆ, ಹೇಳಬೇಡ ಅಂದ...ಅಯ್ಯೋ ಎಷ್ಟು ಕಷ್ಟಪಟ್ಟೆ,
*(ಈಗ ಅವನಿಗೆಲ್ಲಾ ನಿಚ್ಚಳವಾಗಿ ಹೊಳೆಯುತ್ತದೆ, ಆದರೂ ಕೆಲವು ಅನುಮಾನಗಳೊಂದಿಗೆ)*

ಪ್ರಕಾಶ್ : ನಮ್ಮಿಬ್ಬರ ಮಧ್ಯೆ ಜಗಳ ತಂದಿಟ್ಟ ನಿಜ, ಅವನಂದುಕೊಂಡಂತೆ ಜಗಳಾಡಿ ನಾವು ದೂರಾದಿವಿ ಅಂತಲೆ ಇಟ್ಕೊಳ್ಳೋಣ ಇದರಿಂದ ಅವನಿಗೇನು ಲಾಭ?

ಸಿದ್ದಲಿಂಗು : ನಿಮ್ಮಿಬ್ಬರಲ್ಲಿ ಕ್ಷಮೆ ಕೇಳಿಕೊಳ್ತೇನೆ : ತಪ್ಪು ನಂದೂ ಇದೆ. ಪ್ರಕಾಶ್ ಬಹುಶಃ ನಾನು ಆ ದಿನ ನಿಮ್ಮ ಮನೆಯಲ್ಲಿ ಬಚ್ಚಿಟ್ಟುಕೊಳ್ಳದಿದ್ದರೆ ನಿಮಗೆ ತೊಂದರೆ ಇರುತ್ತಿರಲಿಲ್ಲ. ಯಥಾಪ್ರಕಾರ ಅವನು ಆಗಾಗ ಬರುತ್ತಿದ್ದ, ಹೋಗುತ್ತಿದ್ದ. ನೀವು ನೆಮ್ಮದಿಯಿಂದಲೇ ಇರುತ್ತಿದ್ದಿರಿ,-ಒಮ್ಮೊಮ್ಮೆ ಸಿಗರೇಟಿನ ತುಂಡು ಸಿಕ್ಕರೂ, ಬಿಲ್ ಕಟ್ಟದ ಫೋನಿದ್ದರೂ. ನಿಮ್ಮ ಮೂಲಕ ನನ್ನನ್ನು ಹಿಡಿಯುವ ಉದ್ದೇಶ ಆತನದಿರಬೇಕು.

ಸರೋಜ : *(ಕನಲಿ)* ನಮ್ಮ ಮನೆ ವ್ಯವಹಾರ ನಾವು ನೋಡಿಕೊಳ್ಳುತ್ತಿದ್ವಿ. ಬಚ್ಚಿಟ್ಟು ಕೊಳ್ಳೋದಕ್ಕೆ ನಮ್ಮ ಮನೇನೆs ಸಿಕ್ಕಿತಾ ನಿನಗೆ? ಇನ್ನೆಲ್ಲಾದರೂ ಯಾಕೆ ಹಾಳಾಗಿ ಹೋಗಲಿಲ್ಲ.

ಪ್ರಕಾಶ್ : ನನ್ನನ್ನು ಜೇಲಿಗೆ ಕಳಸಿಬೇಕಂತ ಹೊಂಟಿದ್ದೇನಪ್ಪಾ? ಅಂಥಾದ್ದೇನು ನಾನು ನಿನಗೆ ಮಾಡಿದ್ದು? ಶ್ರೀಕಾಂತಜೀ ಕೊಲೆಗಾರನಿಗೆ ಆಶ್ರಯ ಕೊಡೋದು ಅಂದ್ರೆ ಸಣ್ಣ ಮಾತಾಯ್ತಾ? ಕೊಲೆಯಲ್ಲಿ ನಾನೂ ಷಾಮೀಲಾಗಿದ್ದೆ ಅಂತ ತಾನೆ ಅದರರ್ಥ? ತುಂಬ ಉಪಕಾರ ಮಾಡಿದೆ ಮಾರಾಯ, ಕವಿಯಾಗಿ ಖ್ಯಾತನಾಗಲಿಲ್ಲ, ನಿನಗೆ ಆಶ್ರಯ ಕೊಟ್ಟೆವಲ್ಲ. ಈಗ ತಗಳಪ್ಪ,-ಇಡೀ ದೇಶದ ತುಂಬ ನನ್ನ ಕೀರ್ತಿ! ಈ ಟೆನ್‌ಷನ್ನು ಈ ಗೋಳು ಥೂ! ನಿಮ್ಮ ನಿಮ್ಮ ರಾಜಕೀಯದ ತೀಟೆಗೆ ನಾವು ಬಲಿಪಶುಗಳಾಗಬೇಕು, ಅಲ್ಲವೆ?

ಸಿದ್ದಲಿಂಗು : ಸಿಟ್ಟಾಗಬೇಡ ಕವಿ, ನಾನೂ ನಿನ್ನ ಹಾಗೆ ಬಲಿಪಶು. ದೇವತೆಯೊಬ್ಬ ದೂರದಲ್ಲಿ ನಿಂತುಕೊಂಡು ನಮ್ಮ ಮೂವರ ಸೂತ್ರಗಳನ್ನು ಆಡಿಸ್ತಿದಾನೆ ಗೊತ್ತಾ? ದಪ್ಪ ಹೊಟ್ಟೆಯ ಆ ದೇವರು ಉಪ್ಪರಿಗೆಯ ಮನೆಯಲ್ಲಿದ್ದಾನೆ. ಸ್ಲಮ್ಮಿನ ಬಡವರು ಬಾಡಿಗೆ ಮನೆ ಮಧ್ಯಮವರ್ಗದವರು ಎರಡೂ ಇಲ್ಲದೆ ಬೀದಿ ಪಾಲಾದವರು- ಇವರೆಲ್ಲ ಆತನ ಒಕ್ಕಲು. ಭಕ್ತರನ್ನಾತ ಹೆದರಿಸ್ತಾನೆ, ಇಲ್ಲ ತಬ್ಬಿಕೊಳ್ತಾನೆ. ಹೆದರಿಸಿದಾಗ ಕುರಿಯಾಗ್ತೀವಿ. ತಬ್ಬಿಕೊಂಡಾಗ ಕೋಳಿಗಳಾಗತೀವಿ. ಕುರಿ ಕೋಳಿ ಎರಡರಿಂದಲೂ ಪಲಾವ್

ಮಾಡಿಕೊಂಡು ತಿಂತಾನೆ. ಆ ದೇವರು ನಿನ್ನನ್ನು ಎಷ್ಟು ಚೆನ್ನಾಗಿ ಬಲ್ಲ ನೋಡು, ಆತನ ಹೆಸರು ಕೇಳೋ ಕುತೂಹಲ ಕೂಡ ನಿನ್ನಲ್ಲಿಲ್ಲ. ಬಹುಶಃ ನನ್ನ ಕಾವ್ಯ ಶಕ್ತಿಗೆ ನೀನು ಅಸೂಯೆ ಪಡುತ್ತಿರಬಹುದು.

ಪ್ರಕಾಶ್ : ನನಗಿನ್ನೂ ಅರ್ಥವಾಗಲಿಲ್ಲ.

ಸಿದ್ಧಲಿಂಗು : ಅರ್ಥವಾಗೋದೂ ಇಲ್ಲ. ಅದಕ್ಕೇ ಬಕರಾ ಅನ್ನೋದು. ಆ ದೇವರು ಮೇಲಿದ್ದು ಕೊಂಡೇ ಕಾಲ ಕಾಲಕ್ಕೆ ಮಳೆ ಬೆಳೆ, ಸಮ ಹವಮಾನ, ಹಸಿರು ಹುಲ್ಲು ಚೆಲ್ಲುತ್ತಾ ನಮ್ಮನ್ನ ಬೆಳೆಸ್ತಾನೆ. ಯಾವುದೋ ಕುರಿ ಚೆನ್ನಾಗಿ ಕೊಬ್ಬಿದೆ ಅನ್ನು, ತಿನ್ನಬೇಕನಿಸ್ತದೆ. ಮೊದಮೊದಲು ಸಿಗರೇಟು ತುಂಡು ಚೆಲ್ಲಿ ಕೃಪೆ ತೋರುತ್ತಾನೆ. ಬರ್ತಾ ಬರ್ತಾ ಖಾಲಿ ವಿಸ್ಕಿ ಬಾಟ್ಲಿ ಬೀಳುತ್ತವೆ. ಅಷ್ಟಾದರೆ ನಿಮ್ಮ ಮೇಲೆ ದೇವರ ಕೃಪೆ ಸಂಪೂರ್ಣವಾಗಿ ಆಗಿದೆ ಅಂತ ಅರ್ಥ. ನೀನೊಬ್ಬ ಕವಿ. ಆ ದೇವರ ನೆರಳಿನಲ್ಲೇ ಬದುಕುತ್ತಾ ಅವನು ಪ್ರಾಂಪ್ಟ್ ಮಾಡಿದ್ದನ್ನೇ ಪದ್ಯ ಬರೆಯುತ್ತಾ-ನನ್ನದು ಸ್ವತಂತ್ರ ಧ್ವನಿ ಅಂತ ಭ್ರಮೆಯಲ್ಲಿ ಕೊಬ್ಬಿ ಬಲೂನಾದವನು.

ಪ್ರಕಾಶ್ : ನನ್ನ ಕಾವ್ಯ ಏನೂಂತ ನನಗ್ಗೊತ್ತಪ್ಪಾ. ಒಬ್ಬ ಕೊಲೆಗಾರನಿಂದ ನಾನು ಬರೆಯೋದನ್ನ ಕಲೀಬೇಕಾದ್ದಿಲ್ಲ.

ಸಿದ್ಧಲಿಂಗು : ನೀನು ಕಲೀಬೇಕಾದ್ದಿದೆ, ಅಷ್ಟೇ ಅಲ್ಲ, ಕಲಿಸಬೇಕಾದ್ದು ನನ್ನಲ್ಲಿದೆ. ಕಾವ್ಯದ ಗುಟ್ಟನ್ನು ಹೇಳ್ತೇನೆ ಬೇಕಾದ್ರೆ ನೋಟ್ಸ್ ಮಾಡಿಕೊ ಕವಿ. ನಿನ್ನ ಕಾವ್ಯ ಸ್ವಂತ ನಿನ್ನಿಂದ ಸುರುವಾಗಬೇಕಿತ್ತು, ನೀನು ಯಾವ ಜನಗಳ ಮಧ್ಯೆ ಇದ್ದಿಯೋ ಆ ಜನಗಳಿಂದ ಸುರುವಾಗಬೇಕಿತ್ತು. ಆ ಜನ ಜೀವನ ಅಂದರೆ ಹೊಟ್ಟೆಗಿಂತ ದೊಡ್ಡದು ಅಂತ ಗೊತ್ತಿಲ್ಲದವರು. ಇವರ ಬಗ್ಗೆ ನಿನ್ನ ಕಾವ್ಯ ಕನ್ನಿಕೆ ಎಂದೂ ಕಳವಳ ಪಡೋದಿಲ್ಲ. ಆ ಜನ ಹೊಟ್ಟೆಗಾಗಿ ರುದ್ರಪ್ಪನ ಮಾತಿನ ಮೋಡಿಗೆ ಕಿವಿಯಾದವರು, ಅವನ ಕಾರುಬಾರು ವೈಭವದ ಬಣ್ಣಗಳಿಗೆ ಕಣ್ಣಾದವರು. ದಡ್ಡತನ ಮತ್ತು ಮುಗ್ಧತೆಗಳಿಂದ ಆತನ ಒಕ್ಕಲಾದವರು. ಆತನ ಹರಕೆಯ ಕುರಿಗಳಾದವರು. ಈ ಬಗ್ಗೆ ನಿನ್ನ ಕಾವ್ಯ ಕನ್ನಿಕೆಗೆ ಕೋಪವಿಲ್ಲ, ಕೇಳು ಕವಿ : ನಿನ್ನ ಕಾವ್ಯ ಕಾವ್ಯವೇ ಆಗಿದ್ದರೆ ಈ ಗೋಳಿನಿಂದ ಸುರುವಾಗಬೇಕಿತ್ತು. ಆದರೆ ಎಷ್ಟು ಬೆಂಕಿ ಹಾಕಿದರೂ ಕುದಿಕಯಲಾರದ ಕವಿ ನೀನು, ಮಧ್ಯಮ ವರ್ಗದ ಸಣ್ಣ ಸಮಾಧಾನಗಳಲ್ಲಿ ಬೆಳೆದವನು. ನಿನಗೆ ರುದ್ರಪ್ಪನ ತಾರತಮ್ಯ ಬೇಕು. ಈ ವ್ಯವಸ್ಥೆ ಬೇಕು, ನಾಳೆ ರುದ್ರಪ್ಪ ಮುಖ್ಯಮಂತ್ರಿಯಾಗುತ್ತಾನೆ. ಅವನ ವೈಭವ ನೋಡಿ ನೀನು ಬೆರಗಾಗ್ತೀಯ. ಅವನಿಂದ ಹ್ಯಾಗೆ ಪ್ರಯೋಜನ ಪಡಿಯಬೇಕಂತ ಚಿಂತನೆ ಮಾಡ್ತೀಯ, ಯಾವುದೋ ಪ್ರತಿಷ್ಠಾನ, ಇಲ್ಲ ಮಂಡಳಿಗೆ, ಇಲ್ಲ ಬೋರ್ಡಿಗೆ ಅಧ್ಯಕ್ಷನಾಗಬೇಕಂತ ಹೊಂಚ್ತೀಯಾ. ಗೊತ್ತೋ ರಾಜ ನಿನ್ನ ಕನಸಿನ ಯೋಗ್ಯತೆ.
*(ಪ್ರಕಾಶ್ ಈ ಮಾತುಗಳಿಂದ ನೋಯುತ್ತಾನೆ. ಸಿದ್ಧಲಿಂಗು ಹೇಳಿದ ಸತ್ಯದ ಖಾತ್ರಿಯಾದರೂ ಹೊರಗಡೆ ಒಪ್ಪಿಕೊಳ್ಳದೆ ಮಾತು ಮುಂದುವರೆಸುತ್ತಾನೆ.)*

ಪ್ರಕಾಶ್ : ಆಯ್ತು ಸ್ವಾಮಿ. ಉಪದೇಶ ಮಾಡಿದಿರಿ. ದೇಶದ ಬಗ್ಗೆ ನಮ್ಮ ಕಾಮನ್‌ಸೆನ್ಸ್ ಜಾಸ್ತಿ ಮಾಡಿದಿರಿ. ನಾವು ಬರೀ ಬಲಿಪಶುಗಳು, ನಿಮ್ಮ ಭಾಷಣಕ್ಕೆ ಯೋಗ್ಯರಲ್ಲ ಅಂತ ಗೊತ್ತಾಯ್ತಲ್ಲ? ಇನ್ನಾದರೂ ನಮ್ಮ ಪಾಡಿಗೆ ನಮ್ಮನ್ನ ಬಿಟ್ಟು ತಾವು ಹೋಗಬಹುದಲ್ಲ?

ಸಿದ್ಧಲಿಂಗು : ನೋಯಿಸಿದ್ದರೆ ಕ್ಷಮಿಸು ಕವಿ. ನಿಮ್ಮನ್ನ ನೋಯಿಸೋದು ನನ್ನ ಮನಸ್ಸಲ್ಲಿರಲಿಲ್ಲ. ನನ್ನಿಂದಾಗಿ ನಿಮ್ಮಿಬ್ಬರ ಸಂಶಾರ ಹಾಳಾಗಬಾರದಂತ ಕಾಳಜಿಯಿಂದ ಬಂದೆ,

ಪ್ರಕಾಶ್ : ನಿಮ್ಮಂಥ ದೊಡ್ಡ ಮನುಷ್ಯನಿಗೆ ನಮ್ಮಂಥ ಸಣ್ಣ ಜನರ ಮೇಲೆ ಕರುಣೆ ಮೂಡಿದ್ದು ನಮ್ಮ ಭಾಗ್ಯ ಸ್ವಾಮಿ, ರುದ್ರಪ್ಪ ನಮ್ಮ ಮನೆಯನ್ನ ಆಫೀಸಾಗಿ ಬಳಸಿಕೊಳ್ಳೊದು ನಮ್ಮ ಭಾಗ್ಯ. ತಾವು ನಮ್ಮ ಮನೆಯಲ್ಲಿ ಬಚ್ಚಿಟ್ಟುಕೊಂಡದ್ದೂ ನಮ್ಮ ಭಾಗ್ಯ. ತಾವು ರಾಜಕಾರಣಿಗಳು. ಪ್ರತಿಯೊಂದಕ್ಕೂ ಕಾರಣ ಹೇಳಬಲ್ಲಿರಿ. ಬಹುಶಃ ನೀವು ಶ್ರೀಕಾಂತಜೀ ಕೊಲೆ ಮಾಡಿದ್ದೂ ಕೂಡ ದೇಶೋದ್ಧಾರಕ್ಕೆ!

ಸಿದ್ದಲಿಂಗು : ಖಂಡಿತಾ ಹೌದು ಕೇಳು : ತಲೆ ಇದ್ದರೆ ಅರ್ಥಮಾಡಿಕೊ, ಶ್ರೀಕಾಂತಜೀ ಕೊಲೆ ಮಾಡಿದವರು ಇಬ್ಬರು, ಅವರವರ ಕಾರಣಕ್ಕೆ, ಕೊಲೆ ಮಾಡಿದವನು ನಾನಾದರೆ ಮಾಡಿಸಿದವನು ರುದ್ರಪ್ಪ. ಆ ದಿನ ಕರೆಂಟ್ ಆಫ್ ಮಾಡಿಸಿದವನು ಅವನು. ಶ್ರೀಕಾಂತಜೀ ನಮ್ಮ ಪಾರ್ಟೀಲಿದ್ದರೂ ರುದ್ರಪ್ಪ ಯಾಕೆ ಕೊಲೆ ಮಾಡಿಸಿದ ಗೊತ್ತಾ? ಶ್ರೀಕಾಂತಜೀನ್ನ ಯಾರು ಕೊಂದರೂ ರೂಲಿಂಗ್ ಪಾರ್ಟಿಯವರೇ ಕೊಂದರು ಅಂತ ಜನ ಭಾವಿಸ್ತಾರೆ, ಸಹಾನುಭೂತಿಯಿಂದ ನಮ್ಮ ಪಾರ್ಟಿಗೆ ಮತ ಕೊಡ್ತಾರೆ-ಅಂತ. ರುದ್ರಪ್ಪನ ಊಹೆ ನಿಜವಾಯ್ತು ನೋಡು, ಜನ ಮತ ಕೊಟ್ಟರು ಹೌದಾ? ಶ್ರೀಕಾಂತಜೀ ಇದ್ದಿದ್ದರೆ ರುದ್ರಪ್ಪ ಮುಖ್ಯಮಂತ್ರಿ ಆಗ್ತಿರ್ಲಿಲ್ಲ. ಈಗ ಅವನ ದಾರಿ ಸುಗಮವಾಯ್ತು ಸಿಂಹಾಸನಕ್ಕೆ, ಹೌದಾ?

ಪ್ರಕಾಶ್ : ಇಷ್ಟೆಲ್ಲ ಗೊತ್ತಿದ್ದವನು, ರುದ್ರಪ್ಪ ಖಳನಾಯಕ ಅಂತ ಗೊತ್ತಿದ್ದೋನು ನೀನ್ಯಾಕೆ ಅವನ ಜೊತೆ ಷಾಮೀಲಾದೆ?

ಸಿದ್ದಲಿಂಗು : ಶ್ರೀಕಾಂತಜೀ ರುದ್ರಪ್ಪನ ಶತ್ರುವಾದರೆ ನನಗೆ ಅವರಿಬ್ಬರೂ ಶತ್ರುಗಳು. ಇಬ್ಬರೂ ನಮ್ಮ ದಡ್ಡತನದಿಂದಲೆ ಬೆಳೆದವರು, ಈ ದೇಶದಲ್ಲಿ ಶುದ್ಧವಾಗಿದ್ದದ್ದು ಬಡತನ ಒಂದೇ, ಅದನ್ನೂ ಭ್ರಷ್ಟಗೊಳಿಸುತ್ತಿದ್ದ ಶ್ರೀಕಾಂತಜೀ, ಹೊಸ ಬಟ್ಟೆ ಹರಿದು ಚಿಂದಿ ಮಾಡಿ ಧರಿಸಿ ಬಡತನವನ್ನು ಅಭಿನಯಿಸುತ್ತಿದ್ದ. ಸುಂದರವಾಗಿ ಆರ್ಕೆಸ್ಟ್ರಾ ಸಮೇತ ಹಾಡುತ್ತಾ ತೆರೆಯ ಮೇಲೆ ಭಿಕ್ಷೆ ಬೇಡುತ್ತಿದ್ದ. ದೇವತೆಯಾಗಿ ಆಶೀರ್ವಾದ ಮಾಡುತ್ತಾ, ಭಕ್ತಿಯ ಅಫೀಮು ತಿನ್ನಿಸುತ್ತ, ಈ ಜನ-ಸಾಮಾನ್ಯ ಜನ ತಮ್ಮ ಬಡತನವನ್ನ ಹಸಿವನ್ನ ಮರೆಯೋ ಹಾಗೆ ಮಾಡುತ್ತಿದ್ದ. ಅವರೆಂದೂ ಕೋಪಗೊಳ್ಳದ ಹಾಗೆ ಮಾಡುತ್ತಾ ರುದ್ರಪ್ಪನ ವ್ಯವಸ್ಥೆಯನ್ನು ಕಾಪಾಡುತ್ತಿದ್ದ. ಅದಕ್ಕೇ ಅವನನ್ನು ಕೊಲ್ಲಬೇಕೆಂದಿದ್ದೆ-ಕೊಂದೆ. ಶ್ರೀಕಾಂತಜೀ ಗುಂಡಿನಿಂದ ಸಾಯಬಲ್ಲವನಾಗಿದ್ದ ಸತ್ತ. ಆದರೆ ಇನ್ನೊಬ್ಬ ಇದಾನಲ್ಲ. ಉಪ್ಪರಿಗೆ ದೇವರು ರುದ್ರಪ್ಪ, ಅವನು ಗುಂಡಿನಿಮದ ಸಾಯೋದಿಲ್ಲ. ರಕ್ತ ಬೀಜಾಸುರ ಇದ್ದ ಹಾಗೆ, ಸಪ್ತ ಸಮುದ್ರ ದಾಟಿ ನಡುಗಡ್ಡೆಯ ಆಲದ ಮರದ ಪೊಟರೆಯಲ್ಲಿರೋ ಗಿಳಿಯಲ್ಲಿ ತನ್ನ ಜೀವ ಇಟ್ಟಿದ್ದಾನೆ. ಆ ಹಕ್ಕಿ ಎಲ್ಲಿದೆ ಅಂತ ಪತ್ತೆ ಮಾಡಿದೆ, ಎಲ್ಲಿದೆ ಗೊತ್ತಾ? ನನ್ನ ನಿನ್ನ ಎದೆಯಲ್ಲಿ ನಮ್ಮ ದಡ್ಡತನ ಮತ್ತು ಮುಗ್ಧತೆಗಳ ರಕ್ಷಣೆಯಲ್ಲಿ. ಇಡೀ ದೇಶ ಅವನ ಖಾಸಗಿ ಆಸ್ತಿ, ಯಾರ್ಯಾರದೋ ಮನೆಗೆ ನುಗ್ಗಿ ಬೇಕಾದಾಗ ಅದನ್ನು ತನ್ನ ಆಫೀಸಾಗಿ ಬಳಸಬಲ್ಲ. ಹಾಗೇ ಮನಸ್ಸುಗಳನ್ನು ಕೂಡ. ಇಂಥವನನ್ನು ಸುಲಭವಾಗಿ ಕೊಲ್ಲೋದು ಸಾಧ್ಯವಿಲ್ಲ. ಕೊಂದರೂ ಅವನ ನೆತ್ತರ ಹನಿ ಬಿದ್ದಲ್ಲೆಲ್ಲಾ ಅವನ ವಂಶದ ಸಾವಿರ ಜನ ರಾಕ್ಷಸರು ಹುಟ್ಟುತ್ತಾರೆ, ಅವನನ್ನು ಈ ತನಕ ಪೋಷಿಸುತ್ತಿದ್ದ ನಾವೆಲ್ಲ ನಾಲಿಗೆ ಚಾಚಿ ಅದರ ಮೇಲೆ ಅವನನ್ನು ಕೊಂದು, ನೆಲಕ್ಕೆ ರಕ್ತ ಬೀಳದ ಹಾಗೆ ಕುಡಿಯಬೇಕು.

*(ತಕ್ಷಣ ತಾನು ಅಗತ್ಯಕ್ಕಿಮತ ಹೆಚ್ಚು ಭಾವುಕನಾಗಿ ಮಾತಾಡುತ್ತಿದ್ದುದು ಸಿದ್ದಲಿಂಗೂನ ಗಮನಕ್ಕೆ ಬರುತ್ತದೆ. ಪ್ರಕಾಶ್ ಮತ್ತು ಸರೋಜಾ ಕೂಡ ಅಷ್ಟೇ ಭಾವುಕರಾಗಿ, ಆಶ್ಚರ್ಯಭರಿತರಾಗಿ ಕೇಳುತ್ತ ತಮ್ಮ ಅಸಮಾಧಾನವನ್ನು ಮೆಚ್ಚುಗೆಗೆ ತಿರುಗಿಸಿದ್ದಾರೆ. ಪಿಳಿ ಪಿಳಿ ಕಣ್ಣು ಬಿಟ್ಟು ಅವನನ್ನೇ ನೋಡುತ್ತಿದ್ದಾಗ ಸಿದ್ದಲಿಂಗು ತನ್ನ ಉದ್ವೇಗವನ್ನು ನಿಯಂತ್ರಿಸಿಕೊಂಡು ಗಡಿಯಾರ ನೋಡಿಕೊಂಡು ಹೇಳುತ್ತಾನೆ.)*

ಇದು ನನಗೆ ಶುಭ ದಿನ ಪ್ರಕಾಶ್. ಅವನನ್ನು ಬೇಟೆಯಾಡುವ ಕಾರ್ಯ ಈಗ ಸುರು ಮಾಡುತ್ತೇನೆ. ಈಗ ಪಾರ್ಟಿ ಮೀಟಿಂಗಿದೆ, ಮುಖ್ಯಮಂತ್ರಿಯನ್ನ ಆರಿಸೋದಕ್ಕೆ ಅವನನ್ನೇ ಆರಿಸ್ತಾರೆ. ಅದರಲ್ಲಿ ಸಂದೇಹವಿಲ್ಲ; ಅಂಥ ಕಂತ್ರಿ ಅವನು. ಆರಿಸಿದ ಜನಕ್ಕೆ ಹೇಳ್ತೇನೆ; ನೋಡಿ ನಿಮ್ಮ ಮುಖ್ಯಮಂತ್ರಿ ಎಂಥಾ ಸಂಪನ್ನ, ಶ್ರೀಕಾಂತಜೀನ ಕೊಂದವನು ಇವನೇ ಅಂತ ಹೇಳ್ತೇನೆ. ಯಾಕೆ ಕೊಂದ ಅಂಥ ಹೇಳ್ತೇನೆ. ಅವನ ಚಂಡಾಲ ಕೆಲಸಗಳನ್ನೆಲ್ಲಾ ಬಣ್ಣಿಸುತ್ತೇನೆ. ಎಲ್ಲರೂ ನನ್ನ ಮಾತನ್ನ ನಂಬುತ್ತಾರೆ ಅಂತ ಭ್ರಮೆ ಇಲ್ಲ ನನಗೆ. ನನ್ನ ಮಾತು ಕೇಳಿದ ಮೇಲೂ ಆತ ಮುಖ್ಯಮಂತ್ರಿ ಆಗಲೂಬಹುದು. ಆದರೆ ಕೆಲವರಲ್ಲಾದರೂ ಅನುಮಾನ ಉಳೀತದೆ, ಜನಕ್ಕೆ ಗೊತ್ತಾಗ್ತದೆ, ಇಷ್ಟಾದರೆ ಅದೊಂದು ಒಳ್ಳೇ ಪ್ರಾರಂಭವೆ. ಆಮೇಲೆ ಅವನು ನನ್ನನ್ನು ಕೊಂದರೂ ನನಗೆ ಪಶ್ಚಾತ್ತಾಪವಾಗುವುದಿಲ್ಲ. ಆ ದಿನ ನಡೆದದ್ದು ಇಷ್ಟೇ ಪ್ರಕಾಶ್ : ನನ್ನಲ್ಲಿರೋ ಸತ್ಯವನ್ನೆಲ್ಲಾ ಹೇಳಿದ್ದೇನೆ. ತೊಂದರೆ ಕೊಟ್ಟದ್ದಕ್ಕೆ ಮತ್ತು ಬೋರ್ ಮಾಡಿದ್ದಕ್ಕೆ ಕ್ಷಮಿಸಿ. ನಾನೀಗ ಅಲ್ಲಿಗೆ ಹೋಗಬೇಕು. ನಮಸ್ಕಾರ.

*(ಸರೋಜ ತನ್ನ ಅಸಮಾಧಾನ ಮರೆತು ಸಿದ್ದಲಿಂಗುವನ್ನೆ ಮೆಚ್ಚುಗೆಯಿಂದ ನೋಡುತ್ತಿದ್ದಾಳೆ. ಪ್ರಕಾಶ್ ತನ್ನ ಜಂಭಗಳನ್ನು ಸುಲಿದು ಕೊಂಡು ಸಿದ್ದಲಿಂಗೂನ ಸತ್ಯಕ್ಕೆ ಶರಣಾಗುತ್ತಾನೆ. ಇಬ್ಬರೂ ಕಣ್ಣಲ್ಲಿ ಮೆಚ್ಚುಗೆ ಸೂಚಿಸುತ್ತಾರೆ. ಸಿದ್ದಲಿಂಗು ಪಿಸ್ತೂಲು ತೆಗೆದುಕೊಂಡು ಬಟ್ಟೆಯೊಳಘೆ ಬಚ್ಚಿಟ್ಟುಕೊಳ್ಳುತ್ತಾನೆ. ಹೆಲ್ಮೆಟ್ ಧರಿಸಿಕೊಂಡು ಧೀರನಾಗಿ ಹೊರಡುತ್ತಾನೆ.)*

ಸಿದ್ದಲಿಂಗು : ಇನ್ನು ಮೇಲೆ ತೊಂದರೆ ಕೊಡೋದಿಲ್ಲ.

ಪ್ರಕಾಶ್ : ನಿನ್ನ ಹೆಸರು ಸಿದ್ದಲಿಂಗು ಅಲ್ಲ?

ಸಿದ್ದಲಿಂಗು : ಹೌದು.

ಪ್ರಕಾಶ್ : *(ಕೈಕುಲುಕಿ)* ಗುಡ್‌ಲಕ್ ಸಿದ್ದಲಿಂಗು.

ಸಿದ್ದಲಿಮಗು : ಥ್ಯಾಂಕ್ಯೂ ಸರ್.

ಸರೋಜ : ಗುಡ್‌ಲಕ್ ಸಿದ್ದಲಿಂಗು,

ಸಿದ್ದಲಿಂಗು : ಥ್ಯಾಂಕ್ಯೂ ಸಿಸ್ಟರ್,
*(ಧೀರನಾಗಿ ಬೆಡ್‌ರೂಮಿನತ್ತ ನಡೆಯುತ್ತಾನೆ. ಬಾಗಿಲಲ್ಲಿ ಆಘಾತದಿಂದ ನಿಲ್ಲುತ್ತಾನೆ . ಬೆಡ್‌ರೂಮಿನ ಕಿಟಕಿಯ ಗಾಜಿನ ಮೇಲೆ ಪಿಸ್ತೂಲು ಹಿಡಿದು ಕೊಲೆಗೆ ಸಿದ್ಧರಾದ ಇಬ್ಬರ ನೆರಳು ಮೂಡಿದೆ. ಕಂಡು ಮೂವರೂ ಗಾಬರಿಯಾಗುತ್ತಾರೆ. ಸಿದ್ದಲಿಂಗು ತಕ್ಷಣ ಮುಂಬಾಗಿಲ ಬೋಲ್ಟ್ ತೆಗೆದು ಬಾಗಿಲೆಳೆಯುವನು. ಹೊರಗಡೆ ಲಾಕ್ಕಾಗಿದ್ದದ್ದು ಗೊತ್ತಾಗಿ ಮೂವರಿಗೂ ದಿಗಿಲಾಗುತ್ತದೆ. ಪರಸ್ಪರ ಮುಖ ನೋಡಿ ಕೊಳ್ಳುತ್ತಾರೆ. ಸಿದ್ದಲಿಂಗು ಅನುಮಾನದಿಂದ ಪ್ರಕಾಶ್ ಕಡೆಗೆ ನೋಡುತ್ತಾನೆ.)*

ಪ್ರಕಾಶ್ : ನನ್ನನ್ನ ನಂಬು ಸಿದ್ದಲಿಂಗು. ಖಂಡಿತಾ ನನಗೂ ಇದು ಗೊತ್ತಿರಲಿಲ್ಲ. ರುದ್ರಪ್ಪ ಮನೆಗೆ ಬಂದದ್ದು ನಿಜ. ಹಾಸಿಗೆ ಕೆಳಗಿನ ಪಿಸ್ತೂಲು ತೋರಿಸಿ ಸರೋಜಳ ಬಗ್ಗೆ ಅನುಮಾನ ಪಡೋ ಹಾಗೆ ಮಾಡಿದ್ದೂ ನಿಜ. ನನ್ನ ಕಾಳಜಿ ಇದ್ದದ್ದು ಅಷ್ಟಕ್ಕೆ ಮಾತ್ರ, ನಿನ್ನನ್ನ ಹಿಡಿದುಕೊಡೊ ವಿಚಾರ ನಾನು ದೇವರಾಣೆ ಮಾಡಿರಲಿಲ್ಲ.

ಸರೋಜ : *(ದುಃಖದಿಂದ)* ಅಯ್ಯೋ ನಾನೇ ಕಾರಣಾರಿ, ಆ ಚಂಡಾಲ ರುದ್ರಪ್ಪನೇ ನನಗೂ ಹೇಳಿದದ, ಸಿದ್ದಲಿಂಗು ಫೋನ್ ಮಾಡಿದರೆ ಅವನನ್ನು ಕರೆಸಿ ಪ್ರಕಾಶ್‌ಗೆ ಭೇಟಿ ಮಾಡಿಸಿ, ಎಲ್ಲಾ ಸರಿಹೋಗುತ್ತೆ ಅಂತ.

ಸಿದ್ದಲಿಂಗು : *(ನಿರಾಶೆಯಿಂದ)* ಸರಿಹೋಯ್ತಲ್ಲ.

ಸರೋಜ : ಸರಿಹೋಗಲಿಲ್ಲ. ನಿನ್ನ ಕೊಲ್ತಾರೆ. ಪ್ರಕಾಶ್ ಏನಾದ್ರೂ ಮಾಡಿ ಸಿದ್ದಲಿಂಗೂನ ಪಾರುಮಾಡಿ. ಈ ಹುಡುಗ ಸಾಯೋದು ಬೇಕಿಲ್ಲ ನನಗೆ,
*(ಪ್ರಕಾಶ್ ಫೋನಿಗೆ ಓಡುವನು. ಎಷ್ಟು ಪ್ರಯತ್ನಿಸಿದರೂ ಲೈನ್ ಸಿಕ್ಕುವುದಿಲ್ಲ. ನಿರಾಶೆಯಿಂದ)*

ಪ್ರಕಾಶ್ : ಲೈನ್ ಕಟ್ಟಾಗಿದೆ.

ಸಿದ್ದಲಿಂಗು : *(ವಿಷಾದದಿಂದ)* ನನ್ನ ಜೀವಮಾನದಲ್ಲಿಯೇ ಪರಿಶುದ್ಧ ದಿನಗಳ ಒಡೆಯನಾಗಬೇಕಂತ ಆಸೆ ಇಟ್ಕೊಂಡಿದ್ದೆ. ಆದರೆ..

ಪ್ರಕಾಶ್ : ಛೇ ಏನಾದರೂ ಉಪಾಯ ಮಾಡಲೇಬೇಕು.

ಸಿದ್ದಲಿಂಗು : ಈಗ ಮೀಟಿಂಗ್ ನಡೀತಾ ಇದೆ. ಇಷ್ಟರಲ್ಲೇ ರುದ್ರಪ್ಪ ಮುಖ್ಯಮಂತ್ರಿ ಆಗ್ತಾನೆ. ಅವನ ಒಂದೊಂದು ಹೆಜ್ಜೆಗೂ ಒಂದೊಂದು ಬಲಿ ಆಗ್ಬೇಕು. ಒಂದಾದ ಮೇಲೆ ಇನ್ನೊಂದು ಮತ್ತೊಂದು-ಹೀಗೆ ನಮ್ಮಲ್ಲಿ ಎಚ್ಚರಿಕೆ ಮೂಡೋತನಕ ಈ ಯಜ್ಞ ನಡೀತಿರೋದೆ ಬರ್ತೀನಿ.
*(ಬೆಡ್‌ರೂಮಿನ ಕಿಟಕಿಯ ಕಡೆಗೆ ಹೊರಡುವನು. ತಕ್ಷಣ ಪ್ರಕಾಶ್ ಅವನನ್ನು ಕೈಹಿಡಿದು ಈಚೆ ಎಳೆಯುವನು.)*

ಪ್ರಕಾಶ್ : ಹೋಗಕೂಡದು ಅಂದೆ.

ಸಿದ್ದಲಿಂಗು : ಎಷ್ಟು ಹೊತ್ತೂಂತ ಹೀಗೆ ಕೂಡಿ ಹಾಕ್ಕೊಂಡಿರ್ತೀರಿ?

ಸರೋಜ : ನಾಳೆ ಬೆಳಗಾಗತ್ತೆ.

ಸಿದ್ದಲಿಂಗು : ಅಷ್ಟರಲ್ಲೇ ಬೇಟೆ ಸುರುವಾಗಿರತ್ತೆ.

ಪ್ರಕಾಶ್ : ನನ್ನ ಪ್ರಾಣ ಹೋದ್ರೂ ನೀನು ಹೊರಗಬಡೆ ಹೋಗಿಕೂಡದು,

ಸಿದ್ದಲಿಂಗು : ರುದ್ರಪ್ಪನಿಗೆ ಬೇಕಾಗಿರೋದು ನನ್ನ ಪ್ರಾಣ ಪ್ರಕಾಶ್. ನನಗೋಸ್ಕರ ಈ ಮನೆಯಲ್ಲಿ ನಿಮ್ಮ ಕೊಲೆಯಾಗೋದು ಬೇಕಿಲ್ಲ ನನಗೆ. ನಿನ್ನೆ ಒಂದು ಕನಸು ಕಂಡೆ. ಸರೋಜ, ಪ್ರಕಾಶ್ ನೀವಿದನ್ನು ಕೇಳಲೇಬೇಕು : ಕನಸಿನಲ್ಲಿ ಪೇಪರ್ ಓದುತ್ತಾ ಇದ್ದೆ, ಪೇಪರ್ನಲ್ಲಿ ಯಾರ್ದೊ ಒಂದು ಫೋಟೋ ಇತ್ತು. ಅದರ ಮುಖದ ತುಂಬಾ ಡಾಟ್ಸ್ ಇದ್ದುದರಿಂದ ಯಾರದ್ದೂ ಅಂತ ಗುರುತಾಗಲಿಲ್ಲ. ಪೇಪರ್ಗೆ ಬೆಂಕಿ ಹಚ್ಚಿದೆ! ನೀವು ನಂಬುತ್ತೀರೋ ಇಲ್ವೋ, -ಆ ಫೋಟೋದೊಳಗಿಂದ ಒಬ್ಬ ಹೆಂಗಸು, -ಕೊಳೆಯಾದ ಕನ್ನಡಿ ಮತ್ತು ಫ್ರೇಮಿನಿಂದ ಮೆಲ್ಲಗೆ ಎದ್ದುಬಂದಂತೆ ಬಂದಳು. ಬಂದು ಎದುರಿಗೇ ನಿಂತಳು! ಉರಿಯೋವಾಗ ಇಂಡಿಯಾ ಮ್ಯಾಪು ನಡುಗುತ್ತಲ್ಲ, ಆ ಥರಾ ನಡಗುತ್ತಿದ್ದಳು! ಒಮ್ಮೆಲೆ ಆಕೆ ನನ್ನ ಕತ್ತಿಗೆ ಕೈ ಹಾಕಿ ಹಿಸುಕಿಬಿಟ್ಟಳು.
*(ಹೀಗೆನ್ನುತ್ತ ಬೆಡ್‌ರೂಮಿನಲ್ಲಿ ಕಾಲಿಡುತ್ತಾನೆ. ತಕ್ಷಣ ಪ್ರಕಾಶ್ ಅವನ ಕೈಹಿಡಿದೆಳೆಯುತ್ತಾನೆ. ಶಕ್ತಿಸಾಲೋದಿಲ್ಲ. ಸರೋಜಳೂ ಓಡಿ ಬಂದು ಅವನ ಕೈ ಹಿಡಿದಳೆಯುತ್ತಾಳೆ. ಈ ಹೋರಾಟ ಹಾಗೇ ಮುಂದುವರೆಯುತ್ತದೆ.)*

ಸರೋಜ : ಬೇಡ ಸಿದ್ದಲಿಂಗು ನನ್ನಾಣೆ.

ಸಿದ್ದಲಿಂಗು : ದಯವಿಟ್ಟು ನನ್ನನ್ನು ಬಿಡಿ.

ಪ್ರಕಾಶ್ : ನಿನ್ನ ಜೊತೆ ನಾನೂ ಬರ್ತೀನಿ.

ಸಿದ್ದಲಿಂಗು : ಪ್ರಕಾಶ್ ನಿಮಗೆ ಹುಚ್ಚು ಹತ್ತಿದೆಯಾ?

ಸರೋಜ : ಸಿದ್ದಲಿಂಗು, ಸಿದ್ದಲಿಂಗು.

ಸಿದ್ದಲಿಂಗು : ಪ್ರಕಾಶ್.
*(ಹಾಲಿನಲ್ಲಿ ತುಂಬ ಹೋರಾಡಿ ಇಬ್ಬರನ್ನೂ ದೂಕಿ ಸಿದ್ದಲಿಂಗು ಬೆಡ್‌ರೂಮಿಗೆ ನುಗ್ಗಿ ಅವರು ಒಳಗೆ ಬಾರದ ಹಾಗೆ ಬಾಗಿಲಿಕ್ಕಿ ಬೋಲ್ಟ್*

*ಹಾಕಿಕೊಳ್ಳುತ್ತಾನೆ ಇಬ್ಬರೂ ನಿರಾಶೆ ಮತ್ತು ಭಯಗಳಿಂದ ಬಾಗಿಲು ಬಡಿಯುತ್ತಾ ಸಿದ್ದಲಿಂಗೂ ಸಿದ್ದಲಿಂಗೂ ಎಂದೂ ಕಿರಚುತ್ತಾರೆ. ಸಿದ್ದಲಿಂಗು ವಿಷಾದದಿಂದ ಬಾಗಿಲಿಗೆ ಬೆನ್ನು ಮಾಡಿ ನಿಂತು)*

ಸಿದ್ದಲಿಂಗು : ಸಾಯೋದಕ್ಕೆ ನನಗೂ ದುಃಖವಾಗ್ತಾ ಇದೆ ಪ್ರಕಾಶ್. ಹಾಗಂತ ನೀವು ನನ್ನ ಸಾವನ್ನ ಹಂಚಿಕೊಳ್ಳೊದು ನನಗಿಷ್ಟವಿಲ್ಲ. ಸಾಯೋ ಮುನ್ನ ಜನಕ್ಕೆ ಕೆಲವು ಸತ್ಯ ಹೇಳಬೇಕಂತಿದ್ದೆ. ನನಗೆ ಅಷ್ಟೊಂದು ನಿರಾಶೆ ಇಲ್ಲ. ನಿಮ್ಮಿಬ್ಬರಿಗೂ ಹೇಳಿದ್ದೇನೆ. *(ವೇದನೆಯನ್ನು ಮುಚ್ಚಿಕೊಳ್ಳುವುದಕ್ಕೆ ದನಿ ಎತ್ತರಿಸಿ)* ಕವಿ ನೀವು ಪ್ರಕಾಶ್, ನಾವು ಕಂಡುಕೊಂಡ ಸತ್ಯದ ಹಕ್ಕುದಾರ. ಇನ್ನು ಮೇಲೆ ಅದನ್ನ ನೀವು ಜನಕ್ಕೆ ಹೇಳಿ.

ಸರೋಜ : *(ವೇದನೆಯಿಂದ* ಸಿದ್ದಲಿಂಗೂ ಕೈ ಮುಗಿತೇನೆ ಬಾಗಿಲು ತೆಗಿ.

ಪ್ರಕಾಶ್ : ಸಿದ್ದಲಿಂಗೂ ಪ್ಲೀಸ್.

ಸಿದ್ದಲಿಂಗು : *(ಉಕ್ಕಿ ಬರುವ ವೇದನೆಯನ್ನು ತಡೆದುಕೊಂಡು)* ಆಳು ಸರೋಜ, ಆಳು ಪ್ರಕಾಶ್, ಅಳು ನನ್ನ ನಗರವೇ, ದೇಶವೇ, ದುಃಖಿಸಿರೆನ್ನ ಬಾಂಧವರೇ-ರಿಪೇರಿ ಮಾಡದ ಅನ್ಯಾಯಕ್ಕೆ. ಮಾಗದ ಗಾಯಕ್ಕೆ ಮತ್ತು ನಾವೇ ತಂದುಕೊಮಡ ಈ ಅನಿವಾರ್ಯಕ್ಕೆ ದುಃಖಿಸಿ.
*(ಈಗ ಸರೋಜ ಮತ್ತು ಪ್ರಕಾಶ್ ನಿಜವಾಗಿಯೂ ಅಳುತ್ತಿದ್ದಾರೆ)*

ಸರೋಜ : ಸಿದ್ದಲಿಂಗೂ ಪ್ಲೀಸ್ ಬಾಗಿಲು ತೆಗೆ.

ಸಿದ್ದಲಿಂಗು : ನನ್ನ ಕನಸಿನ್ನೂ ಮುಗಿದಿಲ್ಲ ಸರೋಜ. ಪ್ರಕಾಶ್ ಕೇಳಿಸುತ್ತಾ ಇದೆಯಾ? ದಯವಿಟ್ಟು ಕೇಳಿ : ಆ ಹೆಂಗಸು ನನ್ನ ಕತ್ತು ಹಿಸುಕಿದಳಲ್ಲಾ, ನಾನು ಸಾಯಲಿಲ್ಲ. ಕತ್ತು ಬಿಡಿಸಿಕೊಂಡು ಹೇಳಿದೆ :
ನಾವು ಅನೇಕರು ತಿಳಿದಂತೆ
ನೀನು ಸಂತೋಷದಿಂದ ಇಲ್ಲ ತಾಯೆ
ಗಾಯವಾಗಿದೆ ನಿನ್ನ ಬಾಯಿಗೆ, ಆದರೂ ನಗುವೆ
ಬೆಳಕಿದ್ದಲ್ಲಿ ಕತ್ತಲೆ ಚೆಲ್ಲುವ ನಿನ್ನ ನಗೆ
ಹಾಡುವ ನನ್ನ ಹಕ್ಕನ್ನು ನಡುಗಿಸುತ್ತಿದೆ,
*( ಈ ಮಧ್ಯೆ ಕಿಟಕಿಯಲ್ಲಿ ನೆರಳಾಗಿದ್ದ ಕೊಲೆಗಡುಕರು ಮೆಲ್ಲಗೆ ಬಾಗಿಲು ತೆಗೆದು ಸಿದ್ದಲಿಂಗೂನಿಗೆ ಗುರಿಯ ಹಿಡಿಯುತ್ತಾರೆ. ಅವರನ್ನೆ ನೋಡುತ್ತಾ ಕಣ್ಣೀರು ಸುರಿಸುತ್ತಾ ಸಿದ್ದಲಿಂಗೂ ಮುಂದಿನ ಮಾತು ಹೇಳುತ್ತಾನೆ.)*

ಆದರೂ ನಿನಗಿದು ತಿಳಿದಿರಲಿ ತಾಯೆ,
ನಾವೆಲ್ಲ ನಿನ್ನ ಕೊನೆಯ ದಿನಗಳನ್ನ
ಬದುಕುತ್ತಿದ್ದೇವೆ.
ಮೈಲುದ್ದ ನಾಲಿಗೆ
ದೇಶದ ಉದ್ದಗಲ ಕೋರೆಹಲ್ಲು ಚಾಚಿ
ಗುಡಿಗುಡಿಯಲ್ಲಿ ಸಿಡಿಯಾಡುವೆ ತಾಯೆ!
ಈ ದೇಶದ ಕಲ್ಲಿನ ದೈವಗಳೆಲ್ಲ
ನಿನ್ನ ನಗೆಯನ್ನೇ ನಗುತ್ತಿವೆ.

ನೀನು ಪೂತನಿಯೆಂದು ಬಂದ ಬಾಲಗೋಪಾಲರು
ನಿನ್ನ ಮೊಲೆ ಕುಡಿದು ಸ್ತಬ್ಧರಾಗಿದ್ದಾರೆ.
ಇಕೋ-
ಸ್ತಬ್ಧಗೊಳಿಸು ನನ್ನನ್ನೂ
ಅರ್ಪಿಸಿಕೋ ಈ ಹರಕೆಯ ಕುರಿಯನ್ನು.

*(ಕೊಲೆಗಡುಕರು ಗುಂಡು ಹಾರಿಸುತ್ತಾರೆ . ಸಿದ್ದಲಿಂಗು ಹಾಗೇ ಕುಸಿಯುತ್ತಾನೆ. ಪ್ರಕಾಶ್ ಗಾಬರಿಯಿಂದ ಕಣ್ಣು ಕಿಸಿದವನು ಗೊಂಬೆ ಯಂತೆ ಹಾಗೇ ನಿಲ್ಲುತ್ತಾನೆ. ಸರೋಜ ಕಿಟಾರನೆ ಕಿರುಚಿ ಹಾಗೇ ಕುಸಿಯುತ್ತಾಳೆ. ಇಡೀ ಮನೆ ಒಂದು ಕ್ಷಣ ಶೂನ್ಯವಾಗುತ್ತದೆ. ತುಸು ಸಮಯದ ಬಳಿಕ ದೂರದಲ್ಲಿ 'ಮುಖ್ಯಮಂತ್ರಿ ರುದ್ರಪ್ಪನವರಿಗೆ ಜಯವಾಗಲಿ' ಎಂಬ ಘೋಷಣೆಗಳು ಕೇಳುತ್ತಿದದಂತೆ ತರೆ.)*

## ಒಂದು

*(ಪ್ರಸ್ತಾವನೆ ಆಗಿ ಅರ್ಧ ಗಂಟೆ ಆಗಿದೆ. ಬೆಡ್‌ರೂಂನಲ್ಲಿ ಲೈಟ್ ಇಲ್ಲ. ಹಾಲಿನಲ್ಲಿ ಮಂದ ಬೆಳಕಿದೆ, ಕಿಚನ್ ರೂಂನಲ್ಲಿ ಸರೋಜ ಅಡಿಗೆ ಮಾಡುತ್ತಿದ್ದು ಈಗವಳು ನೈಟ್ ಗೌನಿನಲ್ಲಿದ್ದಾಳೆ. ರೇಡಿಯೋ ಒಂದು ಹಾಡನ್ನು ಗುಸುಗುಟ್ಟುತ್ತಿದ್ದು ಅದು ಮುಗಿದು ಸುದ್ದಿ ಪ್ರಸಾರ ಸುರುವಾಗುತ್ತದೆ.)*

ರೇಡಿಯೋ : ಆಕಾಶವಾಣಿ ಬೆಂಗಳೂರು ಭದ್ರಾವತಿ ಕೇಂದ್ರಗಳಿಂದ. ಸುದ್ದಿ ಪ್ರಸಾರ. ಓದುತ್ತಿರುವವರು ಆಂಜನೇಯಸ್ವಾಮಿ. ಆಳುವ ಬಲ ಪಕ್ಷದ ಅಧ್ಯಕ್ಷ ಶ್ರೀರಾಮದೇವ ಅವರು ಇಂದು ಮಧ್ಯಾಹ್ನ ತಮ್ಮ ಚುನಾವಣಾ ಪ್ರಚಾರ ಕಾರ್ಯವನ್ನು ಧಾರವಾಡದಲ್ಲಿ ಪ್ರಾರಂಭಿಸಿದರು. ಕಡಪ ಮೈದಾನದಲ್ಲಿ ಸೇರಿದ ಬೃಹತ್ ಸಭೆಯನ್ನುದ್ದೇಶಿಸಿ ಅವರು ಮಾತನಾಡುತ್ತ ಈಗ ದೇಶಕ್ಕೆ ಬೇಕಿರುವುದು ಭದ್ರ ಸರ್ಕಾರ ಮತ್ತು ಅಂಥ ಭದ್ರ ಸರ್ಕಾರವನ್ನು ಕೊಡುವುದು ತಮ್ಮ ಪಕ್ಷಕ್ಕೆ ಮಾತ್ರ ಸಾಧ್ಯವೆಂದು ಹೇಳಿದರು. ಎಡರಂಗದ ವಿರೋಧ ಪಕ್ಷಗಳ ಐಕ್ಯ ಕೇವಲ ತಾತ್ಕಾಲಿಕವಾದದ್ದು, ಅವರ ಹತ್ತಿರ ರಚನಾತ್ಮಕವಾದ ಯಾವುದೇ ಕಾರ್ಯಕ್ರಮ ಇಲ್ಲ. ನಮ್ಮ ಪಕ್ಷವನ್ನು ಅಧಿಕಾರದಿಂದ ಇಳಿಸುವುದೊಂದೇ ಅವರ ಗುರಿ ಎಂದು ಹೇಳಿ ಈ ಚೌ ಚೌ ಪಕ್ಷಗಳನ್ನು ಹಿಂದೊಮ್ಮೆ ಅಧಿಕಾರಕ್ಕೆ ತಂದಾಗ ದೇಶ ಎಷ್ಟು ಹಾಸ್ಯಾಸ್ಪದವಾಯಿತೆಂಬುದನ್ನು ಜನ ಮರೆಯಲಾರದೆಂದು ಅವರು ಹೇಳಿದರು….

*(ಅಷ್ಟರಲ್ಲಿ ಸರೋಜ ಬಂದು ರೇಡಿಯೋ ಆಫ್ ಮಾಡುವಳು. ಬಾಗಿಲು ಬಡಿದ ಸದ್ದಾಗುತ್ತದೆ. ಸರೋಜ ಇದ್ದಲ್ಲಿಂದಲೇ 'ಯಾರು?' ಎಂದು ಕೂಗುವಳು. ಉತ್ತರವಾಗಿ ಮತ್ತೆ ಬಾಗಿಲು ಬಡಿದ ಸಪ್ಪಳ ಕೇಳುವುದು. ಈ ಸಾರಿ ಎದ್ದು ಹೋಗಿ ಬಾಗಿಲು ತೆರೆಯುವಳು. ಸರ್ರನೆ ಒಬ್ಬ ಎಳೇ ಹುಡುಗ, ಒರಟ ಮತ್ತು ತೀಕ್ಷ್ಣವಾದ ಕಣ್ಣುಳ್ಳವನು, ಒಳನುಗ್ಗಿ ಸರೋಜಳ ಬಾಯಿ ಮುಚ್ಚಿ ಬಿಗಿ ಹಿಡಿದು, ಬಾಗಿಲಿಕ್ಕಿಕೊಳ್ಳುವನು. ಸರೋಜ ಗಾಬರಿಯಿಂದ ಒದ್ದಾಡುತ್ತಾಳೆ. ಮಧ್ಯೆ ಮಧ್ಯೆ ಬಾಯಿ ಬಿಡಿಸಿಕೊಂಡು ಮಾತಾಡುತ್ತಾಳೆ).*

ಸರೋಜ : ಯಾರು? ಯಾರು ನೀನು?

ಸಿದ್ಧಲಿಂಗು : ಕಿರಚಬೇಡ,

ಸರೋಜ : ಯಜಮಾನ್ರು ಹೊರಗ್ಹೋಗಿದಾರೆ. ನಾ ಪೋಲೀಸರನ್ನ ಕರೀತೀನಿ.

ಸಿದ್ಧಲಿಂಗು : ನಾ ಹೇಳೋದನ್ನ ಕೇಳು. ದಯವಿಟ್ಟು ಕಿರಚಬೇಡ.

ಸರೋಜ : *(ಕಿರುಚುತ್ತಾ)* ಏನ್ರೀ ಕೇಳೋದು? ಗಂಡಸರಿಲ್ಲದಾಗ ಮನೆಗೆ ನುಗ್ಗಿ ಮತ್ತೆ ನೀವು ಹೇಳಿದ ಹಾಗೆ ಕೇಳ್ಬೇಕಾ? *(ಸರೋಜ ಬಿಡಿಸಿಕೊಂಡು ಓಡಿಹೋಗಿ ಫೋನ್ ಎತ್ತುತ್ತಾಳೆ. ಸಿದ್ಧಲಿಂಗು ಪಿಸ್ತೂಲು ತೋರಿಸುತ್ತಾನೆ, ಸರೋಜ ಗಾಬರಿಗೊಂಡು ಸ್ತಬ್ಧಳಾಗುತ್ತಾಳೆ).*

ಸಿದ್ದಲಿಂಗು : ನಾನು ಹೇಳಿದ ಹಾಗೆ ಕೇಳಿದರೆ ಖಂಡಿತ ಅಪಾಯ ಇಲ್ಲ.

ಸರೋಜ : *(ನಡುಗುತ್ತಾ)* ನಿನಗೇನು ಬೇಕು?

ಸಿದ್ದಲಿಂಗು : ನಾ ಕಳ್ಳನಲ್ಲ. ಖಂಡಿತ ನನಗೇನೂ ಬೇಡ. ನೀನು ಸ್ವಲ್ಪ ಸಾವರಿಸಿಕೊಳ್ಳುವುದಾದರೆ ಹೇಳ್ತೀನಿ. ಎರಡು ಗಂಟೆ ಆಶ್ರಯಬೇಕು. ಬಚ್ಚಿಟ್ಟುಕೊಳ್ಳಲಿಕ್ಕೆ ಸ್ಥಳ ಬೇಕು.

ಸರೋಜ : ನಮ್ಮೆಯಜಮಾನ್ರು ಬಂದ ಮೇಲೆ ….

ಸಿದ್ದಲಿಂಗು : ಹೆದರಬೇಡ ….

ಸರೋಜ : ಏನು ಮಾಡಲಿ?

ಸಿದ್ದಲಿಂಗು : ಹೇಳ್ಲಿಲ್ಲವೇ, ಏನೂ ಮಾಡ್ಬೇಡ
ಅಂತ. *(ಮೆಲ್ಲನೆ ಅವಳು ಬಾಗಿಲ ಕಡೆಗೆ ಹೋಗುತ್ತಿದ್ದಾಗ ಅವಳನ್ನು ಹಿಡಿದು ಕೈಕಟ್ಟಿ ಕುರ್ಚಿಯಲ್ಲಿ ಕುಕ್ಕರಿಸುವಂತೆ ಮಾಡಿ)*

ಸಿದ್ದಲಿಂಗು : ಹೆದರ್ಕೊ ಬೇಡ . ನನಗೆ ನಿನ್ನ ವೈಯಾರದ ಮೈ ಬೇಡ, ನಿನ್ನ ಉಮಾ ಗೋಲ್ಡ್ ಬಳೆ ಬೇಡ. ದುಡ್ಡು ಖಂಡಿತಾ ಬೇಡ . ನನ್ನ ಹೆಸರು ಸಿದ್ದಲಿಂಗೂ ಅಂತ. ನಾನೂ ಖ್ಯಾತನೆ. ಒಂದೆರಡು ಗೂಂಡಾಗಿರಿ ಕೇಸಿನಲ್ಲಿ ಸಿಕ್ಕಿಬಿದ್ದು ಪೇಪರ್ ನಲ್ಲಿ ನನ್ನ ಹೆಸರೂ ಫೋಟೋ ಬಂದಿತ್ತು. ನೆನಪಿದೆಯಾ? (*ಹೆದರಿಕೆಯಿಂದ ಕತ್ತು ಹಾಕುವಳು)* ಹಾಗಿದ್ದರೆ ನೀನು ಸಹಕರಿಸುವುದಕ್ಕೆ ಅದು ಸಹಾಯ ಮಾಡಬೇಕು. ಇಲ್ಲಿ ಕೇಳು, ಯಾರನ್ನೊ ಖೂನಿ ಮಾಡಿ ಬಂದಿದೀನಿ. ಎರಡು ಗಂಟೆ ಬಚ್ಚಿಟ್ಟುಕೊಂಡಿರ್ತೀನಿ. ರಾತ್ರಿ ಹನ್ನೊಂದಕ್ಕೆ ನನ್ನ ಪಾಡಿಗೆ ನಾನು ಹೊರಟ್ಹೋಗ್ತೀನಿ. ಅಲ್ಲೀತನಕ ಮುಚ್ಚಕೊಂಡು ಬಿದ್ಕೊ.
*(ಜನರ ಓಡಾಟ ಒಮ್ಮೆ ಹತ್ತಿರ, ಒಮ್ಮೆ ದೂರ ಕೇಳಿಸುತ್ತದೆ. ಸಿದ್ದಲಿಂಗು ಎಚ್ಚರಿಕೆಯಿಂದ ಕೇಳುತ್ತಾನೆ. ಅದು ಹೊರ ಹೋಗಿ ಅಪಾಯವಿಲ್ಲವೆಂದಾಗ ಅವಳ ಕಡೆ ತಿರುಗುತ್ತಾನೆ. ಅವಳು ಚಡಪಡಿಸುತ್ತಿದ್ದಾಳೆ.)*

ಸರೋಜ : ನಾನು ಕಿರಚೋದಿಲ್ಲ, ಕೈ ಬಿಡು.

ಸಿದ್ದಲಿಂಗು : *(ಸ್ವಲ್ಪ ನೆಮ್ಮದಿಯಿಂದ)* ವಿಧಾನ ಸೌಧದಲ್ಲಿ ಕೆಲಸಕ್ಕಿದ್ದವಳು, ಸಾಮಾನ್ಯ ಹುಡುಗಿ ಅಲ್ಲ ನೀನು. ನಿನ್ನ ಗಂಡ ಬರೋ ಟೈಂ ಆಯ್ತು. ಗಂಡ ಬಂದ ಕೂಡಲೆ ತಬ್ಬಿಕೊಂಡು ಕಳ್ಳ ಹೇಗೆ ಬಂದ, ಹ್ಯಾಗೆ ಕೈ ಬಾಯಿ ಕಟ್ಟಿದ, ಆದರೂ ನಿನ್ನ ಪಾತಿವ್ರತ್ಯ ಹ್ಯಾಗೆ ಉಳಿಸಿಕೊಂಡೆ ಅಂತ ಸೀನ್ ಮಾಡೊ ಪೈಕಿ ಅಲ್ಲ ನೀನು. ಅಥವಾ ಲೈಟ್ ಆರಿಸಿ ಗಂಡನ ಮೈ ಮೇಲೆ ಬೆರಳಾಡಿಸುತ್ತ ಇಂದಿನ ಗೂಂಡಾಗಿರಿ ಬಗ್ಗೆ ಹೇಳೋ ಪೈಕೀನೋ ಅಲ್ಲ. ತುಂಬಾ ಜಾಣೆ ನೀನು. ಇನ್ನೂ ಜಾಣೆಯಾಗೊ ಅವಕಾಶ ಇದೆ-ನನ್ನ ಮಾತು ಕೇಳೋದಾದರೆ,-

ಸರೋಜ : ನಿನ್ನಿಂದ ನಾನು ಕಲಿಬೇಕಾದ್ದೇನಿಲ್ಲ.

ಸಿದ್ಧಲಿಂಗು : ಅದ್ಕ್ರೂ ಹೆದರ್ಕೊಂಡಿದ್ದೀಯಾ, ಹೇಳಿದೇನೆ : ನನ್ನಿಂದ ಅಪಾಯ ಇಲ್ಲ. ಹೇಳಿದ ಹಾಗೆ ಕೇಳದಿದ್ದರೆ ಈ ಪಿಸ್ತೂಲಿನಷ್ಟೇ ಅಪಾಯಕಾರಿ ನಾನು. ಮೆಲ್ಲಗೆ ಮಾತಾಡು. ಮತ್ತು ಮಾತಾಡಿದ್ದನ್ನು ಕೇಳು. ನಾ ಇಲ್ಲಿ ಬಂದದ್ದನ್ನು ಯಾರಿಗೂ ಹೇಳಕೂಡದು.

ಸರೋಜ : *(ಕಿರುಚಿ ಮಾತಾಡುತ್ತ)* ಯಾಕೆ ಹೇಳಬಾರದು?
ಹೇಳತೀನಿ. *(ಸಿದ್ಧಲಿಂಗು ಹೋಗಿ ಕೆನ್ನೆಗೆ ಬಾರಿಸಿ ಮತ್ತೆ ಬಾಯಿ ಕಟ್ಟುವನು.)*

ಸಿದ್ಧಲಿಂಗು : ನನ್ನ ಮಾತು ನಂಬು. ನೀನು ಕಿರುಚಿದರೂ ಅಕ್ಕಪಕ್ಕ ಯಾರಿಗೂ ಕೇಳಿಸೋದಿಲ್ಲ. ಕೇಳಿಸ್ಕೊಂಡ್ರೂ ಯಾರು ಬರೋದಿಲ್ಲ. ಬಂದರೆ ನಡೆದದ್ದನ್ನು ಹೇಳೋದಕ್ಕೆ ನೀನು ಜೀವಂತ ಇರೋದಿಲ್ಲ. ಅರ್ಥವಾಯಿತಾ? *(ಕತ್ತು ಹಾಕುವಳು.)* ಈಗ ಕೇಳು : ನಿನ್ನ ಗಂಡ ಬರ್ತಾನೆ. ನಾನು ಬೆಡ್ ರೂಂನಲ್ಲಿರ್ತೀನಿ ಈಗಷ್ಟೇ ಕಾಲೇಜ್ ಗ್ರೌಂಡ್‌ನಲ್ಲಿ ಕೊಲೆಯಾಗಿದೆ. ಆ ದಿಗಿಲಿನಲ್ಲೇ ಬಂದು, ಕೊಲೆ ಹ್ಯಾಗಾಯ್ತು, ಯಾರು ಮಾಡಿದರು, ರೂಲಿಂಗ್ ಪಾರ್ಟಿ ನೀಚತನ, ಜನರ ಷಂಡತನ-ಅಯ್ಯೋ ದೇಶ ಎಲ್ಲಿಗೆ ಬಂತು-ಅಂತೆಲ್ಲಾ ಮಾತಾಡ್ತಾನೆ ಏನ್ ಕೇಳೋಕ್ಕೂ ನಿನಗೆ ಬಿಡೋದೇ ಇಲ್ಲ ಅವನು. ನಾನು ಬೆಡ್ ರೂಂನಲ್ಲಿರೋದರಿಂದ ನಿನಗೆ ಭಯ, ಆತಂಕ ಇದ್ದೇ ಇರುತ್ತೆ. ಆತ ಕೊಲೆ ಅಂದ ಕೂಡಲೇ ಕಣ್ಣು ಅಗಲ ಮಾಡಿರ್ತೀಯಲ್ಲ, ಹಾಗೆ ಇಟ್ಕೊಂಡಿರು. ಕೊಲೆ ಸುದ್ದಿ ಕೇಳಿ ಎಷ್ಟು ಗಾಬರಿ ಆದಳಲ್ಲಾ-ಆಹಾ ಎಂಥ ಕೋಮಲೆ ನನ್ನ ನಲ್ಲೆ ಅಂದ್ಕೊಂಡು ಸುಮ್ಮನಾಗ್ತಾನೆ. ಈಗ ಯಾರಿಗೂ ಅಪಾಯ ಇಲ್ಲ. ಅದು ಬಿಟ್ಟು ಒಳಗೆ ಯಾರೋ ಇದಾರೆ ಅಂತ ಸನ್ನೆ ಮಾಡಿದೆ ಅಂತ ಇಟ್ಟುಕೊ. ಅವನೂ ಬೆಡ್ ರೂಂಗೆ ಬರೋದಕ್ಕೆ ನೋಡ್ತಾನೆ. ನಾನು ಬಾಗಿಲು ಬೋಲ್ಟ್ ಹಾಕೋದಿಲ್ಲ. ಅವನೇನಾದರೂ ಒಳಗೆ ಬಂದರೆ ನೋಡು ಒಂದೇ ನಿಮಿಷದಲ್ಲಿ ನೀನು ವಿಧವೆ ಆಗ್ತೀಯಾ, ಹುಷಾರ್, ಅರ್ಥವಾಯಿತಾ? *(ಕತ್ತು ಹಾಕುವಳು)* ಬೋಲ್ಟ್ ಯಾಕೆ ಹಾಕೋದಿಲ್ಲ ಗೊತ್ತಾ? ಬಾಗಿಲು ತೆಗೆಸೋದಕ್ಕೆ ನೀವು ಅಕ್ಕಪಕ್ಕದ ಜನರನ್ನ ಕರೆತರಬಹುದು. ಒಂದು ದಿನದಲ್ಲಿ ಅನೇಕರನ್ನ ಕೊಲ್ಲೋದಕ್ಕೆ ನನಗೆ ಇಷ್ಟ ಇಲ್ಲ. ನಿನ್ನ ಮೇಲೆ ನನಗೆ ನಂಬಿಕೆ ಇದೆ. ಬೋಲ್ಟ್ ಹಾಕೋದಿಲ್ಲ. ಆದರೂ ರಾತ್ರಿ ಹನ್ನೊಂದು ಗಂಟೆ ತನಕ ಇಬ್ಬರ ಪೈಕಿ ಯಾರಾದರೂ ಹೊರಗಡೆ ಅಥವಾ ಬೆಡ್‌ರೂಮಿಗೆ ಬಂದರೆ-ಅಪಾಯ ತಪ್ಪಿದ್ದಲ್ಲ. ಇನ್ನೊಂದು ಸಾರಿ ಹೇಳ್ತೇನೆ. ನಿನ್ನ ಮೇಲೆ ನಂಬಿಕೆ ಇದೆ. ಏಳಬೇಡ ಅಲ್ಲೇ ಕೂತ್ಕೋ *(ಬಾಯಿ ಬಿಚ್ಚುವನು).*

ಸರೋಜ : *(ಅಳುತ್ತಾ)* ನಿಮ್ಮ ದಮ್ಮಯ್ಯ ಅಂತೀನಿ. ನಮ್ಮ ಪಾಡಿಗೆ ನಮ್ಮನ್ನು ಬಿಟ್ಟು ನೀವು ಹೊರಟ್ಹೋಗಿ ಇಲ್ಲಿಂದ.

ಸಿದ್ಧಲಿಂಗು : ಖಂಡಿತ ಹೊರಟ್ಹೋಗ್ತೀನಿ. ಆ ತನಕ ಮತ್ತು ಆಮೇಲೂ ಈ ಗುಟ್ಟು ಕಾಪಾಡೋದು ನಿನ್ನ ಹೊಣೆ. ಇಷ್ಟು ಸಭ್ಯನಾಗಿ ನಾನೆಲ್ಲೂ ನಡೆದುಕೊಂಡಿಲ್ಲ ಗೊತ್ತಾ? ನನಗೆ ಥ್ಯಾಂಕ್ಸ್ ಹೇಳಬೇಕು ನೀನು.

ಸರೋಜ : ಥ್ಯಾಂಕ್ಸ್. ದಯವಿಟ್ಟು ಇನ್ನು ಹೊರಡ್ತೀರಾ? ಬೇಕಾದರೆ ಕಿಟಕಿಯಿಂದ ಹಾರಿ ಹೋಗಿ; ನನಗೆ ಭಯ ಆಗ್ತಿದೆ.

ಸಿದ್ಧಲಿಂಗು : *(ಬೆಡ್‌ರೂಮಿನ ಕಿಟಕಿ ಬಳಿ ಹೋಗಿ ಬಾಗಿಲು ತೆಗೆದು ಹೊರಗೆ ಇಣುಕುವನು)* ಉಪಾಯವೇನೋ ಒಳ್ಳೆಯದೆ. ಆದರೂ ಜನರ ಸುಳಿವು ಕಮ್ಮಿ ಆಗೋತನಕ ನಾನು ಹೊರಗಡೆ ಹೋಗೋ ಹಾಗಿಲ್ಲ. ಇನ್ನೊಂದು ಮಾತು, ಥೂ ಅಳಬೇಡ. ನೀನೇ ಕೊಲೆ ಮಾಡಿದ ಹಾಗೆ ಆಡ್ತೀಯಲ್ಲ. ಚಿನ್ನದ ಬಳೆ, ವಿಧಾನಸೌಧ, ನರಪೇತಲ ಗಂಡ ಬಿಟ್ಟರೆ ನಿನಗೇನೂ ಗೊತ್ತಿಲ್ಲ. ನಿಮ್ಮಂಥೋರು ಇರೋದರಿಂದಲೇ ದೇಶ ಕೊಳೀತಾ ಇರೋದು. ನಿನ್ನ ಮುಖದಲ್ಲಿ ಸರಿಯಾದ ಸಿಟ್ಟು ಕೂಡ ಕಾಣಿಸೋದಿಲ್ಲ. ಇಲ್ಲಿ ಕೇಳು. ನಾ ಇಲ್ಲಿ ಬಂದಿರೋದು ಕೊಲೆಮಾಡಿ-

ಸರೋಜ : *(ಅಳುತ್ತಾ)* ಗೊತ್ತು.

ಸಿದ್ಧಲಿಂಗು : ಏನು ಗೊತ್ತು? ನಾನು ಮಾಡಿರುವುದಕ್ಕೆ ಹೆಸರು ರಾಜಕೀಯ ಕೊಲೆ. ನಟಸಾರ್ವಭೌಮ ಶ್ರೀಕಾಂತಜೀಯ ಹೆಸರು ಕೇಳಿದ್ದೀಯಾ ಮರಿ?

ಸರೋಜ : ಅವನ ಕೊಲೆ ಮಾಡಿದೆಯಾ?

ಸಿದ್ದಲಿಂಗು : ಹೌದು.

ಸರೋಜ : ಅದಕ್ಕೆ ನೀನು ನಮ್ಮ ಮನೆಗೆ ಯಾಕೆ ಬರಬೇಕು?

ಸಿದ್ದಲಿಂಗು : ಕಾರಣ ಇದೆ. ಕೊಲೆ ಮಾಡಿದ ಮೇಲೆ ಎಲ್ಲಿಗೆ ಹೋಗಬೇಕಂತ ನನ್ನ ಕಾಲಿಗೆ ಗೊತ್ತಿತ್ತು. ಗಂಡ ಹೆಂಡತಿ; ಮಧ್ಯಮ ವರ್ಗದ ಉಗುರು ಬೆಚ್ಚಗಿನ ಸಂಸಾರ. ನಿಮಗೆ ದೊಡ್ಡಧೈರ್ಯ ಇಲ್ಲ. ದೊಡ್ಡ ನಿರಾಶೆ ಇಲ್ಲ. ಒಬ್ಬರ ತಂಟೆ ತಕರಾರಿಲ್ಲ. ನಿಮ್ಮ ಬಗ್ಗೆ ಯಾರೂ ಆಡಿಕೊಳ್ಳೋದಿಲ್ಲ. ಎಲ್ಲಾ ಸುವರ್ಣ ಮಾಧ್ಯಮ. ಪೌರನೀತಿಯ ಎಲ್ಲಾ ಪಾಠಗಳನ್ನ ಉರುಹೊಡೆದು ಅನುಸರಿಸುವಂಥ ಸತ್ಪ್ರಜೆಗಳು ನಈವು. ಈ ಚಿಕ್ಕ ಮತ್ತು ಚೊಕ್ಕ ಸಂಸಾರದದೇ ಒಂದೇ ಒಂದು ಕೊರತೆ ಅಂದ್ರೆ ಸಂತಾನ ಸೌಭಾಗ್ಯ. ಅದಕ್ಕೂ ನಿನ್ನ ಗಂಡ ಕಷ್ಟಪಡಬೇಕಾಗಿದ್ದಿಲ್ಲ. ತುಂಬಾ ಫಲಭರಿತವಾಗಿದ್ದೀಯ. ದೇಶಕ್ಕೇನಾದರೂ ಸಂಭವಿಸಿದರೆ ನಿಮಗೇನೂ ಆತಂಕವಾಗೋದಿಲ್ಲ. ನೀವು ದಿನಾ ಪೇಪರ್ ಓದೋದು ಡಿ.ಎ. ಜಾಸ್ತಿ ಆಯ್ತಾ? ಸೆಂಟ್ರಲ್ ಡಿ.ಎ. ಕೊಟ್ರಾ? ಅಂತ ನೋಡೋದಕ್ಕೆ ಇಲ್ಲಿ ನಾನು ಅಡಗಿದರೆ ಪೋಲೀಸಿನೋರು ಇರಲಿ, ಅಕ್ಕಪಕ್ಕದವರಿಗೂ ಅನುಮಾನ ಬರುವುದಿಲ್ಲ.

ಸರೋಜ : *(ಜೋರಾಗಿ)* ನಾವೆಂಥವರು ಅಂತ ನೀವೇನೂ ಜಾಸ್ತಿ ಮಾತಾಡೋ ಅಗತ್ಯ ಇಲ್ಲರಿ.

ಸಿದ್ದಲಿಂಗು : ಸಾಧ್ಯವಾದರೆ ಯಾರಿಗಾದರೂ ಕೇಳಿಸಲಿ ಅಂತ ತಾನೇ ನೀನು ಜೋರಾಗಿ ಮಾತಾಡೋದು? ನಿನ್ನ ಗಂಡ ಬರೋದಕ್ಕೆ ಇನ್ನೂ ಐದು ನಿಮಿಷ ಇದೆ. ಅಲ್ಲೀತನಕ ನಿನಗೆ ಮನರಂಜನೆ ಸಿಗಲೀ ಅಂತ ಮಾತಾಡುತ್ತಿದ್ದೇನೆ. ಹೇಳು ನೋಡೋಣ, ಸಟಸಾರ್ವಭೌಮನ ಕೊಲೆ ಮಾಡಿಸೋಕೆ ನನ್ನನ್ನ ಯಾರು ಕಳುಸಿರಬಹುದು?

ಸರೋಜ : ಯಾರು ಕಳುಹಿಸಿದರೆ ನನಗೇನಾಗಬೇಕಾಗಿದೆ?

ಸಿದ್ದಲಿಂಗು : ಏನೂ ಆಗಬೇಕಾಗಿದ್ದಿಲ್ಲ? ರೂಲಿಂಗ್ ಪಾರ್ಟಿ ಯಾರು? ವಿರೋಧ ಪಾರ್ಟಿ ಯಾರು? ಎಲೆಕ್ಷನ್‌ನಲ್ಲಿ ಇಬ್ಬರೂ ಕೊಡೋ ಭರವಸೆಗಳೇನು? ಈಡೇರಿಸೋದೇನು?-ಏನೂ ಬೇಕಿಲ್ವ? ಸರೋಜ, ನೀನು ನನಗೆ ತುಂಬಾ ನಿರಾಶೆ ಮಾಡ್ದೆ ಆರ್ಡಿನರಿ. ಯೂ ಆರ್ ವೆರಿ ಆರ್ಡಿನರಿ.

ಸರೋಜ : ನಮ್ಮೆ ಜಮಾನ್ರು ಬರೋತನಕ ನಾ ಹೊರಗಡೆ ನಿಂತಿರಲಾ?

ಸಿದ್ಧಲಿಂಗು : ಕುಂತ್ಕಳೆ ಸಾಕು, ಕೇಳು : ಸ್ವಲ್ಪ ಕಾಮನ್‌ಸೆನ್ಸ್ ಆದರೂ ಜಾಸ್ತಿ ಆಗಲಿ. ಶ್ರೀಕಾಂತಜೀ ಕೊಲೆ ಮಾಡೋದಕ್ಕೆ ನನ್ನನ್ನು ಕಳುಹಿಸಿದವರು ನೀನಂದುಕೊಂಡ ಹಾಗೆ ರೂಲಿಂಗ್ ಪಾರ್ಟಿ ಜನ ಅಲ್ಲ. ಶ್ರೀಕಾಂತಜೀ ಪಾರ್ಟಿಯವರೆ, ಯಾಕೆ ಅಂತ ಕೇಳು,

ಸರೋಜ : *(ದುಃಖದಿಂದ* ಯಾಕೆ?)

ಸಿದ್ಧಲಿಂಗು : ಶ್ರೀಕಾಂತಜೀನ್ನ ಯಾರು ಕೊಲೆ ಮಾಡಿದ್ದರೂ ರೂಲಿಂಗ್ ಪಾರ್ಟಿಯವರೇ ಕೊಲೆ ಮಾಡಿರ್ತಾರೆ ಅಂತ ಜನ-ನಿಮ್ಮಂಥ ಆರ್ಡಿನರಿ ಜನ ನಂಬ್ತಾರೆ, ಅವರ ಸಹಾನುಭೂತಿ ಸಹಜವಾಗಿ ಆಪೋಸಿಟ್ ಪಾರ್ಟಿ ಮೇಲೆ ಉಂಟಾಗುತ್ತೆ. ರುದ್ರಪ್ಪನ ಪಾರ್ಟಿಗೆ ಜನ ಓಟು ಹಾಕ್ತಾರೆ. ರೂಲಿಂಗ್ ಪಾರ್ಟಿ ಬೀಳುತ್ತೆ : ಆಪೋಸಿಟ್ ಪಾರ್ಟಿ ಅಧಿಕಾರಕ್ಕೆ ಬರುತ್ತೆ *(ಸರೋಜ ಚಕಿತಳಾಗುತ್ತಾಳೆ)* ಇವೆಲ್ಲ ರಾಜಕೀಯ ತಂತ್ರ ಅಂತಿಟ್ಕೊ.

ಸರೋಜ : ನನಗೆ ನಿಮ್ಮ ರಾಜಕೀಯ ಬೇಕಿಲ್ಲ.

ಸಿದ್ದಲಿಂಗು : ಒದರಬೇಡ; ನಿನ್ನ ಮನರಂಜನೆಗೆ ನನ್ನಲ್ಲಿನ್ನೂ ಸರಕಿದೆ. ನೀನು ಏನೇನೋ ಇಲ್ಲಿ ನಡೆದದ್ದನ್ನು ಹೇಳಿದೆ. ಅಂತಿಟ್ಕೊ. ನಾಳಿ ನಿನ್ನ ಗಂಡ ನಿನ್ನ ಮಾತನ್ನ ನಂಬಿದ ಅಂತಾನೂ ಇಟ್ಕೊ. ಇಬ್ಬರೂ ಕೂಡಿಕೊಂಡು ಪೋಲೀಸ್ ಸ್ಟೇಷನ್‌ಗೆ ಹೋಗ್ತೀರಿ. ಶ್ರೀಕಾಂತಜೀ ಕೊಲೆ ಮಾಡಿದ ಸಿದ್ದಲಿಂಗು ನಿನ್ನೆ ನಮ್ಮ ಮನೆಗೆ ಬಂದಿದ್ದ, ಹಾಗಿದ್ದ ಹೀಗಿದ್ದ - ಅಂತ ವರ್ಣನೆ ಮಾಡ್ತೀರಿ.. ಏನಾಗುತ್ತೆ ಹೇಳ್ಳಾ? ಪೋಲೀಸ್ ಇನ್‌ಸ್ಪೆಕ್ಟರ್ ಶಾಂತವಾಗಿ ಎಲ್ಲ ಕೇಳ್ಕೋತಾನೆ. ಆಮೇಲೆ ಕೂಲಾಗಿ ಹೇಳ್ತಾನೆ 'ಎಸ್. ಮಿಸ್ಟರ್ ಪ್ರಕಾಶ್. ತುಂಬಾ ದಿನದಿಂದ ನಾವು ನಿಮ್ಮ ಮೇಲೆ ಕಣ್ಣಿಟ್ಟಿದ್ದೀವಿ. ಈಗ ನೀವಾಗೇ ಬಂದಿದೀರಿ. ಒಳ್ಳೆಯದಾಯ್ತು. ಈಗ ಸಿದ್ದಲಿಂಗೂನ ಹಿಡಿದುಕೊಡ್ತೀರೋ, ಇಲ್ಲ ನೀವೇ ಜೈಲು ಸೇರ್ತೀರೊ. ನಿನಗೆ ಗೊತ್ತಿಲ್ಲ ಹುಡುಗಿ. ಪೋಲೀಸಿನವರಿಗಾಗಲೇ ಆಪೋಸಿಟ್ ಪಾರ್ಟಿನೇ ಗೆಲ್ಲೋದು ಅಂತ ಗೊತ್ತಾಗಿದೆ. ಅವರಾಗಲೆ ರುದ್ರಪ್ಪನಿಗೆ ಸಾಮೀಲಾಗಿದಾರೆ.

ಸರೋಜ : ಈಗ ನನ್ನನ್ನೇನು ಮಾಡೂಂತೀರಿ?

ಸಿದ್ದಲಿಂಗು : ಕಥೆ ಕೇಳು, ಪಾಪ ನೀನು ತುಂಬ ಕೋಮಲೆ. ನೊಂದೆಯಾ ಚಿನ್ನಾ? ನಾ ಹೇಳೋದೆಲ್ಲ ನಿನ್ನ ಹಿತಕ್ಕಾಗಿ. ಈ ಕಥೆ ಕೇಳು : ಇದು ಶ್ರೀಕಾಂತನಿಗೇನಾದರೂ ಸಿಕ್ಕಿದ್ದರೆ ತಕ್ಷಣ ಸಿನೇಮಾ ಮಾಡಿಬಿಡ್ತಿದ್ದ. ಬೇಕಾದರೆ ಹಕ್ಕು ಬಿಟ್ಕೊಡ್ತೀನಿ, ನಿನ್ನ ಗಂಡನ ಹೆಸರಿಂದ ಅಚ್ಚು ಹಾಕಿಸು. ಕಥೆ ಹೀಗಿದೆ : ಸಿನೇಮಾ ನಡೀತಿದೆ ಅಂತಿಟ್ಕೊ. ನಿನ್ನ ಹಾಗೆ ಮಧ್ಯಮ ವರ್ಗದ ಒಬ್ಬ ಹೆಂಗಸು. ಹುಡುಗಿ ಅನ್ನು. ಮಕ್ಕಳಿಲ್ಲ, ಚೆಲುವೆ ಕಣ್ಣೊಳಗಿನ ಹನಿಮೂನಿನ್ನೂ ಮಾಸಿಲ್ಲ, ಗಂಡ ಹೊರಗಡೆ ಹೋಗಿದಾನೆ, ಮನೇಲಿ ಒಬ್ಬಳೆ. ರಾತ್ರಿ ಎಂಟು ಗಂಟೆಯ ಸಮಯ. ನಮ್ಮ ಕಥಾನಾಯಕಿ ಸಿನಿಮಾ ಹಾಡು ಗುನುಗುತ್ತಿರುವಳು. ಅಷ್ಟರಲ್ಲಿ ಬಾಗಿಲು ನಾಕ್ಕಾಯಿತು. ಹೋಗಿ ಬಾಗಿಲು ತೆರೀತಾಳೆ, ಒಬ್ಬ ಕಳ್ಳ! ನನ್ನಂಥವನು, ಕೊಲೆಗಾರ ಅಂದುಕೊ, ನುಗ್ತಾನೆ! ಬಾಗಿಲು ಹಾಕ್ಕೋತಾನೆ, ಎಲ್ಲಾ ಇವತ್ತಾದ ಹಾಗೆ. ಪ್ರೇಕ್ಷಕರು ಅಂದ್ಕೊತಾರೆ; ಹುಡ್ಗೀನ್ನ ಕಟ್ಟಿಹಾಕಿ ಈ ನನ್ಮಗ ಕದೀತಾನೆ ಅಂತ. ಅವನು ಕದಿಯೋದೇ ಇಲ್ಲ. ಈಗ ಅಂದ್ಕೊಳ್ತಾರೆ : ಕೊನೇಪಕ್ಷ ಅವನು ಅವಳನ್ನ ರೇಪ್ ಮಾಡ್ತಾನೆ ಅಂತ, ಅವನು ಅದೂ ಮಾಡೋದಿಲ್ಲ. ಜನಕ್ಕೆ ಬೋರಾಗಿ ಆಕಳಿಸ್ತಾರೆ. ಇವೆನೆಂಥ ಕಳ್ಳಬಡ್ಡಈ ಮಗನೊ? ಏನೂ ಮಾಡೋದೇ ಇಲ್ಲ ಅಂತಾರೆ. ಇನ್ನೇನು ಹೊರಗಡೆ ಹೋಗೋದಕ್ಕೆ ರೆಡಿ ಆಗಿರ್ತಾರೆ. ಅಷ್ಟರಲ್ಲಿ ಬಾಗಿಲು ನಾಕ್ಕಾಗುತ್ತೆ. ಕೊಲೆಗಾರ ಗಡಿಯಾರ ನೋಡಿ ಕೊಳ್ತಾನೆ. 'ಥ್ಯಾಂಕ್ಸ್ ಸ್ವಲ್ಪ ಹೊತ್ತು ಪೋಲೀಸರನ್ನು ತಪ್ಪಿಸಿ ಬಚ್ಚಿಟ್ಕೊಬೇಕಾಗಿತ್ತು. ನಾ ಬರ್ತೀನಿ ಬೈ ಬೈ' ಅಂತಾನೆ. ಅಂದು ಬಾಗಿಲು ತೆಗೆದು ತನ್ನ ಪಾಡಿಗೆ ತಾನು ಹೊರಟ್ಹೋಗ್ತಾನೆ. ಈಗ ಒಳಗಡೆ ಬಂದವನು ಗಂಡ! ಆಹ್ಹಾ, ಮುಂದಿನ ಕಥೆ ನೀನು ಹೇಳು. ಗಂಡ ಹೆಂಡತಿ ವಿಷಯದಲ್ಲಿ ನನಗೆ ಅನುಭವ ಸಾಲದು.

ಸರೋಜ : ನೋಡಿ , ನನ್ನ ಗಂಡನಿಗೆ ನನ್ನ ಮೇಲೆ ಪೂರ್ತಿ ನಂಬಿಕೆ ಇದೆ. ನೀವು ಬ್ಲಾಕ್ ಮೇಲ್ ಮಾಡೋ ಅಗತ್ಯ ಇಲ್ಲ.

ಸಿದ್ದಲಿಂಗು : ಇದೊಳ್ಳೆದಾಯ್ತು! ಗಂಡ ಬಂದಾಗ ಬಾಗಿಲಿಕ್ಕಿದೆ. ತೆರೆದಾಗ ಪರಪುರುಷನೊಬ್ಬ ಸಾರಿ ಅಂದು ಮುಖ ಮುಚ್ಕೊಂಡು ಮರೆಯಾಗ್ತಾನೆ. ಒಳಗಡೆ ಗಾಬರಿಯಲ್ಲಿರೋ ಹೆಂಡ್ತಿ ಇದಾಳೆ. ಒಳಗೆ ಬಂದ ಗಂಡ 'ಹಾ ಪ್ರಿಯತಮೆ. ಎಂಥ ಒಳ್ಳೆ ಕೆಲ್ಸ ಮಾಡ್ದೆ! ಅಂತ ಸಂತೋಷದಿಂದ ತಬ್ಬಿಕೊಳ್ಳುತ್ತಾನೇನು? ಪ್ರಕಾಶ್ ಅಂಥವನಲ್ಲ ಅಂದ್ಕೊಂಡಿದೇನೆ.

ಸರೋಜ : ರೀ ಮಿಸ್ಟರ್, ನಿಮ್ಮ ಮನಸ್ಸಿನಲ್ಲಿ ಏನಿದೆ ಅಂತ ಗೊತ್ತಾಯ್ತು. ನಮ್ಮ ಸಂಸಾರದಲ್ಲಿ ಹುಳೀ ಹಿಂಡಲಿಕ್ಕೇ ಅಂತ ಬಂದಿದ್ರಾ , ಇಲ್ಲಿ?

ಸಿದ್ದಲಿಂಗು : ಇದೀಗ ಸರಿ ದಾರಿ ಹಿಡಿದೆ ನೀನು. ನಿನಗೆ ಸಣ್ಣ ಸ್ವಾಭಿಮಾನ ಕೂಡ ಇದೆ ಅಂತ ನನಗ್ಗೊತ್ತು. ನಿಮ್ಮ ಸಂಸಾರ ಕೆಡಿಸೋದು ನನಗೆ ಇಷ್ಟ ಇಲ್ಲ. ನಿನ್ನ ಗಂಡನ್ನ ಕೊಲೆ ಮಾಡೋದು ಇಷ್ಟ ಇಲ್ಲ. ಆದರೆ ಎರಡೂ ಆಗದ ಹಾಗೆ ನೋಡಿಕೊಳ್ಳೋದು ನಿನ್ನ ಕೈಲಿದೆ.

ಸರೋಜ : *(ಅಳುತ್ತಾ)* ಹ್ಯಾಗೆ?

ಸಿದ್ದಲಿಂಗು : ಹೀಗೆ : ನಿನ್ನ ಗಂಡ ಇನ್ನೇನು ಬರೋ ಹೊತ್ತು. ಆತ ಬೆಡ್‌ರೂಮಿನ ಕಡೆ ಬರದ ಹಾಗೆ ನೋಡಿಕೊಳ್ಳೋ ಜವಾಬ್ದಾರಿ ನಿಂದು. ಆತ ಬಂದದ್ದೇ ಆದರೆ ಎರಡು ರೀತಿ ಆಗಬಹುದು. ಒಂದು : ಆತ ಸಾಯ್ತಾನೆ, ಎರಡು : ನಾನು ನಿನ್ನ ಹೆಂಡ್ತೀ ಮಿಂಡ ಅಂತಾ ಹೇಳ್ತೇನೆ. ಇಲ್ಲಿ ಕೇಳು, ನಾ ಇಲ್ಲಿ ಬಂದದ್ದನ್ನು ಆತನ ಮುಂದೆ ಯಾವಾಗ್ಲೂ ಹೇಳಕೂಡದು. *(ಕಾಲಿಂಗ್ ಬೆಲ್ ಸಪ್ಪಳವಾಗುತ್ತದೆ. ಅವಳ ಕೈ ಬಿಟ್ಟು ಮೆಲ್ಲಗೆ ಏಳುತ್ತಾನೆ) ಕೊನೆ ಮಾತು. ನಾನು ಹೋಗಲಿಕ್ಕೆ ಮುಂಬಾಗಿಲು ತೆರೀಬೇಕಾದ್ದಿಲ್ಲ. ಈ ಕಿಟಕಿ ಹಾರಿ ಹೋಗ್ತೀನಿ ಅಥವಾ ಈ ಕಿಟಕಿ ಬಾಗಿಲು ತೆರೆದುಕೊಂಡಿದ್ರೆ ನಾನು ತೊಲಗಿದೀನಿ ಅಂತ ಅರ್ಥ. ತಿಳೀತಾ (ಸರೋಜ ಕತ್ತು ಹಾಕುವಳು) ಹುಷಾರ್, ಈ ವಿಷಯ ನಿನ್ನ ಗಂಡನಿಗೆ ಎಂದೆಂದಿಗೂ ತಿಳೀಬಾರ್ದು ತಿಳಿದರೆ ಗೊತ್ತಲ್ಲ? (ಕೆನ್ನೆ ತಟ್ಟಿ ಬೆಡ್ ರೂಮಿನ ಬಾಗಿಲು ಮುಂದೆ ಮಾಡಿ ಬಚ್ಚಿಟ್ಟುಕೊಳ್ಳುವನು. ಸರೋಜ ಬಾಗಿಲು ತೆರೆಯುವಳು. ಬಿಟ್ಟ ಬಾಣದ ಹಾಗೆ ಪ್ರಕಾಶ್ ಒಳ ಬಂದು ಏದುಸಿರು ಆರಿಸಿಕೊಳ್ಳುತ್ತಾ ಕುರ್ಚಿಯಲ್ಲಿ ಕುಸಿಯುವನು. ಸರೋಜ ಈಗ ಬಹಳ ಎಚ್ಚರಿಕೆಯಿಂದ ಇರುವಳು. ಆಗಾಗ ಬೆಡ್ ರೂಮಿನ ಕಡೆ ಕಳ್ಳ ನೋಟ ಬೀರುತ್ತಾ ಪ್ರಕಾಶನ ಮಾತುಗಳನ್ನಾಲಿಸುತ್ತಾ ಸಂದರ್ಭಕ್ಕೆ ತಕ್ಕಂತೆ ಕೃತಕತೆಯನ್ನು ಅಭಿನಯಿಸುವಳು. ಅವಳ ಮಾತಿನಲ್ಲಿ ಅವಳಿಗೇ ಆಶ್ಚರ್ಯವಾಗುವಂಥ ಕೃತಕತೆ ಇದೆ.)*

ಪ್ರಕಾಶ್ : ಅಬ್ಬ !

ಸರೋಜ : ಏನಾಯ್ತು?

ಪ್ರಕಾಶ್ : ಕೊಲೆ! ಕೊಲೆ ಕಣೆ; ಶ್ರೀಕಾಂತಜೀ ಕೊಲೆ!

ಸರೋಜ : ಶ್ರೀಕಾಂತಜೀ?

ಪ್ರಕಾಶ್ : ಹೌದು?

ಸರೋಜ : ಕೊಲೆ ಆಯ್ತಾ?

ಪ್ರಕಾಶ್ : ಹೌದು, ಪಾಪ ಸ್ಥಳದಲ್ಲೇ ಸತ್ತ. ಏನು ಜನ! ಏನು ಕೂಗಾಟ! ಕಿರಿಚಾಟ! ಪೋಲೀಸ್‌ರ್‍ಯಾರೋ, ಜನ ಯಾರೋ! ಯಾರನ್ನ ಯಾರು ಹೊಡೆದರೋ! ಓಡಿದವರ್‍ಯಾರು ಸಿಕ್ಕದವರ್‍ಯಾರೋ! ಛೇ ಛೇ ತಪ್ಪಿಸಿಕೊಂಡು ಎಲ್ಲೆಲ್ಲೋ ಹೋಘಿ ಇಲ್ಲಿಗೆ ಬಂದೆ. ನಾನು ಜೀವಸಹಿತ ಬಂದದ್ದೇ ಹೆಚ್ಚು. ಗುಂಡು ಹಾರಿಸಿದವರ್‍ಯಾರು ಗೊತ್ತಾ?

ಸರೋಜ : ಮೊದಲು ಸುಧಾರಿಸಿಕೊಳ್ಳಿ. ಆಮೇಲೆ ಮಾತಾಡುವಿರಂತೆ,

ಪ್ರಕಾಶ್ : ಇಲ್ಲಿ ಕೇಳೆ, ಕೊಂದ ವ್ಯಕ್ತಿ….

ಸರೋಜ : ಥೂ. ನನಗೆ ಭಯ ಆಗುತ್ತಪ್ಪಾ. ಅದನ್ನೆಲ್ಲಾ ನೀವು ಹೇಳೋದೇ ಬೇಡ.

ಪ್ರಕಾಶ್ : ಪ್ರತ್ಯಕ್ಷ ಕಂಡವನು ನಾನೇ ಹೀಗಿದೀನಿ. ನೀನಾಗಲೇ ಬೆದರಿ ಬೆವರಲಿಕ್ಕೆ ಶುರು ಮಾಡಿದ್ದೀಯಲ್ಲೇ ಇಲ್ಲಿ ಕೇಳು.

ಸರೋಜ : ನೀವು ಹೇಳೋದು ಬೇಡ. ನಾನು ಕೇಳೋದೂ ಬೇಡ. ಅಡಿಗೆ ಮನೆಗೆ ಬನ್ನಿ. ಕಾಫಿ ಮಾಡಿಕೊಡ್ತೀನಿ.

ಪ್ರಕಾಶ್ : ಇಷ್ಟು ಹೊತ್ತಿನಲ್ಲಿ ಕಾಫಿ ಯಾರು ಕುಡೀತಾರೆ?

ಸರೋಜ : ಹಾಗಿದ್ದರೆ ಸುಮ್ನೆ ಕೂತ್ಕೊಳ್ಳಿ.

ಪ್ರಕಾಶ್ : ಚೆನ್ನಾಗಿದೆಯೇ! ಲೇ ಎಂಥೆಂಥ ಕೊಲೆಯ ಸತ್ಯಗಳನ್ನು ಕಂಡು ಬಂದಿದ್ದೀನಿ ಈವೊತ್ತು! ಹೇಳಿ ನಿನ್ನ ಥ್ರಿಲ್ ಮಾಡೋಣ ಅಂದ್ರೆ .....

ಸರೋಜ : ಅದೆಲ್ಲಾ ಆಮೇಲೆ, ಈಗ ಬೇಕಾದ್ರೆ ನಿಮ್ಮ ಪದ್ಯ ಓದಿ.

ಪ್ರಕಾಶ್ : *(ಬೂಟು ಬಿಚ್ಚುತ್ತಾ)* ನೀನು ತುಂಬಾ ಕೋಮಲೆ, ಸರಿ ಏಳು ಲೂಟ ಮಾಡೋಣ.

ಸರೋಜ : ನನಗೆ ಹಸಿವಿಲ್ಲ. ಅನ್ನ ಸಾರು ಇದೆ. ನೀವೇ ಊಟ ಮಾಡಿ.

ಪ್ರಕಾಶ್ : ಯಾಕೆ ಒಂಥರ ಇದ್ದೀಯಲ್ಲಾ?

ಸರೋಜ : ಇಲ್ವಲ್ಲ ನೋಡಿ.

ಪ್ರಕಾಶ್ : ಏನ್ ನೋಡೋದು? ಕನ್ನಡಿ ನೋಡಿಕೊಂಡಿದ್ದೀಯಾ? ತಾಳು ಬಟ್ಟೆ ಕಳಚಿಬಿಟ್ಟು ಬರ್ತೀನಿ.
*(ಬೆಡ್ ರೂಮಿನ ಕಡೆ ಹೊರಡುವನು ತಕ್ಷಣ ಸರೋಜ ಅಡ್ಡ ಬರುವಳು.)*

ಸರೋಜ : ನೋಡಿ, ಇಲ್ಲಿ ಬನ್ನಿ ಪ್ಲೀಸ್. *(ಕರೆದೊಯ್ದು ಮತ್ತೆ ಅದೇ ಕುರ್ಚಿಯಲ್ಲಿ ಕೂರಿಸುವಳು) ಈಗ ಹೇಳಿ.* ಅದೇನೋ ಕೊರೆಯುವ ಸತ್ಯಗಳಲು ಅಂದ್ರಲ್ಲಾ.

ಪ್ರಕಾಶ್ : ನಿನ್ನ ತಲೆ, ಏನ್ ಹೇಳ್ಳಿ?

ಸರೋಜ : ಏನಾದ್ರೂ ಹೇಳಿ. ಪದ್ಯ ಯಾಕೆ ಓದ್ತಾ ಇಲ್ಲ? ಆ ಕಣ್ಣಿಂದ ಪಿನ್ನು ಚುಚ್ಚಿ ಅಂತ ಎಷ್ಟೊಂದು ಚೆನ್ನಾಗಿತ್ತು. ನನಗೆ ನವ್ಯ ಕಾವ್ಯ ಅಂದ್ರೆ ಎಷ್ಟು ಇಷ್ಟ ಗೊತ್ತಾ? ಅರ್ಥವಾಗೋದಿಲ್ಲವಾದ್ರೂ ಮೈ ಜುಂ ಅನ್ನುತ್ತೆ. ಓದಿ ಪ್ಲೀಸ್ ಪ್ರಕಾಶ್.

ಪ್ರಕಾಶ್ : ಮತ್ತೆ ಕೊರೆಯೋ ಸತ್ಯ ಹೇಳು ಅಂದೆ.

ಸರೋಜ : ಹೋಗ್ಲಿ. ಅದನ್ನೆ ಮೊದ್ಲು ಹೇಳಿಯಪ್ಪ. ನೀವ್ ಇಲ್ಲಿಂದ ಹೋದ್ರಲ್ಲ ಆಗ್ಲೇ ಜನ ಸೇರಿದ್ರಾ?

ಪ್ರಕಾಶ್ : ಮತ್ತೆ, ಶ್ರೀಕಾಂತಜೀ ಅಂದ್ರೆ ಏನಂದ್ಕೊಂಡಿದ್ದೀಯಾ? ಏನು ಜನ! ಏನು ಜನ! ನಾನು ದೂರ ನಿಂತ್ಕೊಂಡಿದ್ದೆ. ಶ್ರೀಕಾಂತಜೀ ಇನ್ನೂ ಡಯಾಸ್ ಮೇಲೆ ಬಂದಿರಲಿಲ್ಲ. ಜನ ಥರಾವರಿ ಮಾತಾಡ್ತಿದ್ರು; ರೂಲಿಂಗ್ ಪಾರ್ಟಿ ಧೂಳಿಪಟ ಆಯ್ತು . ಆಪೋಸಿಟ್ ಪಾರ್ಟಿ ಅಧಿಕಾರಕ್ಕೆ ಬಂತೂ-ಹೀಗೆ ಏನೇನೋ. ಅಷ್ಟರಲ್ಲಿ ಈ ಕಡೆ ರೂಲಿಂಗ್ ಪಾರ್ಟಿಯವರು ಡಯಾಸ್ ಹಾಕಿದ್ರಲ್ಲ, ಅವರು ಯಾವಾಗಲೋ ಸಭೆ ಸುರು ಮಾಡಿದ್ರು. ಪಾಪ, ಅವನ್ಯಾವನೋ ದಿಲ್ಲಿಯವನಂತೆ, ಭಾಷಣಂ ಎತ್ಕೊಳ್ತಾನೇ ಶ್ರೀಕಾಂತಜೀ ಹೆಸರು ತಗೊಂಡ. ಹಾಗಂದದ್ದೇ ತಡ ಜನ ಕೇಳ್ತಾರಾ? ಹೊ ಅಂತ ಕಲ್ಲು ಚಪ್ಪಲಿ ತೂರಲಿಕ್ಕೆ ಸುರು. ಅದ್ಯಾಕಪ್ಪ ನಾ ಇಲ್ಲಿಗೆ ಬಂದೆ ಅಂದ್ಕೊಂಡೆ. ಸದ್ಯ ಅವರು ಸಭೆ ಮುಗಿಸಿ ಓಡಿದ್ರು. ಆ ನನ್ಮಕ್ಕಳಿಗೆ ಸೇಡು ಉಳಿಯಿತು ನೋಡು.

ಸರೋಜ : ಯಾರಿಗೆ?

ಪ್ರಕಾಶ್ : ಇನ್ಯಾರಿಗೆ ರೂಲಿಂಗ್ ಪಾರ್ಟಿ ಜನಕ್ಕೆ.

ಸರೋಜ : ಯಾಕೆ?

ಪ್ರಕಾಶ್ : ಯಾಕೆಂದ್ರೆ ಅವರು ಮಾಡೋ ಸಭೆಗಳಿಗಾದ್ರೆ ಜನಾನೇ ಇಲ್ಲ. ಜನಾ ಅಂತ ಬಂದವರು ಕಲ್ಲು ಚಪ್ಪಲಿ ತೂರ್ತಾರೆ!

ಸರೋಜ : ಹಾಗೆ ಮಾಡೋದು ತಪ್ಪಲ್ವಾ?

ಪ್ರಕಾಶ್ : ಯಾಕೆ ಹೇಳು?

ಸರೋಜ : ಯಾಕಿಲ್ಲ ಆಮೇಲೆ ಹೇಳ್ತೇನೆ. ಮುಂದೆ ಹೇಳಿ.

ಪ್ರಕಾಶ್ : ಆಮೇಲೇನು ಶ್ರೀಕಾಂತಜೀನ ಕೊಲ್ಲೋದಕ್ಕೆ ಸೀಕ್ರೆಟ್ಟಾಗಿ ಪ್ಲಾನು ಮಾಡಿ ಕಳಿಸಿದರು ರೌಡಿಗಳನ್ನ.

ಸರೋಜ : ಆಮೇಲೆ?

ಪ್ರಕಾಶ್ : ಜನ ಸೇರಿದ್ದಾರೆ. ಅಷ್ಟರಲ್ಲಿ ಶ್ರೀಕಾಂತಜೀ ಬಂದ. ಜಯ ಜನಕಾರ ಕೂಗಿದರು. ಕುಣಿದರು. ಇನ್ನೇನು ಶ್ರೀಕಾಂತಜೀ ಡಯಾಸ್ ಹತ್ತಬೇಕು. ಕರೆಂಟ್ ಹೋಯ್ತು!

ಸರೋಜ : ಮುಂದಿನದೆಲ್ಲ ನನಗ್ಗೊತ್ತು. ಯಾರೋ ಶ್ರೀಕಾಂತಜೀ ಮೇಲೆ ಗುಂಡು ಹಾರಿಸಿದರು.

ಪ್ರಕಾಶ್ : ಹೌದು.

ಸರೋಜ : ಶ್ರೀಕಾಂತಜೀ ಅಲ್ಲೇ ಸತ್ತು ಬಿದ್ದ, ಜನ ಗಲಾಟೆ ಮಾಡಿದ್ರು.

ಪ್ರಕಾಶ್ : ಹೌದು.

ಸರೋಜ : ನೀವು ತಪ್ಪಿಸಿಕೊಂಡು ಎಲ್ಲೆಲ್ಲೋ ಸುತ್ತಾಡಿ ಇಲ್ಲಿಗೆ ಬಂದ್ರಿ. ಸರಿ ತಾನೆ?

ಪ್ರಕಾಶ್ : ಹೌದು. ನಿನಗೆ ಇದೆಲ್ಲ ಹ್ಯಾಗೆ ಗೊತ್ತಾಯ್ತು?

ಸರೋಜ : ಇಷ್ಟೂ ಗೊತ್ತಾಗೋದಿಲ್ವಾ? ಜನ ಮಾತಾಡಿಕೊಂಡು ಹೋಗ್ತಾ ಇದ್ರು ಕೇಳ್ದೆ ಹೋಗ್ಲಿ ಈಗ್ಲಾದ್ರೂ ಪದ್ಯ ಓದ್ತೀರಾ?

ಪ್ರಕಾಶ್ : ಪದ್ಯ ಈಗ ಬೇಡ. ನಿನ್ನ ಕಾಮನ್‌ಸೆನ್ಸ್‌ಗೆ ಕೊನೇ ಪಕ್ಷ ಒಂದು ಕಿಸ್ ಕೊಡಬೇಕು.

ಸರೋಜ : ಥೂ ನಿಮಗೊಂಚೂರೂ ನಾಚ್ಕೆ ಇಲ್ಲ, ಯಾರಾದರೂ ನೋಡಿದರೆ ....

ಪ್ರಕಾಶ್ : ಇದೊಳ್ಳೆ ಚೆನ್ನಾಗಿದೆಯೆ! ನಾವಿಬ್ರೂ ಇರೋ ಮನೇಲಿ ಇನ್ಯಾರೆ ನೋಡೋಕ್ಬರ ಬೇಕು?

ಸರೋಜ : ಯಾರೂ ಇಲ್ಲಾ ಅನ್ನೋಣ. ಆದರೆ ಯಾವುದಕ್ಕೂ ಹೊತ್ತು ಗೊತ್ತು ಅಂಥ ಇರಲ್ವಾ?

ಪ್ರಕಾಶ್ : ಆಯ್ತು  ಮಹರಾಯಳೆ ಊಟ ಬೇಡ ಅಂತಿ. ನನಗೂ ಹಸಿವಿಲ್ಲ ಬೇಡ, ಪದ್ಯ ಬೇಕೂ ಅಂತಿ. ನನಗೇನೋ ಅನುಮಾನವೆ. ಹೋಗ್ಲಿ ಇನ್ನು ಮಲಗಬಹುದಲ್ಲ, *(ಏಳುವನು. ತಕ್ಷಣ ಸರೋಜ ಅಡ್ಡ ಬರುವಳು.)*

ಸರೋಜ : ನೋಡಿ ನಿಮ್ಜೊತೆ ನಾನು ಚರ್ಚೆ ಮಾಡಬೇಕು. ನೀವಿಲ್ಲದಾಗ ನಿಮ್ಮ ಪದ್ಯ ಓದಿದೆ, ನನಗೆ ಅರ್ಥ ಆಗ್ಲಿಲ್ಲ, ಒಂದ್ಸೂರು ಹೇಳಿಕೊಡ್ತೀರಾ?

ಪ್ರಕಾಶ್ : ಓದಿದೆಯಾ? ಯಾವುದು ನಿನಗೆ ಅರ್ಥ ಆಗ್ಲಿಲ್ಲ ಹೇಳು.

ಸರೋಜ : ಕಣ್ಣಿಂದ ಪಿನ್ನು ಚುಚ್ಚಿ ಅಂಥ ಏನೇನೋ ಇದೆಯಲ್ಲ ಮಹರಾಯರೆ, ಅದನ್ನೇ ಹೇಳಿದ್ದು.

ಪ್ರಕಾಶ್ : ಇವೊತ್ತೇನೋ ಆಗಿದೆಯೆ ನಿನಗೆ, ಶ್ರೀಕಾಂತಜೀ ಕೊಲೆ ಸುದ್ಧಿ ಹೇಳೂ ಅಂತಿ. ಬೇಡಾ ಅಂತಿ.

ಸರೋಜ : ಹೇಳಿ ಹೇಳಿ ಅದನ್ನೇ ಮಾತಾಡೋಣ . ಬೇಕಾದ್ರೆ ಆ ಘಟನೆ ಬಿಟ್ಟು ಬರೀ ರಾಜಕೀಯ ಮಾತಾಡಬಹುದಲ್ಲಾ?

ಪ್ರಕಾಶ್ : ನಿನಗ್ಗೊತ್ತಿದೆ ನಮ್ಮಿಬ್ಬರಿಗೂ ಅದರಲ್ಲಿ ಆಸಕ್ತಿ ಇಲ್ಲಾ ಅಂತ.

ಸರೋಜ : ಯಾಕಿಲ್ಲ, ಇದೆ. ನೋಡಿ ನೀವು ಹೇಳೋದು ಶ್ರೀಕಾಂತಜೀ ಕೊಲೆ ಮಾಡ್ಸೋದಿಕ್ಕೆ ರೂಲಿಂಗ್ ಪಾರ್ಟಿಯವರು ಕಳಿಸಿದರೂ ಅಂತ, ಅಲ್ವಾ?

ಪ್ರಕಾಶ್ : ಹೌದು.

ಸರೋಜ : ಹೀಗೂ ಇರಬಹುದಲ್ಲ. ಆಪೋಸಿಟ್ ಪಾರ್ಟಿಯವರೇ ಕಳಿಸಿರಬಹುದು.

ಪ್ರಕಾಶ್ : ಅಂದ್ರೆ?

ಸರೋಜ : ಶ್ರೀಕಾಂತಜೀನ್ನ ಯಾರು ಕೊಂದ್ರೂ ರೂಲಿಂಗ್ ಪಾರ್ಟಿಯವರೇ ಕೊಲ್ಲಿಸಿದರೂ ಅಂತ ಜನ ನಂಬ್ತಾರೆ. ಆಗ ಜನರ ಸಹಾನುಭೂತಿ ಆಪೋಸಿಟ್ ಪಾರ್ಟಿಯವರಿಗೆ ಸಿಕ್ಕು ಅವರು ಗೆದ್ದು ಬರ್ತಾರೆ.

ಪ್ರಕಾಶ್ : ನೀನು ಹೇಳೋದು ಅರ್ಥವಾಗಲಿಲ್ಲ.

ಸರೋಜ : ಅರ್ಥವಾಗದ್ದೇನಿದೆ ಇದರಲ್ಲಿ? ಆಪೋಸಿಟ್ ಪಾರ್ಟಿಯವರೇ ಶ್ರೀಕಾಂತಜೀನ ಕೊಲ್ಲಿಸಿದರೂ ಅಂತ *(ಈಗ ಬೆಡ್ ರೂಮಿನಲ್ಲಿದ್ದ ಸಿದ್ದಲಿಂಗು ಕಿಟಕಿ ಬಾಗಿಲು ತೆರೆದು ಪರಾರಿ ಆಗುವನು.)*

ಪ್ರಕಾಶ್ : *(ಆಶ್ಚರ್ಯಭರಿತನಾಗಿ)* ಛೇ ಏನು ಹೆಣ್ಣು ಬುದ್ಧಿ ಇದು. ನೀನು ಹೇಳಿದ ಹಾಗೆಯೇ ಇದ್ದಿರಲೂಬಹುದು.
*(ಮಲಗುವುದಕ್ಕೆ ರೆಡಿ ಆಗುತ್ತಾ)* ಆದರೂ ಸರೋಜ ನಾನು ಬುದ್ಧಿವಂತನೇ.

ಸರೋಜ : ಹ್ಯಾಗೆ?

ಪ್ರಕಾಶ್ : ಬುದ್ಧಿವಂತಿಕೆ ಅಂದ್ರೇನು ಗೊತ್ತಾ? ಹೆಣ್ಣು ಯಾವುದು, ಹಣ್ಣು ಯಾವುದೂ ಅಂತ ತಿಳಿಯೋದು. ನನ್ನ ಕೇಳು *(ಅವಳನ್ನು ತೋರಿಸುತ್ತ)* ಇದೇನು ಅಂತ. ಇದು ನನ್ನ ಸೇಬುಹಣ್ಣು *(ಎನ್ನುತ್ತ ಅವಳನ್ನು ಎತ್ತಿಕೊಳ್ಳುವನು. ತಕ್ಷಣ ಇಳಿಸಿ)* ಇದೇನೆ ಮೈ ಸುಡ್ತಾ ಇದೆ, ಜ್ವರಾನಾ?

ಸರೋಜ : ಇರ್ಬೇಕು. ನೀವು ಹೋದಾಗಿನಿಂದ ಒಂದು ಥರಾ ಆಗ್ತಿದೆ.

ಪ್ರಕಾಶ್ : ಅದೇ ಅಂದ್ಕೊಂಡೆ, ಈವೊತ್ತು ಒಂಥರಾ ಇದ್ದೀಯಲ್ಲಾ. ನಾ ಬಂದಕೂಡ್ಲೆ ಹೇಳ್ಬಾರದಾ?

ಸರೋಜ : ಅಷ್ಟಿರಲಾದರೂ ಅಂದ್ಕೊಂಡೆ.

ಪ್ರಕಾಶ್ : ಸರಿ. ಜೊತೆ ಬರ್ತೀಯಾ ಅಥವಾ ಡಾಕ್ಟರನ್ನು ಕರೆತರಲಾ? *(ಎಂದು ಹೊರಡುವನು. ಸರೋಜ ಹೋಗಿ ಬಾಗಿಲಿಗೆ ಅಡ್ಡ ನಿಂತು ಬೇಡಿ ಎಂದು ಹೇಳುತ್ತಾ ಬೆಡ್‌ರೂಮಿನ ಬಾಗಿಲನ್ನು ಸರಿಸಿ ನೋಡುತ್ತಾಳೆ. ಕಿಟಕಿಯ ಬಾಗಿಲು ನಿಚ್ಚಳವಾಗಿ ತೆರೆದಿದೆ. ಸಿದ್ದಲಿಂಗು ಇಲ್ಲದ್ದು ಖಾತ್ರಿಯಾಗಿ ಲೈಟ್ ಹಾಕುತ್ತಾಳೆ.)*

ಸರೋಜ : ಅಥವಾ ಸುಮ್ನೆ ಯಾಕೆ? ರೆಸ್ಟ್ ತಗೊಂಡರೆ ಸರಿ ಹೋಗಬಹುದು ಬಿಡಿ. *(ಹೋಗಿ ಮಲಗುವಳು. ಪ್ರಕಾಶ್ ಮೆಲ್ಲಗೆ ಬೆಡ್‌ರೂಮಿನ ಕಡೆ ಹೊರಡುವನು)*

## ಎರಡು

*(ಅದೇ ಮನೆ. ಹಗಲು ಹನ್ನೆರಡು ಗಂಟೆಯ ಸಮಯ. ಎಲ್ಲಾ ನೀಟಾಗಿವೆ. ಪ್ರಕಾಶ್ ಮತ್ತು ಸರೋಜ ಕೆಲಸಕ್ಕೆ ಹೋಗಿರುವುದರಿಂದ ಬಾಗಿಲಿಗೆ ಕೀಲಿ ಇದೆ. ತುಸು ಸಮಯದ ಬಳಿಕ ಬೆಡ್ ರೂಮಿನ ಕಿಟಕಿ ಬಾಗಿಲನ್ನು ಹೊರಗಿನಿಂದ ಮೊಳೆ ತೂರಿಸಿ ತೆಗೆಯಲಾಗುತ್ತದೆ. ಅದು ತೆರೆದೊಡನೆ ಮೆಲ್ಲಗೆ ರುದ್ರಪ್ಪ ಬರುತ್ತಾನೆ. ಉದ್ದ ತೋಳಿನ ಖಾದಿ ಜುಬ್ಬಾ ಮತ್ತು ಧೋತರ ಉಟ್ಟ ಗಂಭೀರ ಕುಳ, ತುಂಬಾ ಕಂಡುಂಡವನು. ವಿರೋಧ ಪಕ್ಷದ ನಾಯಕ. ಯಾವುದರಿಂದಲೂ ಅವನಿಗೆ ಆಘಾತವಾಗುವುದಿಲ್ಲ. ಆ ಮನೆಯಲ್ಲಿ ಅನೇಕ ವರ್ಷ ವಾಸಿಸಿದವನಂತೆ ನಾರ್ಮಲ್ಲಾಗಿದ್ದಾನೆ, ಕಿಟಕಿ ಬಾಗಿಲು ಮುಚ್ಚಿ ಕಿಚನ್ನಿಗೆ ಹೋಗಿ ಗ್ಲಾಸು ತರುತ್ತಾನೆ. ಸೋಫಾದ ಮೇಲೆ ಕುಳಿತು ಜೇಬಿನಿಂದ ವಿಸ್ಕಿಯ ಕ್ವಾರ್ಟರ್ ಬಾಟ್ಲಿ ತೆಗೆದುಕೊಂಡು ಕುಡಿಯತೊಡಗುವನು. ಸಿಗರೇಟು ಹತ್ತಿಸಿ ಫೋನ್ ಮಾಡುವನು. ಶೂನ್ಯ ಸ್ಥಳದಲ್ಲಿ ಕೃಷ್ಣಪ್ಪ ಫೋನೆತ್ತಿಕೊಳ್ಳುವನು.)*

ರುದ್ರಪ್ಪ : ಹಲೋ ಕೃಷ್ಣಪ್ಪನವರಾ?

ಕೃಷ್ಣಪ್ಪ : ಹೌದು. ತಾವ್ಯಾರು?

ರುದ್ರಪ್ಪ : ನಾನು ರುದ್ರಪ್ಪ. ನಮಸ್ಕಾರ ಸ್ವಾಮಿ.

ಕೃಷ್ಣಪ್ಪ : ನಮಸ್ಕಾರ ಸಾ. ಹೆಲ್ಲಿಂದ ಮಾತಾಡ್ತಿದ್ದೀರಿ?

ರುದ್ರಪ್ಪ : ಯಾರೋ ಸ್ನೇಹಿತರ ಮನೆಯಿಂದ. ಹ್ಯಾಗಿದೆ ಸ್ವಾಮಿ ಚುನಾವಣೆ ಸೀನು?

ಕೃಷ್ಣಪ್ಪ : ಬಂಬಾಟಾಗಿದೆ ಸಾ. ಇನ್ನೂರ ಐವತ್ತರ ಪೈಕಿ ಇನ್ನೂರು ಸೀಟು ನಮ್ಮ ಪಾಟಿಗೆ ಕಂಡಿತ. ಈಗ ಸಿರ್ಕಾಂತಜೀ ಇರಬೇಕಿತ್ತು ಸಾ. ಜನ ರೂಲಿಂಗ್ ಪಾರ್ಟಿಗೆ ಉಗೀತಿದಾರೆ. ಸಿರ್ಕಾಂತಜೀನ್ನ ಕೊಂದ ಪಾರ್ಟಿಗೆ ಓಟು ಬರೀಬ್ಯಾಡಿ ಅಂತ ಹೆಂಗಸರು ಹೊಳಹೊಳಗೆ ಪ್ರಚಾರ ಮಾಡ್ತಿದಾರೆ. ಸಿರ್ಕಾಂತಜೀ ಕೊಲೆ ಹಾಯ್ತು. ಹಾಯ್ತು ಆ ಪಾರ್ಟಿ ನನ್ಮಕ್ಕಳು ಸೆಗಣಿ ತಿಂದರು ಸಾ. ನಾವ್ ಗೆಲ್ಲೋದು ನೂರಕ್ಕೆ ಸೆಂಟ್ ಪರ್ಸೆಂಟ್ ಗ್ಯಾರಂಟಿ.

ರುದ್ರಪ್ಪ : ಈವೊತ್ತಿನ ಪೇಪರ್ ನಲ್ಲಿ ನೀವೇನೋ ಹೇಳಿಕೆ ಕೊಟ್ಟಿದ್ದೀರಲ್ಲಾ ಸ್ವಾಮಿ?

ಕೃಷ್ಣಪ್ಪ : ಸರೀಗಿದೆಯಾ ಸಾ?

ರುದ್ರಪ್ಪ : ಅಲ್ಲಾಸ್ವಾಮಿ. ಇದು ಆಲೋ ಪಕ್ಷದ ಕುತಂತ್ರ ಅಂತಾ ನಾನು ಹಿಂದೆ ಹೇಳಿಕೆ ಕೊಟ್ಟಿದ್ದೆ. ಈಗ ನೀವು ಈ ಥರಾ ಹೇಳಿಕೆ ಕೊಟ್ಟರೆ ನಮ್ಮ ನಮ್ಮಲ್ಲೇ ಕಚ್ಚಾಟ ಇದೆ ಅಂತ ಜನ ಅಂದ್ಕೊಳ್ಳೋದಿಲ್ವಾ? ಶ್ರೀಕಾಂತಜೀ ನಮ್ಮ ಪಾರ್ಟಿಯವರು ನಾವೇ ಅವರನ್ನ ಕೊಲೆ ಮಾಡಸ್ತೀವಾ?

ಕೃಷ್ಣಪ್ಪ : ಅಂಗಲ್ಲಾ ಸಾ ನಾ ಏಳೀದ್ದು. ನಿನ್ನೆ ಮುಕ್ಕಮಂತ್ರಿ ಏನೇಳಿಕೆ ಕೊಟ್ಟವ್ನೆ, ನೀವ್ ನೋಡ್ಲಿಲ್ವಾ? ನಟಸಾರ್ವಭೌಮ ಸಿರ್ಕಾಂತಜೀ ಕೊಲೆಯಿಂದ ಎಡರಂಗದ ಹೊಳಗಿನ ಹೊಳ ಜಗಳ ಬಯಲಿಗೆ ಬಂದಿದೆ ಹಂತ. ಹದಕ್ಕೆ ನಾ ಏಳಿದ್ದು ನಾವೇ ಕೊಲೆ ಮಾಡಿರ್ಲಿ, ಹವ್ರೇ ಮಾಡಿರ್ಲಿ, ಕೊಲೆಗಾರ ಸಿಕ್ರೆ ತಾನೇ ಗೊತ್ತಾಯ್ತದೆ-ಅಂತ. ಸರಿ ಅಲ್ವಾ?

ರುದ್ರಪ್ಪ : ಸರಿ ಸ್ವಾಮಿ. ಈ ಟೈಂನಲ್ಲಿ ಇಂಥ ಹೇಳಿಕೆ ನೀವು ಕೊಡಬಾರ್ದಿತ್ತು.

ಕೃಷ್ಣಪ್ಪ : ಬಿಡಿ ಸಾ. ಓಟೆಂಗೆಲ್ಲ ಮುಗಿದೋಗದೆ, ಜನ ಗುಜು ಗುಜು ಮಾತಾಡಿಕೋತಾರೆ. ನಾವ್ ಸುಮ್ನಿರಾಕಾಯ್ತದಾ?

ರುದ್ರಪ್ಪ : ಆದ್ರೆ ನಮ್ಮ ಪಾರ್ಟಿಯವರ್ಯಾರೂ ಕೊಲೆಗಾರರಲ್ವಲ್ಲ.

ಕೃಷ್ಣಪ್ಪ : ಅಥೆಂಗೇಳಾದು? ಪೋಲೀಸರೇಳತವ್ರ; ಸಿರ್ಕಾಂತಜೀನ್ನ ಕೊಂದವನು ಸಿದ್ದಲಿಂಗೂನೇ ಅಂತ. ನಾವು ಬ್ಯಾಡ ಅಂತ ಬಡ್ಕೊಂಡ್ರೂ ನೀವ್ ಬ್ಯಾರೆ ಅವನ್ನ ಪಾರ್ಟಿಗೆ ಸೇರಿಸ್ಕಂಡ್ರಿ ಆ ನನ್ಮಗ ಬಚ್ಚಿಟ್ಕೊಂಡವ್ನು ಒರಕ್ಬಂದಿಲ್ಲ. ಏನ್ಮಾಡಾದೇಳಿ.

ರುದ್ರಪ್ಪ : ಸಿದ್ದಲಿಂಗೂನ್ನ ನಾನೇ ಪಾರ್ಟಿಗೆ ಸೇರಿಸ್ಕೊಂಡೆ ಸರಿ, ಅದರರ್ಥ ನಾನೂ ಕೊಲೆ ಸಂಚಿನಲ್ಲಿ ಸೇರ್ಕೊಂಡಿದೀನಿ ಅಂತ ನಿಮ್ಮ ಅಭಿಪ್ರಾಯ ಅಲ್ವಲ್ಲ? ಇಷ್ಟಾಗಿ ಸಿದ್ದಲಿಂಗೂನೆ ಶ್ರೀಕಾಂತಜೀನ್ನ ಕೊಲೆ ಮಾಡ್ದ ಅಂತ ಏನ್ ಸಾಕ್ಷಿ ಇದೆ?

ಕೃಷ್ಣಪ್ಪ : ನಿಮ್ಗೂ ಅದಕ್ಕೂ ಸಂಬಂಧ ಐತೆ ಅಂತ ಏಳ್ಳಿಲ್ಲ ಸಾ. ಸಿದ್ದಲಿಂಗೂ ಸಿಕ್ರೆ ಅದೇನಿದ್ರೂ ಗೊತ್ತಾಯ್ತದಲ್ವ? ಇಷ್ಟ್ರಾಗೆ ಪಾರ್ಟಿ ಮೀಟಿಂಗೆ ಬಂದು ಎಲ್ಲಾ ಏಳತಿವ್ನಿ ಅಂತ ದಾನಪ್ಪನಿಗೆ ಕಾಗದ ಬೇರೆ ಬರದವ್ನೆ.

ರುದ್ರಪ್ಪ : *(ಚಕಿತನಾಗಿ)* ಒಳ್ಳೇದಾಯ್ತು ಬಿಡಿ. ಸತ್ಯ ಏನಿದೆ ಅಂತ ಆಗ್ಲಾದ್ರೂ ಎಲ್ರಿಗೂ ಗೊತ್ತಾಗಬಹುದು. ಕೊನೇಪಕ್ಷ, ಆತ ಬರೋವರೆಗಾದರೂ ನಾವ್ ನಾವ್ ಕಚ್ಚಾಡೋದು ಸರಿ ಅಲ್ಲ, ಅಲ್ವಾ?

ಕೃಷ್ಣಪ್ಪ : ಅಂಗೇ ಮಾಡಾನೇಳಿ. ನಮಸ್ಕಾರ.
*(ಕೃಷ್ಣಪ್ಪ ಫೋನ್ ಕೆಳಗಿಡುವನು. ರುದ್ರಪ್ಪನೂ ಕೆಳಗಿಡುತ್ತಾನೆ. ಈಗ ಇವನ ಮುಖದ ಮೇಲೆ ಚಿಂತೆ ಮೂಡುತ್ತದೆ. ಆಗಾಗ ಸೋಫಾದ ಬಳಿಗೆ ಹೋಗಿ ಕುಡಿದು ಸಿಗರೇಟು ಸೇದುತ್ತಾ ಅತ್ತಿತ್ತ ಅಲೆದಾಡುವನು, ಅಷ್ಟರಲ್ಲಿ ಕಿಟಕಿಯ ಬಾಗಿಲು ಮೆಲ್ಲಗೆ ತೆರೆದುಕೊಳ್ಳುವುದು. ರುದ್ರಪ್ಪ ಅಡಗುವನು. ಈಗ ಬಂದವನು ಶೀನಿ ... ನೀಟಾಗಿ ಬುಶ್ಶರ್ಟ್ ಪ್ಯಾಂಟ್ ಹಾಕಿದ್ದರೂ ಅವನ ಮುಖದ ಒರಟುತನವನ್ನು ಮುಚ್ಚಲಿಕ್ಕಾಗಿಲ್ಲ, ಅವನು ರುದ್ರಪ್ಪನ ಬೇಹುಗಾರ. ಒಳಗೆ ಬಂದೊಡನೆ ತುಂಬ ಚಟುವಟಿಕೆಯಿಂದ ಬೆಡ್ ರೂಮನ್ನು ಹುಡುಕುತ್ತಾ ಹಾಸಿಗೆ ಎತ್ತಿದಾಗ ಅವನಿಗೆ ಪಿಸ್ತೂಲು ಕಾಣಿಸುತ್ತದೆ . ಸಂತೋಷ ಮತ್ತು ಆಶ್ಚರ್ಯವಾಗುತ್ತದೆ. ಹಾಸಿಗೆ ಹಾಗೇ ಇಟ್ಟು ಹುಡುಕುತ್ತಾ ಹಾಲಿಗೆ ಬಂದಾಗ ಟೀ ಪಾಯ್ ಮೇಲಿನ ಗ್ಲಾಸು ಮತ್ತು ವಿಸ್ಕಿ ಬಾಟ್ಲಿ ನೋಡಿ ಚಕಿತನಾಗುತ್ತಾನೆ, ತಕ್ಷಣ ಹೋಗಿ ಕಿಚನ್, ಬಾತ್‌ರೂಮಿನಲ್ಲಿ ಯಾರು ಇಲ್ಲದ್ದನ್ನು ಖಾತ್ರಿ ಮಾಡಿಕೊಂಡು ಮುಂಬಾಗಿಲು ಜಗ್ಗಿ ನೋಡುತ್ತಾನೆ. ಯಾರು ಇಲ್ಲವೆಂದು ಖಾತ್ರಿ ಆದಮೇಲೆ ಸೋಫಾ ಬಳಿ ಬಂದು ಗ್ಲಾಸಿಗೆ ಉಳಿದ ವಿಸ್ಕಿ ಬಗ್ಗಿಸಿ ಖಾಲಿ ಮಾಡಿ ಮತ್ತೆ ಹುಡುಕತೊಡಗಿದಾಗ ರುದ್ರಪ್ಪ ಕಾಣಿಸಿಕೊಳ್ಳುತ್ತಾನೆ. ತಕ್ಷಣ ಶೀನಿ ಚಾಕು ತೆಗೆಯುವನು. ಎದುರಿಸಬೇಕೆಂದಾಗ ರುದ್ರಪ್ಪನನ್ನು ಗುರುತಿಸಿ ಗಾಬರಿಯಾಗಿ ಚಾಕು ಒಳಗಿಟ್ಟುಕೊಂಡು ಸಾರ್ ... ಸಾರ್ ... ಎಂದು ತೊದಲುತ್ತಾನೆ.)*

ರುದ್ರಪ್ಪ : ಇಲ್ಲಿಗ್ಯಾಕೆ ಬಂದೆ?

ಶೀನಿ : ತಾವಿಲ್ಲಿದ್ದದ್ದು ಗೊತ್ತಿರಲಿಲ್ಲ ಸಾರ್. ಸಿದ್ದಲಿಂಗು ಆ ದಿನ ಇಲ್ಲೇ ಅಡಗಿದ್ದ.

ರುದ್ರಪ್ಪ : *(ಚಕಿತನಾಗಿ)* ಏನು?

ಶೀನಿ : ಹೌದು ಸಾರ್. ಅವನ ಹಿಂದಿನಿಂದಲೇ ನಾನೂ ಓಡಿ
ಬಂದೆ. *(ರುದ್ರಪ್ಪ ತನ್ನ ಆಶ್ಚರ್ಯವನ್ನು ನಿಯಂತ್ರಿಸಿಕೊಂಡು ಕೂರುವನು.)*

ರುದ್ರಪ್ಪ : ಒಳಗಡೆ ಹೋಗಿ ಒಂದು ಗ್ಲಾಸ್ ತಗೊಂಬಾ *(ಶೀನಿ ಕಿಚನ್ನಿಗೆ ಹೋಗಿ ಎಡಕ್ಕೆ ತಿರುಗುವನು.)* ಎಡಗಡೆ ಅಲ್ಲ. ಈ ಕಡೆ ಬಲಕ್ಕೆ ಹೋಗು. ಷೋಕೇಸ್ ಕಾಣ್ಸತ್ತಲ್ಲ, ಅದರಲ್ಲಿದೆ.
*(ಶೀನಿ ಒಳಗಿನಿಂದ ಗ್ಲಾಸು ತರುವನು. ರುದ್ರಪ್ಪ ಇನ್ನೊಂದು ಜೇಬಿನಿಂದ ಮತ್ತೊಂದು ಕ್ವಾರ್ಟರ್ ಬಾಟ್ಲಿ ತೆಗೆದು ಇಬ್ಬರಿಗೂ ಸುರಿಯುವನು. ಶೀನಿ ತೆಗೆದುಕೊಳ್ಳದೆ ಸಂಕೋಚದಿಂದಿರುವಾಗ 'ನಾಚ್ಕೋಬೇಡ ತಗೊ'.... ಎಂದು ಹೇಳಲು ಕುಡಿಯುವನು. ತನ್ನ ಗುಟ್ಟು ಗೊತ್ತಾಗಿರುವುದರಿಂದ ಉಪಚಾರ ಮಾಡಿಸಿಕೊಳ್ಳುವುದು ಸಲ್ಲದೆನಿಸಿ ಪ್ರೇಕ್ಷಕರತ್ತ ತಿರುಗಿ ಒಂದೇ ಗುಟುಕಿಗೆ ಕುಡಿದು ಗ್ಲಾಸನ್ನು ಟೀಪಾಯಿಯ ಮೇಲಿಡುವನು.)*

ರುದ್ರಪ್ಪ : ಸಿದ್ದಲಿಂಗು ಆ ದಿನ ಇಲ್ಲಿಗೆ ಬಂದಿದ್ನ?

ಶೀನಿ : ಹೌದು ಸಾರ್.

ರುದ್ರಪ್ಪ : ಮತ್ತೆ ಈ ಮುಂಚೆ ನನಗ್ಯಾಕೆ ಹೇಳಲಿಲ್ಲ?

ಶೀನಿ : ಮನೆ ರಾತ್ರಿ ನೋಡಿದ್ದೆ. ಕತ್ತಲಿತ್ತು. ಲೋಕೇಶನ್ ಬಗ್ಗೆ ಅನುಮಾನ ಇತ್ತು. ಏನಾದರೂ ಸುಳಿವು ಸಿಕ್ಕರೆ ಖಾತ್ರಿ ಮಾಡಿಕೊಂಡು ಹೇಳೋಣ ಅಂತಿದ್ದೆ.

ರುದ್ರಪ್ಪ : ಸಿಕ್ಕಿತಾ ಏನಾದ್ರೂ?

ಶೀನಿ : ಸಿದ್ದಲಿಂಗು ತನ್ನ ಪಿಸ್ತೂಲು ಇಲ್ಲೇಬಿಟ್ಟಿದಾನೆ.

ರುದ್ರಪ್ಪ : ಎಲ್ಲಿದೆ?

ಶೀನಿ : ಹಾಸಿಗೆ ಕೆಳಗೆ *(ತಕ್ಷಣ ಇಬ್ಬರೂ ಎದ್ದು ಬೆಡ್‌ರೂಮಿಗೆ ಬರುವರು. ಶೀನಿ ಹಾಸಿಗೆ ಎತ್ತಿ ತೋರಿಸುವನು)*

ರುದ್ರಪ್ಪ : ಇನ್ನೇನಾದ್ರೂ ಸಿಕ್ಕಿತಾ?

ಶೀನಿ : ಇಲ್ಲ.

ರುದ್ರಪ್ಪ : ಈ ಮನೆಯವರಿಗೆ ಇದು ಗೊತ್ತಾ?

ಶೀನಿ : ನನಗಿನ್ನೂ ಅಂದಾಜಾಗಿಲ್ಲ. *(ಇಬ್ಬರೂ ತಿರುಗಿ ಹೋಗಿ ಮತ್ತೆ ಅದೇ ಭಂಗಿಯಲ್ಲಿ ಕೂರುವರು.)*

ರುದ್ರಪ್ಪ : ಸಿದ್ದಲಿಂಗು ಇಲ್ಲಿಗೆ ಬಂದಾಗ ಮನೇಲಿ ಯಾರಿದ್ರು?

ಶೀನಿ : ಹೆಂಗಸಿತ್ತು. ಇವನು ಬಂದು ಕಾಲಿಂಗ್ ಬೆಲ್ಲೊತ್ತಿದಾಗ ಅವಳೇ ಬಾಗಿಲು ತೆಗೆದಳು. ತಕ್ಷಣ ಬಾಗಿಲು ಮುಚ್ಚಿಕೊಂಡಿತು. ಒಳಗಡೆ ಏನಾದರೂ ಗಲಾಟೆ ಆಗುತ್ತ ಅಂತ ಕಾದು ನೋಡಿದೆ. ಬಹುಶಃ ಇವನು ಅವಳ ಬಾಯಿ ಹಿಡಿದಿರಬೇಕು. ಇಲ್ಲ ಇಬ್ಬರೂ ಪರಿಚಿತರಾದರೂ ಇರಬೇಕು. ಎಷ್ಟೊತ್ತಾದರೂ ನನಗೇನೂ ಕೇಳಿಸಲೇ ಇಲ್ಲ. ಅಷ್ಟರಲ್ಲಿ ಈ ಮನೆ ಕಡೆ ಯಾರೋ ಓಡಿ ಬರೋದು ಕಂಡಿತು. ಅಡಗಿಕೊಂಡು ಪಾರಾದೆ.

ರುದ್ರಪ್ಪ : ಬಂದವರು ಯಾರು?

ಶೀನಿ : ಈ ಮನೆ ಯಜಮಾನ.

ರುದ್ರಪ್ಪ : ಗೊತ್ತಾ ನಿನಗವನು?

ಶೀನಿ : ಗೊತ್ತಿಲ್ಲ. ನಿನ್ನೆಯಲ್ಲಾ ವಿಷಯ ತಿಳಿದುಕೊಂಡೆ. ಅದಕ್ಕೇ ನಿಮ್ಮನ್ನ ನೋಡ್ಲಿಕ್ಕೆ ಆಗ್ಲಿಲ್ಲ. ಅವನು ಸರ್ಕಾರಿ ಕಾಲೇಜಿನಲ್ಲಿ ಲೆಕ್ಚರರ್, ಪ್ರಕಾಶ್ ಅಂತ ಹೆಸರು. ಅವನು ಪರವಾಗಿಲ್ಲ. ಅವನ ಹೆಂಡತಿ ವಿಧಾನ ಸೌಧದಲ್ಲಿ ಸೆಕೆಂಡ್ ಡಿವಿರ್ಜ ಕ್ಲಾರ್ಕು. ಫೈನಾನ್ಸ್ ಡಿಪಾರ್ಟ್‌ಮೆಂಟ್.

ರುದ್ರಪ್ಪ : ಇಬ್ಬರೂ ಹ್ಯಾಗೆ; ವೀಕ್ ಪಾಯಿಂಟೇನಾದರೂ ಇದೆಯಾ?

ಶೀನಿ : ಇವಳಿಗೆ ಆಸೆ ಜಾಸ್ತಿ. ಸಾಲ ಮಾಡಿ ಫ್ರಿಜ್ ತಂದಿದಾಳೆ. ಬಣ್ಣದ ಟಿ.ವಿ. ಮೇಲೆ ಕಣ್ಣಿದೆ. ಇತ್ತೀಚೆಗೆ ಗಂಡನಿಗೆ ಹೇಳದೆ ಸಾಲ ಮಾಡಿ ಚಿನ್ನದ ಬಳೆ ಮಾಡ್ಸಿದಾಳೆ. ಈ ಹೆಂಗಸನ್ನು ನಾವು ಹಿಡೀಬಹುದು.

ರುದ್ರಪ್ಪ : ಹ್ಯಾಗೆ?

ಶೀನಿ : ಇವಳಿಗೆ ಸಾಲಕೊಟ್ಟವನು, ಕಾಂತಿಲಾಲ್.

ರುದ್ರಪ್ಪ : ನಮ್ಮ ಬ್ರೋಕರ್ ಕಾಂತಿಲಾಲ್?

ಶೀನಿ : ಹೌದು. ಹಿಂದೊಮ್ಮೆ ಪೋಲೀಸ್ ಕೇಸ್‌ನಲ್ಲಿ ಅವನನ್ನು ನೀವೇ ಬಚಾವ್ ಮಾಡಿದ್ರಿ. *(ರುದ್ರಪ್ಪ ಫೋನ್ ಮಾಡುವನು. ಶೂನ್ಯ ಸ್ಥಳದಲ್ಲಿ ಇನ್ಸ್ಪೆಕ್ಟರ್ ಫೋನೆತ್ತಿಕೊಳ್ಳುವನು)*

ರುದ್ರಪ್ಪ : ಯಾರು ಇನ್ಸ್ಪೆಕ್ಟರಾ?

ಇನ್‌ಸ್ಪೆಕ್ಟರ್ : ಹೌದು. ನೀವ್ಯಾರು?

ರುದ್ರಪ್ಪ : ನಾನು ರುದ್ರಪ್ಪ. ಆಪೋಸಿಟ್ ಪಾರ್ಟಿ ಲೀಡರ್.

ಇನ್‌ಸ್ಪೆಕ್ಟರ್ : ನಮಸ್ಕಾರ ಸಾರ್. ಏನ್ಸಾರ್ ಅಪರೂಪ?

ರುದ್ರಪ್ಪ : ಮನೆ ಕಡೆ ಬರ್ತೀರೇನು?

ಇನ್‌ಸ್ಪೆಕ್ಟರ್ : ಓಯಸ್, ಈಗ್ಲೇ ಹೊರಟೆ. *(ಇಬ್ಬರೂ ಫೋನಿಡುವರು)*

ರುದ್ರಪ್ಪ : ಪಾರ್ಟಿ ಆಫೀಸ್ ಕಡೆ ಹೋಗಿದ್ದೆಯಾ?

ಶೀನಿ : ಹೋಗಿದ್ದೆ. ಮೊದಮೊದಲು ಯಾರಿಗೂ ಭರವಸೆ ಇರಲಿಲ್ಲ. ಆದರೆ ಈಗ ಮಾತ್ರ ನಂ ಪಾರ್ಟಿನೇ ಗೆಲ್ಲೋದು ಅಂತ ಎಲ್ರೂ ಹೇಳ್ತಿದಾರೆ. ಆಗಲೇ ಮುಖ್ಯಮಂಥ್ರಿ ಯಾರು ಆಗಬೇಕಂತ ಒಳಗೊಳಗೇ ಚರ್ಚೆ ಮಾಡ್ತಾ ಇದ್ದಾರೆ.

ರುದ್ರಪ್ಪ : ಯಾರ್ಯಾರಂತೆ?

ಶೀನಿ : ಆ ದಾನಪ್ಪ ಬಹಳ ಚುರುಕಾಗಿ ಕೃಷ್ಣಪ್ಪನ ಹೆಸರನ್ನು ಹೇಳಿಕೊಂಡು ಓಡಾಡ್ತಿದ್ದಾನೆ. ಈ ಸಲ ಹಿಂದುಳಿದ ವರ್ಗದವರೇ ಮುಖ್ಯಮಂತ್ರಿ ಆಗ್ಬೇಕು. ಅದಕ್ಕೆ ಕೃಷ್ಣಪ್ಪನೇ ಸರಿ ಅಂತ ಪ್ರಚಾರ ಮಾಡ್ತಿದಾನೆ. ನಿಮ್ಮ ಹೆಸರನ್ನೇನೋ ಕೆಲವರು ಹೇಳ್ತಾರೆ, ಆದ್ರೆ….

ರುದ್ರಪ್ಪ : ಏನಾದರೆ?

ಶೀನಿ : ಸಿದ್ದಲಿಂಗೂನೆ ಶ್ರೀಕಾಂತಜೀನ ಕೊಂದದ್ದೂ ಅಂತ ಪುಕಾರಾಗಿದೆ. ಅವನನ್ನು ಪಾರ್ಟಿಗೆ ಸೇರಿಸಿಕೊಂಡವರು ನೀವು. ನಿಮ್ಮ ನಿಮ್ಮಲ್ಲೇ ಏನೋ ಕನೆಕ್ಷನ್ನಿರಬೇಕು ಅಂತ ದಾನಪ್ಪ ಕದ್ದಾಡ್ತಿದಾನೆ.

ರುದ್ರಪ್ಪ : ಆ ದಾನಪ್ಪ ಹ್ಯಾಗೆ?

ಶೀನಿ : ಕೈ ಶುದ್ಧ, ಆದರೆ ಕಚ್ಚೆ ಅಲ್ಲ.

ರುದ್ರಪ್ಪ : ಆಯ್ತು, ಹಿಂದೆ ಸುಶೀಲ ಕೇಸಾಯ್ತಲ್ಲ, ಹಾಗೇ ಆಗ್ಬೇಕು. ಕಾಂತಿಲಾಲನ್ನ ಮನೆ ಕಡೆ ಬರಹೇಳು.

ಶೀನಿ : ಎಸ್ಸಾರ್

*(ಶೀನಿ ನಮಸ್ಕರಿಸಿ ಕಿಟಕಿ ಹಾರಿ ಹೋಗುವನು. ರುದ್ರಪ್ಪ ಫೋನೆತ್ತಿಕೊಳ್ಳುವನು. ಶೂನ್ಯ ಸ್ಥಳದ ಫೋನಿನಲ್ಲಿ ದಾನಪ್ಪ ಬರುವನು. ಆತನ ಪಕ್ಕದಲ್ಲಿ ಕೃಷ್ಣಪ್ಪನೂ ಕೂತಿದ್ದಾನೆ.)*

ರುದ್ರಪ್ಪ : ಯಾರು ದಾನಪ್ಪನವರೇನು? ನಮಸ್ಕಾರ, ನಾನು ರುದ್ರಪ್ಪ ಸ್ವಾಮಿ.

ದಾನಪ್ಪ : ನಮಸ್ಕಾರೀ ಸಾಹೇಬರ.

ರುದ್ರಪ್ಪ : ಹ್ಯಾಗಿದೆ ಸ್ವಾಮಿ ಎಲೆಕ್ಷನ್ ಸೀನು ?

ದಾನಪ್ಪ : ಅಯ್ಯೋ, ಏನ್ ಹೇಳ್ತೀರಿ ನನ್ಮಕ್ಕಳು ರೂಲಿಂಗ್ ಪಾರ್ಟಿಯವರು ಮಣ್ಣು ತಿಂದ್ ಹ್ವಾದದ್ರೀ ಸಾಹೇಬರ.

ರುದ್ರಪ್ಪ : ಶ್ರೀಕಾಂತಜೀ ಜೀವಂತವಾಗಿದ್ದಿದ್ರೆ.

ದಾನಪ್ಪ : ಅಯ್ಯೋ ಯಾಕ್ ನೆನಪು ಮಾಡ್ತೀರ್ರಿ . ಅವರಿದ್ದಿದ್ದರ ಅವರು ನಮ್ಮ ಮುಖ್ಯಮಂತ್ರಿ ಆಗಿರೋದು. ನಮ್ಮ ದುರ್ದೈವರೀ ಸಾಹೇಬರ, ನಮ್ಮ ನಾಡಿನ ಕಲಾ ಪ್ರಪಂಚಕ್ಕೆ ತುಂಬಿ ಬಾರದ ನಷ್ಟ ಆಯ್ತು.

ರುದ್ರಪ್ಪ : ಆದ್ರೆ ಅವರ ಮನಸ್ಸಿನಲ್ಲಿರೋದನ್ನ ನಾವು ಪೂರೈಸಬೇಕು ದಾನಪ್ಪ. ನಿಮಗೆ ಗೊತ್ತಲ್ಲ : ಶ್ರೀಕಾಂತಜೀ ಮತ್ತು ನಾನು ಹ್ಯಾಗೆ ಹಾಲುಜೇನು ಇದ್ದ ಹಾಗೆ ಇದ್ವಿ ಅಂತ. ಇಬ್ಬರೂ ಭಾಷಣಕ್ಕೆ ಹೋದ್ರೆ ಜನ ನಮ್ಮನ್ನು ರಾಮಲಕ್ಷ್ಮಣ ಅಂತ ಕೂಗೋರು. ಆವೊತ್ತು ಶ್ರೀಕಾಂತಜೀ ಶವಸಂಸ್ಕಾರದ ಹೊತ್ನಲ್ಲಿ ಅತ್ತೂ ಅತ್ತೂ ಭಾಷಣ ಮಾಡಿದೆ, ಕೇಳಿದಿರಲ್ಲಾ?

ದಾನಪ್ಪ : ಹೌದ್ರಿ ಸಾಹೇಬರs ನಿಮ್ಮ ಭಾಷ್ಣ ಕೇಳಿ ಕೂಡಿದವರೆಲ್ಲ ಮುದಿಕೇರತ್ತ್ಂಗ ಅತ್ತರಲ್ಲರಿ!

ರುದ್ರಪ್ಪ : ಶ್ರೀಕಾಂತಜೀ ಬರೇ ನನ್ನ ಸ್ನೇಹಿತರಾಗಿರಲಿಲ್ಲ ದಾನಪ್ಪ, ಆತ್ಮವಾಗಿದ್ದರು. ನಮ್ಮೆಲ್ಲರ ಆಶಾಜ್ಯೋತಿಯಾಗಿದ್ದರು. ಈ ನಾಡಿನ ಸೌಭಾಗ್ಯವಾಗಿದ್ದರು. ಅವರ ಆಶೆ ಈಡೇರಿಸುವುದು ನಮ್ಮೆಲ್ಲರ ಪವಿತ್ರ ಕರ್ತವ್ಯ.

ದಾನಪ್ಪ : ಹೌದ್ರೀ ಸಾಹೇಬರ ಅಂದ್ಹಂಗ ನಮ್ ಸರ್ಕಾರ ಬಂದಮ್ಯಾಲ ವಿಧಾನಸೌಧದ ಮ್ಯಾಲ ಅವರದೊಂದು ಕಂಚಿನ ಪ್ರತಿಮಾ ನಿಲ್ಲಿಸಬೇಕ್ರೀ ಸಾಹೇಬರ.

ರುದ್ರಪ್ಪ : ನಿಲ್ಲಿಸೋಣ. ಆದ್ರೆ ಅವರ ಕೊನೆ ಆಸೆ ಈಡೇರಿಸೋದೂ ಅಷ್ಟೇ ಅಥವಾ ಅದಕ್ಕಿಂತ ಹೆಚ್ಚು ಮುಖ್ಯ.

ದಾನಪ್ಪ : ಈಡೇರಿಸೋಣ ತಗೊಳ್ರಲಾs. ಅದೇನಿತ್ತು ಹೇಳೇ ಬಿಡ್ರಿ ಅವರ ಕಡೀ ಆಸೆ.

ರುದ್ರಪ್ಪ : ಇದನ್ನೆಲ್ಲಾ ಮರೆತು ನಾನೇ ಶ್ರೀಕಾಂತಜೀ ಕೊಲೆ ಮಾಡ್ಸಿದ್ದು ಅಂತ ಹೇಳ್ತಿದಾರಲ್ಲ ಸ್ವಾಮಿ, ನ್ಯಾಯವಾ?

ದಾನಪ್ಪ : *(ಭೀತನಾಗಿ)* ಛೇ ಛೇ ಯಾವೋನರಿ ಹಂಗಂದಾಂವಾ?

ರುದ್ರಪ್ಪ : ಯಾರೋ ಯಾರು ಸ್ವಾಮಿ, ನಮ್ಮ ಸ್ನೇಹಿತ್ರೆ. ಅಂದ್ರೆ ನೀವೇ. ನೀವು ಯಾರ್ಯಾರ್ ಮುಂದೆ ಹೇಳಿದ್ದಿರೋ ಅವರೆಲ್ಲ ಬಂದು ಹೇಳಿದರು. ನೀವು ಕೇಳಿದರೆ ನಮಗೆ ರುದ್ರಪ್ಪನವರು ಸಿಕ್ಕಿಲ್ಲ ಅಂತಲೆ ಬುರುಡೆ ಬಿಡ್ತಾರೆ ಅನ್ನಿ. ನೋಡಿ, ಶ್ರೀಕಾಂತಜೀ ತಮ್ಮ

ಆಸೆ ತೋಡಿಕೊಂಡಾಗಲೇ ನಾನು ಮುಖ್ಯಮಂತ್ರಿ ಆಗಬಾರದು ಅಂತ ತೀರ್ಮಾನಿಸಿಬಿಟ್ಟೆ. ಅವರೇನು ಹೇಳಿದರು ಗೊತ್ತಾ? ನೋಡಿ ರುದ್ರಣ್ಣ ನಿಮಗೂ ಗೊತ್ತಲ್ಲ-ಶ್ರೀಕಾಂತಜೀ ನನಗೆ ಅಣ್ಣಾ ಅಂತಿದ್ರು ನೋಡಿ ರುದ್ರಣ್ಣ, ಸ್ವಾತಂತ್ರ್ಯ ಬಂದು ಮೂವತ್ತು ವರ್ಷ ಆಯ್ತು. ಒಬ್ಬರೂ ಹಿಂದುಳಿದ ವರ್ಗದವರು ಮುಖ್ಯಮಂತ್ರಿ ಆಗಲಿಲ್ಲ. ನಮ್ಮ ಪಾರ್ಟಿ ಅಧಿಕಾರಕ್ಕೆ ಬಂದರೆ ಒಬ್ಬ ಹಿಂದುಳಿದ ವರ್ಗದವರನ್ನು ಮುಖ್ಯಮಂತ್ರಿ ಮಾಡಿದರೆ ಒಳ್ಳೇದಲ್ಲವಾ-ಅಂದ್ರು. ಹಾಗಂದಿದ್ದವರು ಈಗಿಲ್ಲ. ಆದರೆ ಅವರ ಆಸೆ ಈಡೇರಿಸಬೇಕು ಅನ್ನೋ ಮನುಷ್ಯ ನಾನು.

ದಾನಪ್ಪ : ಮುತ್ತಿನಂಥ ಮಾತ್ರೀ ಸಾಹೇಬರಾs ಅವ್ರಲ್ಲದ ಹಿಂಗ ವಿಚಾರ ಮಾಡೋವ್ರು ಯಾರದಾರ ಹೇಳ್ರೆಲಾ?

ರುದ್ರಪ್ಪ : ನಾನಿದ್ದೀನಲ್ಲಪ್ಪ.

ದಾನಪ್ಪ : ನೀವ್ ಬಿಡ್ರಿ ಸಾಹೇಬರ. ನಮ್ಮ ಗಾಂಧಿ ಅಜ್ಜ ಇದ್ದಾಂಗ. ನೀವು ನಮ್ಮಂಥೋರಿಗೆ ಆಶೀರ್ವಾದ ಮಾಡ್ಬೇಕು. ತಪ್ಪ ಮಾಡಿದ್ರ ಒದ್ದು ಬುದ್ಧಿ ಕಲಿಸ್ಬೇಕು.

ರುದ್ರಪ್ಪ : ಅದಕ್ಕೇ ಈಗ ಫೋನ್ ಮಾಡಿದ್ದು. ಶ್ರೀಕಾಂತಜೀ ತಮ್ಮ ಆಸೆ ಹೇಳ'ಇದಾಗ ನಾ ಹೇಳಿದೆ : ಹಾಗಿದ್ರೆ ಶ್ರೀಕಾಂತಜೀ ನೀವೇ ಒಬ್ಬರನ್ನು ಆರಿಸಿಬಿಡಿ, ನಾಳೆ ನಮ್ಮ ನಮ್ಮಲ್ಲಿ ಜಗಳ ಬೇಡ ಅಂದೆ. ಅವರಾಗಲೆ ಒಬ್ಬನ್ನ ಆರಿಸಿದ್ದರು. ಹೇಳಿದ್ರು : ನೋಡಿದಿರಾ ಆ ಹುಡುಗನ್ನ ರುದ್ರಣ್ಣ? ಥಳ ಥಳ ಹೊಳೆಯುವ ಆತನ ಕಣ್ಣುಗಳನ್ನು ಕಂಡಾಗಲೆಲ್ಲ ನನಗೆ ಸಂತೋಷವಾಗುತ್ತದೆ. ಹುಡುಗ ಚೂಟ. ಚುರುಕಾಗಿ ಓಡಾಡ್ತಾನೆ. ಪ್ರಾಮಾಣಿಕ. ಪಾರ್ಟಿಗಾಗಿ ಪ್ರಾಣ ಕೊಡ್ತಾನೆ. ಆಮಿಷಕ್ಕೆ ಒಳಗಾಗಲ್ಲ. ನಿಷ್ಠೆ ಅವನಿಗೆ ಮಾರಾಟದ ಸರಕಲ್ಲ. ಹಿಂದುಳಿದ ವರ್ಗದವನು. ಅವರ ಹಿತರಕ್ಷಣೆ ಅವನಲ್ಲದೆ ಇನ್ನು ಯಾರು ತಾನೆ ಮಾಡಬಲ್ಲರು... ಅಂತ ಒಬ್ಬನ ಹೆಸರು ಹೇಳಿ ನನ್ನ ಮುಖ ನೋಡಿದರು.

ದಾನಪ್ಪ : ಹೌಂದ್ರೀ? ನೋಡ್ರಿ ಸಾಹೇಬರs ನೀವs ನೋಡಿದ್ದೀರಿ ನಾ ಎಂಥ ಹುಟ್ಟು ಹೋರಾಟಗಾರ ಅಂತ, ಎಷ್ಟು ಬಂಡಾಯ ಮಾಡೀನಿ. ಎಷ್ಟು ಖ್ರಾಂತಿ ಮಾಡೀನಿ! ನನಗಂತೂ ಅಧಿಕಾರದ ಆಸೆ ಇಲ್ಲ. ಆದ್ರ ಜವಾಬ್ದಾರಿ ಅಂತ ನೀವು ಒಂದು ಕೆಲ್ಸ ಕೊಟ್ರ ಇಲ್ಲನ್ನೋ ಪೈಕಿ ಅಲ್ಲ. ಹಿಂಗೆ ಮಾಡಂತ, ನೀವು ಕಾಲ್ನಿಂದ ತೋರಿಸಬೇಕು. ನಾ ನೆತ್ತ್ಯಾಗಿಟಕೊಂಡ ಮಾಡಬೇಕು. ಅಂದ್ಹಾಂಗ ಸಾಹೇಬರs ಶ್ರೀಕಾಂತಜೀ ಯಾರ ಹೆಸರು ಹೇಳಿದರು?

ರುದ್ರಪ್ಪ : ಹೇಳಿ ಯಾರಿರಬೇಕು?

ದಾನಪ್ಪ : *(ಕೃಷ್ಣಪ್ಪನನ್ನು ನೋಡುತ್ತಾ)* ನಮ್ಮ ಕೃಷ್ಣಪ್ಪನವರೇನ್ರೀ ಸಾಹೇಬರಾs?

ರುದ್ರಪ್ಪ : ಕ್ಷಮಿಸಬೇಕು, ಕೃಷ್ಣಪ್ಪನವರೂ ಅಲ್ಲೇ ಇದಾರೋ ಏನೋ

ದಾನಪ್ಪ : ಇಲ್ಲಿ... ಹೆಹೆ... ಹೆಹೆ ...

ರುದ್ರಪ್ಪ : ಇದ್ರೂ ನನಗೆ ಯೋಚನೆ ಇಲ್ಲ. ಶ್ರೀಕಾಂತಜೀ ಹೇಳಿದ್ದು ನಿಮ್ಮ ಹೆಸರನ್ನು!

ದಾಣಪ್ಪ : *(ಸಂತೋಷ ತಡೆಯಲಾರದೆ ಎದ್ದು, ಕೃಷ್ಣಪ್ಪನ ಕಡೆ ನೋಡಿ ಮತ್ತೆ ಫೋನಿನಲ್ಲಿ)* ಏನಂದ್ರೀ ಸಾಹೇಬರs ಖರೇ ಏನ್ರೀ? ಯಾಕಂದ್ರ ಇಲ್ಲ ಈ ತನಕ ತಾವು ಇದನ್ನು ಹೇಳಲೇ ಇಲ್ಲ.

ರುದ್ರಪ್ಪ : ಶ್ರೀಕಾಂತಜೀ ಹೇಳಿದ್ದು ಅಕಸ್ಮಾತ್ ನಮ್ಮ ಪಾರ್ಟಿ ಗೆದ್ದು ಬಂದರೆ ಹೀಗೆ ಮಾಡೋಣ ಅಂತ. ಶ್ರೀಕಾಂತಜೀ ಗೋರಿ ಮೇಲಿನ ಮಣ್ಣು ಅರಿಲ್ಲ. ಎಲೆಕ್ಷನ್ ರಿಸಲ್ಟ್ ಇನ್ನೂ ಗೊತ್ತಾಗಿಲ್ಲ. ಅದಕ್ಕೇ ಇದು ಸಕಾಲ ಅಲ್ಲ ಅಂತ ನಾನು ಹೇಳಲಿಲ್ಲ. ಅಷ್ಟರಲ್ಲೇ ನೀವು ಯಾರ್ಯಾರನ್ನೋ ಮುಖ್ಯಮಂತ್ರಿ ಅಂತ ಕೂಗಾಡಿದರೆ ನಾನೇನ್ಮಾಡಲಿ? ನಿಮಗೂ ಗೊತ್ತಿದೆ. ಹೂಂ ಅಂತೀರಂತ ಸುಳ್ಳು ಹೇಳೋ ಪೈಕಿ ಅಲ್ಲ ನಾಣು.

ದಾನಪ್ಪ : *(ರೋಮಾಂಚಿತನಾಗಿ ಕಳ್ಳನಂಥೆ ಕೃಷ್ಣಪ್ಪನನ್ನು ನೋಡುತ್ತಾ)* ಸಾಹೇಬರಾs ಅಲ್ಲಿಗೇ ಬರ್ತೀನಿ ಪ್ರೈವೇಟಾಗಿ ಭೇಟಿಯಾಗೋಣ. ಹಾ ಅನ್ನೋದರಾಗ ಬಂದು ಬಿಡ್ತೀನ್ರಿ.

ರುದ್ರಪ್ಪ : ಮನೆಗೆ ಬನ್ನಿ.

*(ತಕ್ಷಣ ದಾನಪ್ಪ ಫೋನು ಇಟ್ಟು ಹೊರಡುವನು. ಕೃಷ್ಣಪ್ಪ, ಏನ್ ಸಮಾಚಾರ ಎಂದು ತಡೆದು ಕೇಳಿ ವಿಷಯ ತಿಳಿಯಲು ಪ್ರಯತ್ನಿಸುವನು. ಅವನನ್ನು ನಿವಾರಿಸಿ ಅವರಸರಲ್ಲಿ "ತಡಿರಿ ತಡೀರಿ" ಎಂದು ಹೇಳುತ್ತಾ ದಾನಪ್ಪ ಮರೆಯಾಗುವನು. ರುದ್ರಪ್ಪ ಖಾಲಿ ಬಾಟ್ಲಿಗಳನ್ನು ಜೇಬಿಗಿಳಿಬಿಟ್ಟು ಕಿಟಕಿಯ ತನಕ ಹೋಗುವನು. ಮತ್ತೆ ನೆನಪಾಗಿ ತಿರುಗಿ ಬಂದು ಸೋಫಾ ಪಕ್ಕದ ಮರೆಯಲ್ಲಿ ಒಂದು ಖಾಲಿ ಬಾಟ್ಲಿಯನ್ನು ಇಟ್ಟು, ಕಿಟಕಿಯಿಂದ ನಿರ್ಗಮಿಸುತ್ತಾನೆ.)*

## ಮೂರು

*(ಅದೇ ಮನೆ, ಮಾರನೆಯ ದಿನ. ಸರೋಜ ಒಬ್ಬಳೇ ನೈಟ್ ಗೌನಿನಲ್ಲಿದ್ದು "ಫೆಮಿನಾ ಪತ್ರಿಕೆ ಓದುತ್ತಿದ್ದಾಳೆ. ರೇಡಿಯೋದಲ್ಲಿ ಎತ್ತರದ ದನಿಯಲ್ಲಿ ಹಿಂದೀ ಚಿತ್ರಗೀತೆ ಕೇಳಿಸುತ್ತಿದೆ. ಅಷ್ಟರಲ್ಲಿ ಫೋನ್ ರಿಂಗಾಗುತ್ತದೆ. ಸರೋಜ ಎತ್ತಿಕೊಳ್ಳುತ್ತಾನೆ. ಶೂನ್ಯ ಪ್ರದೇಶದಲ್ಲಿ ಮಾರ್ವಾಡಿ ಕಾಂತಿಲಾಲ್ ಕಾಣಿಸಿಕೊಳ್ಳುತ್ತಾನೆ. ಅವನ ಹಿಂದೆ ಶೀನಿ ಇದ್ದಾನೆ.)*

ಸರೋಜ : ಹಲೋ.

ಕಾಂತಿಲಾಲ್ : ಯಾರು ಸರೋಜಮ್ಮನಾ?

ಸರೋಜ : ಹೌದು, ನೀವ್ಯಾರು?

ಕಾಂತಿಲಾಲ್ : ನಮಸ್ಕಾರ ಮೇಡಂ. ನಾನು ಕಾಂತಿಲಾಲ್.

ಸರೋಜ : ನಮಸ್ಕಾರ, ಏನ್ಸಮಾಚಾರ ಶೇಟಜೀ?

ಕಾಂತಿಲಾಲ್ : ಇಕ್ಕಟ್ಟಿಗೆ ಬಂದಿಟ್ಟಿದೆ ಅಮ್ಮಾ. ದೇವರೇ ಕಾಪಾಡಬೇಕು.

ಸರೋಜ : ಯಾಕೆ ಏನಾಯಿತು?

ಕಾಂತಿಲಾಲ್ : ಸರ್ಕಾರಕ್ಕೆ ನಮ್ಮ ಮೇಲೆ ಭೋ ಕೋಪ ಮಾಡಿಕೊಂಡ್ಯೆತೆ. ನಾವು ಪಾರ್ಟಿ ಫಂಡ್ ಕೊಡ್ಲಿಲ್ಲಾ ಅಂತ ನಮ್ದುದುಕಾನ್ ಮೇಲೆ ರೇಡ್ ಮಾಡ್ಯೆತೆ. ನಮ್ಮನೆಗೂ ರೇಡ್ ಮಾಡ್ಯೆತೆ.

ಸರೋಜ : ಅಯ್ಯೋ ದೇವರೆ! ಹೌದಾ? ವೆರಿ ಸಾರಿ ಕಾಂತಿಲಾಲ್‌ಜಿ.

ಕಾಂತಿಲಾಲ್ : ಸಾರಿನೂ ಇಲ್ಲ. ಸೀರಿನೂ ಇಲ್ಲ ಮೇಡಂ. ಈಗ ಬಚಾವಾಗಾಕೆ ಒಂದೇ ರಾಸ್ತಾ ಇರೋದು. ಪಚಾಸ್ ಹಜಾರ್ ಲಂಚ ಕೊಟ್ರೆ ತಗೊಂಡದ್ದನ್ನೆಲ್ಲಾ ವಾಪಸ್ ಕೊಡ್ತಾರೆ. ಇಲ್ದೆ ಹೋದ್ರೆ ಮೂರು ನಾಮ ಹಾಕ್ತಾರೆ. ನನಗೆ ಜೈಲೇ ಗತಿ ನೋಡಿ ಮೇಡಂ. ಈಗ ನಮ್ಮ ಹುಡುಗನ್ನ ಕಳಿಸ್ತೇನೆ. ನಮ್ಮ ಸಾಲ ತೀರಿಸ್ಬಿಡಿ. ಪ್ಲೀಸ್.

ಸರೋಜ : ನೋಡಿ
ಕಾಂತಿಲಾಲ್‌ಜಿ *(ಕಾಂತಿಲಾಲ್ ಫೋನಿಡುವನು. ಸರೋಜ ಗಾಬರಿಯಾಗಿ ಏನು ಮಾಡಬೇಕೆಂದು ತೋಚದೆ ಹಲೋ ಹಲೋ ಎಂದು ಹೇಳಿ ಉತ್ತರ ಬಾರದ್ದಕ್ಕೆ ಮತ್ತೆ ಫೋನ್ ಮಾಡುವಳು. ಲೈನ್ ಸಿಕ್ಕುವುದಿಲ್ಲ. ಮತ್ತೆ ಮತ್ತೆ ಫೋನ್ ಮಾಡಿ ಕೊನೆಗೂ ಲೈನ್ ಸಿಕ್ಕಿತೆಂದಾಗ ಕಾಂತಿಲಾಲ್ ಫೋನ್ ಎತ್ತಿಕೊಳ್ಳುವನು.)*

ಹಲೋ ಹಲೋ ಕಾಂತಿಲಾಲ್ ಇದಾರ?

ಕಾಂತಿಲಾಲ್ : *(ದನಿ ಬದಲಿಸಿ)* ಅವರು ಈಗಷ್ಟೇ ಹೊರಗಡೆ ಹೋದರು.
*(ಫೋನ್ ಕುಕ್ಕುವನು. ಸರೋಜ ಇನ್ನೂ ಭೀತಳಾಗಿ ಏನು ಮಾಡಬೇಕೆಂದು ತೋಚದೆ ಅಲೆದಾಡುತ್ತಿದ್ದಾಗ ಕಾಲಿಂಗ್ ಬೆಲ್ಲಾಗುತ್ತದೆ . ಹೋಗಿ ಬಾಗಿಲು ತೆಗೆಯುತ್ತಾಳೆ. ಒಳಗೆ ಮಾರ್ವಾಡಿ ವೇಷದ, ಆದರೆ ಅದು ಅವನ ಉಡುಪಲ್ಲವೆಂಬಂತೆ ಧರಿಸಿರುವ ವ್ಯಕ್ತಿ ಬರುತ್ತಾನೆ.)*

ವ್ಯಕ್ತಿ : ನಮಸ್ಕಾರ ಮೇಡಂ

ಸರೋಜ : ನೀವು ಕಾಂತಿಲಾಲ್ ಕಡೆಯವರಾ?

ವ್ಯಕ್ತಿ : ಹೌದು , ಯಜಮಾನರು ಫೋನ್ ಮಾಡಿದ್ರ ಮೇಡಂ?

ಸರೋಜ : ಹೌದು : ಆದ್ರೆ ನಾನು ಮತ್ತೆ ಫೋನ್ ಮಾಡಿದ್ದೆ. ಅವರು ಸಿಗಲಿಲ್ಲ.

ವ್ಯಕ್ತಿ : ಅಯ್ಯೋ ಎಲ್ಲಿ ಸಿಗ್ತಾರೆ? ಓಡಾಡೋದರಲ್ಲೇ ಸಾಕಾಗಿ ಹೋಗಿದೆ. ನನಗೆ ದುಡ್ಡು ಕೊಟ್ರೆ, ತಗೊಂಡ್ಹೋಗ್ತೀನಿ.

ಸರೋಜ : ನೋಡಿ ಇದ್ದಿದ್ರೆ ಕೊಡ್ತಿದ್ದೆ. ನನ್ಹತ್ರ ಹಣ ಇಲ್ಲ. ಸಾಲ ತರೋವಾಗ ಕಂತಿನಿಂದ ವಾಪಸ್ ಕೊಡೋದು ಅಂತ ಕರಾರಾಗಿರೋದು. ಎಲ್ಲಾ ಖರ್ಚಾದ ಮೇಲೆ ಒಮ್ಮೆಲೇ ದುಡ್ಡು ಬೇಕೂಂತ ಕೂತ್ರೆ ಎಲ್ಲಿಂದ ತರೋದು? ಕಾಂತಿಲಾಲರಿಗೆ ಹೋಘಿ ಹೇಳಿ. ನಾನೂ ಫೋನ್ ಮಾಡ್ತೀನಿ.

ವ್ಯಕ್ತಿ : *(ಒಮ್ಮೆಲೆ ದನಿ ಎತ್ತರಿಸಿ)* ಮನೆ ದುಕಾನೆಲ್ಲ ರೇಡಾಗಿ ರಾಂ ರಾಂ ಅಂತ ನಾವ್ ಕೂತಿದ್ರೆ ದುಡ್ಡೆಲ್ಲಿಂದ ತರ್ಲಿ ಅಂತೀರಲ್ರೀ! ಕರಾರು ಮಾಡಿ ನಿಮಗೆ ದುಡ್ಡೆಣಿಸುವಾಗ ಹೀಗೆಲ್ಲಾ ರೈಡಾದೀತು ಅಂತ ನಮಗ್ಗೊತ್ತಿತ್ತಾ? ಪಾಪರಾಗಿ ಹೆಂಡತಿ ಮಕ್ಕಳು ಬೀದೀಲಿ ನಿಂತೀವಿ. ಕೊಡೋ ದುಡ್ಡು ಕೊಡೀ ಅಂದ್ರೆ ಆಗೋದಿಲ್ಲ ಅಂತೀರಾ. ಇದರ ಜೊತೆ ನಾವು ಸಾಲಗೀಲ ಕೊಟ್ಟದ್ದು ಗೊತ್ತದರಂತೂ ಪೋಲೀಸಿನವರು ಇನ್ನೊಂದು ಕೇಸು ಹಾಕ್ತಾಖಷ್ಟೆ.

ಸರೋಜ : ನೋಡಿ ಗಲಾಟೆ ಮಾಡಬೇಡಿ. ಇಲ್ಲಿ ಯಾರು ತಗೊಂಡ ದುಡ್ಡನ್ನು ತಗೊಂಡಿಲ್ಲ ಅಂತ ಹೇಳ್ತಾ ಇಲ್ಲ.

ವ್ಯಕ್ತಿ : ಕೊಡೋ ದುಡ್ಡು ಕೊಟ್ರೆ ನಾ ಯಾಕ್ರೀ ಗಲಾಟೆ ಮಾಡ್ಲಿ? ನನಗೇನು ತವಲಾ?

ಸರೋಜ : ಬಾಯಿ ಸ್ವಲ್ಪ ಕಮ್ಮಿ ಮಾಡಿ. ಮನೇಲಿ ನಾನೊಬ್ಬಳೇ ಇದ್ದೀನಿ. ಯಜಮಾನರಿಲ್ಲ.

ವ್ಯಕ್ತಿ : ನೋಡಿ ನೋಡಿ. ಅದಕ್ಕೇ ನನಗೆ ಕೋಪ ಬರೋದು. ದುಡ್ಡು ತರೋವಾಗ ಯಜಮಾನರಿರಲಿಲ್ಲ. ಈಗ ನೆಪ್ಪಾದರ ನಿಮಗೆ? ಸಂಕಟ ಬಂದಿದೆ. ನಮ್ಮ ದುಡ್ಡು ನಮಕ್ಕೊಡಿ ಅಂತ ಕೇಳಿದರೆ ಏನೇನೋ ಆಡ್ತೀರ. ಇದು ನ್ಯಾಯವಾ? ಕಂಡೋರು ನಾಲ್ಕು ಜನ ನ್ಯಾಯ ಹೇಳಲಿ. ಸಾಳ ತಗೊಂಡೋರು ನೀವು ಆರಾಮಾಗಿ ಮನೇಲಿರಿ. ಕೊಟ್ಟೋರು ನಾವು ಕಂಬಿ ಎಣಿಸ್ತೀಬೌಇ.

ಸರೋಜ : ನೋಡಿ, ಜಾಸ್ತಿ ಬಾಯಿ ಮಾಡಬೇಡಿ. ಇದ್ದಕ್ಕಿದ್ದ ಹಾಗೆ ಬಂದು ಕೇಳಿದರೆ ಎಲ್ಲಿಂದ ತರ್ಲಿ?

ವ್ಯಕ್ತಿ : *(ಇನ್ನೂ ದನಿ ಏರಿಸಿ)* ಏನ್ರೀ ಈ ಥರಾ ಮಾತಾಡ್ತೀರಿ? ಇದ್ದಕ್ಕಿದ್ದ ಹಾಗೆ ನೀವು ಬಂದು ಕೇಳಿದಾಗ ನಾವು ದುಡ್ಡು ಎಣಿಸಲಿಲ್ವಾ? ಎಲ್ಲಿಂದ ತರ್ಲೀ ಅಂದಿವಾ?

ಸರೋಜ : ಜನ ಸೇರಲಿ ಅಂಥ ಕೂಗಾಡ್ತೀರಾ?

ವ್ಯಕ್ತಿ : ನಾ ಕೂಗಾಡೋ ಹಾಗೆ ಮಾಡ್ತಾ ಇರೋರೇ ನೀವು. ಹಣ ಕೇಳಿದರೆ ಕೂಗಾಟ ಅಂತೀರ. ಹಣ ಕೊಟ್ಟಿದ್ದೇ ತಪ್ಪಾ? ಕೊಟ್ಟದನ್ನು ಕೇಳೊದೇ ತಪ್ಪಾ?

ಸರೋಜ : *(ಹೋಗಿ ಬಾಗಿಲಿಕ್ಕಿ ಬಾಗಿಲಿಗೆ ಬೆನ್ನಾತು ನಿಂತು)* ಹಣಕೊಟ್ಟಿದ್ದೀರಿ ನನಗ್ಗೊತ್ತು. ನನ್ನ ಹತ್ರ ಈಗಿಲ್ಲ, ಸ್ವಲ್ಪ ಟೈಂ ಕೊಡಿ.

ವ್ಯಕ್ತಿ : ಮತ್ತೆ ಅದನ್ನೇ ಮಾತಾಡ್ತೀರರ್ಲಿ. ಅಣ್ಣ ಪೋಲೀಸ್ ಸ್ಟೇಷನ್‌ನಲ್ಲಿ ಒದ್ದಾಡ್ತಿದಾನೆ ಅಂತ ಹೇಳಿದರೆ ಕೇಳಿಸೋದಿಲ್ವಾ ನಿಮಗೆ?

ಸರೋಜ : ಹಣ ಈಗಿಲ್ಲ ಬೇಕಾದರೆ ಈ ಹಾಳು ಬಳೇನ್ನ ತಗೊಂಡ್ಹೋಗಿ.

ವ್ಯಕ್ತಿ : ಯಾರಿಗೆ ನಾಮ ಹಾಕ್ಬೇಕಂತೀರ್ರಿ? ಉಮಾಗೋಲ್ಡ್ ಬಳೆ ಕೊಟ್ಟು ನನ್ನನ್ನು ಫೂಲ್ ಮಾಡಬೇಕಂತೀರಾ?
*(ಇವನು ಮಾತಾಡುತ್ತಿರುವಂಥೆಯೇ ಸರೋಜ ಫೋನು ಮಾಡುವಳು, ಲೈನ್ ಸಿಕ್ಕುವುದಿಲ್ಲ, ನಿರಾಶಳಾಗಿ ಹಿಂದಿರುಗುವಳು)* ನೋಡಿ ಮೇಡಂ ನೀವೇನೋ ದೊಡ್ಡ ಆಫೀಸರಾಗಿರಭೌದು. ಆದರೆ ಈ ಮಾರ್ವಾಡಿಗೂ ತುಸು ಬುದ್ಧಿ ಇದೆ ಅಂಥ ನೀವು ಒಪ್ಕೋಬೇಕು, ನಮ್ಮ ಹಣ ಹರಾಮಿ ಅಲ್ಲ. ಪೋಲೀಸರಿಗೆ ಫೋನ್ ಮಾಡಿ ನನ್ನನ್ನು ಹೆದರಸ್ತೀನಂತ ತಿಳ್ಕೊಂಡಿರಬಹುದು. ಆದರೆ....

*(ಕೋಲಿನಿಂದ ಬಾಗಿಲು ಕುಟ್ಟುವ ಶಬ್ದ ಕೇಳಿ ಇಬ್ಬರೂ ಸ್ತಬ್ಧರಾಗುತ್ತಾರೆ. ಹೊರಗಡೆ ಒಬ್ಬ ಪೋಲೀಸ್ ಇನ್ ಸ್ಪೆಕ್ಟರ್, ಒಬ್ಬ ಫೋಟೋ ಗ್ರಾಫರ್. ಇಬ್ಬರು ಪೇದೆಗಳು ಬಂದಿದ್ದಾರೆ.)*

ಸರೋಜ : ಯಾರು?

ಇನ್‌ಸ್ಪೆಕ್ಟರ್ : ಪೋಲೀಸ್, ಬಾಗಿಲು ತೆಗೆಯಿರಿ.

ವ್ಯಕ್ತಿ : ಅಯ್ಯಯ್ಯೋ ಪೋಲೀಸರು! ಪೋಲೀಸರು! ದಯವಿಟ್ಟು ಹೇಳಬೇಡಿ ಮೇಡಂ. ಕೈಕಾಲು ಬೀಳ್ತೀನಿ. ನಾ ಬಂದಿದ್ದೆ ಅಂಥ ಹೇಳಬೇಡಿ. *(ಎನ್ನುತ್ತಾ ಅಡಗುವುದಕ್ಕೆ ಸ್ಥಳ ಹುಡುಕುತ್ತಾ ಬೆಡ್‌ರೂಮಿನೊಳಗೆ ನುಗ್ಗಿ ಬಾಗಿಲಿಕ್ಕಿ ಕೊಂಡು ಅಡಗುವನು. ಸರೋಜ ಮುಂಬಾಗಿಲು ತೆಗೆಯುವಳು. ಎಲ್ಲರೂ ಒಳಗೆ ಬರುವರು)*

ಸರೋಜ : *(ಗಾಬರಿಯಲ್ಲಿ)* ಏನು ಸಾರ್?

ಇನ್‌ಸ್ಪೆಕ್ಟರ್ : *(ಮಾರ್ಮಿಕವಾಗಿ ಅವಳನ್ನು ನೋಡುತ್ತಾ)* ಏನು ಗಲಾಟೆ?

ಸರೋಜ : ಏನಿಲ್ಲವಲ್ಲಾ!

ಇನ್‌ಸ್ಪೆಕ್ಟರ್ : ರಂಪಾಟ ಬೀದಿಗೆ ಕೇಳಿಸ್ತಾ ಇದ್ರೆ ಏನೂ ಇಲ್ಲ. ಅಂತೀರಲ್ರಿ, ಯಾರಿದ್ದಾರೆ ಒಳಗೆ?

ಸರೋಜ : ಒಳಗೆ? ಯಾರೂ ಇಲ್ಲವಲ್ಲಾ… ಯಾರಿಲ್ಲ… ನಮ್ಮ ಫ್ರೆಂಡ್

ಇನ್‌ಸ್ಪೆಕ್ಟರ್ : *(ಪೇದೆಗೆ ಸನ್ನೆ ಮಾಡಿ)* ಹುಡುಕು *(ಮನೆಯನ್ನು ಪರೀಕ್ಷಿಸಿ ನೋಡುತ್ತಾ)* ಎಲ್ಲಿ ಕೆಲಸ ಮಾಡ್ತೀರಿ?

ಸರೋಜ : ವಿಧಾನ ಸೌಧದಲ್ಲಿ; ಫೈನಾನ್ಸ್ ಪಾರ್ಟ್‌ಮೆಂಟ್. ನನ್ನ ಯಜಮಾನ್ರು ಲೆಕ್ಚರರ್.

ಇನ್‌ಸ್ಪೆಕ್ಟರ್ : ಗಳಿಕೆ ಚೆನ್ನಾಗಿರೋ ಹಾಗಿದೆ.
*(ಅಷ್ಟರಲ್ಲಿ ಪೇದೆಯೊಬ್ಬ ಬೆಡ್‌ರೂಮಿನಿಂದ ನಡುಗುತ್ತಿರುವ ವ್ಯಕ್ತಿಯನ್ನು ಹಿಡಿದು ತರುತ್ತಾನೆ. ಇನ್‌ಸ್ಪೆಕ್ಟರನ ವ್ಯಂಗ್ಯ ಇನ್ನೂ ಮೊನೆಗೊಳ್ಳುತ್ತದೆ)* ಇವ್ನೇನೋ ಫ್ರೆಂಡು?

ಸರೋಜ : ಹೌದು ಕೆಲಸ ಇತ್ತು ಬಂದಿದ್ರು .

ಇನ್‌ಸ್ಪೆಕ್ಟರ್ : ಬಾಗಿಲು ಹಾಕ್ಕೊಂಡು ಕೆಲ್ಸ ಮಾಡ್ತಿದ್ನೋ?

ಸರೋಜ : *(ನೊಂದು)* ನೋಡೀ ನೀವೀಥರ ಮಾತಾಡೋದು ಒಳ್ಳೆಯದಲ್ಲ. ಇದು ಮರ್ಯಾದಸ್ತರ ಮನೆ.

ಇನ್‌ಸ್ಪೆಕ್ಟರ್ : ಮುಚ್ಕೊಳ್ಳೆ ಗೊತ್ತು. ನಿನ್ನ ಗಂಡನಾ ಇವ್ನು?

ಸರೋಜ : ಆಗ್ಲೇ ಹೇಳಿದ್ದೀನಿ ಫ್ರೆಂಡು ಅಂತ.

ಇನ್‌ಸ್ಪೆಕ್ಟರ್ : ತಗಳಪ್ಪ. ಬಾಗಿಲು ಮುಚ್ಚಿಕೊಂಡು ಒಳಗಡೆ ಇವಳು ಗಂಡನಿಂದಲ್ಲ ಫ್ರೆಂಡ್‌ನಿಂದ ಕೆಲಸ ತಗೀತಾಳಂತೆ. ನಿನ್ನ ಯಜಮಾನ ಎಲ್ಲಿ?

ಸರೋಜ : ಕಾಲೇಜಲ್ಲಿದ್ದಾರೆ.

ಇನ್‌ಸ್ಪೆಕ್ಟರ್ : ಒಳ್ಳೆ ಟೈಮೇ ನೋಡ್ಕೊಂಡಿದೀಯಾ *(ವ್ಯಕ್ತಿಗೆ)* ಲೋ ಲೌಡಿ ಮಗನೇ ಬಾಯಿ ಬಿಡ್ತೀಯಾ. ಬೇಕಾ ಗೂಸ?

ಸರೋಜ : ಸ್ವಾಮಿ ನಾನಂಥವನಲ್ಲ. ಏನೋ ಕೆಲ್ಸ ಇತ್ತು ಅಣ್ಣ ಕಳಿಸಿದ್ದ.

ಇನ್‌ಸ್ಪೆಕ್ಟರ್ : ಅಣ್ಣ ತಮ್ಮ ಇಬ್ಬರನ್ನೂ ನಿಭಾಯಿಸ್ತಾಳಾ ಇವಳು? ಒಳ್ಳೆ ಮಾರ್ವಾಡಿ ಗಿರಾಕಿ ನಯ್ಯಾ. ನೀನಂದು ಮೊನ್ನೆ ಬಳೇಪೇಟೆ ಚಿಕ್ಕೀರಿ ಮನೇಲಿ ಸಿಕ್ಕಿಬಿದ್ದೆ, ಇವತ್ತಿಲ್ಲಿ! ಅದೇ ಅಂದೇ ಈ ಕಾರ್ಪೆಟ್ಟೋ ಈ ಫ್ರಿಜ್ಜೊ, ಈ ಸ್ಟೀರಿಯೋ ಸೆಟ್ಟು-ಹೋಗ್ಲಿ ಪೋಲೀಸಿನವರಿಗೆ ಮಾಮೂಲಿ ಕೊಡೋವಷ್ಟದರೂ ನಿಯತ್ತು ಬ್ಯಾಡವಾ ನಿಂಗೆ?

ಸರೋಜ : ಏನ್ ಮಾತಾಡ್ತಿದೀರಿ ನೀವು!

ಇನ್‌ಸ್ಪೆಕ್ಟರ್ : ಮುಚ್ಕೊಳ್ಳೆ ಗೊತ್ತು *(ಫೋಟೋಗ್ರಾಫರನಿಗೆ)* ಏ ಏನ್ ನೋಡ್ತಿಯಾ ಹಿಡ್ಕೋ ಫೋಟೋ
*(ಫೋಟೋಗ್ರಾಫರ್ ಅವಳ ಮತ್ತು ವ್ಯಕ್ತಿಯ ಹಾಗೂ ಬೆಡ್ ರೂಮಿನ ಫೋಟೋ ತೆಗೆಯುವನು, ಸರೋಜಳಲ ಗಾಬರಿ ಹೆಚ್ಚಾಗುತ್ತದೆ.)*

ಸರೋಜ : ನೋಡಿ ನೀವು ಪೋಲೀಸ್ ಇನ್‌ಸ್ಪೆಕ್ಟರಾಗಿರಬಹುದು. ಯಜಮಾನರಿಲ್ಲದಾಗ ಹೀಗೆ ಮನೆ ನುಗ್ಗಿ ತೊಂದರೆ ಕೊಟ್ರೆ ಒಳ್ಳೆಯದಾಗಲಿಲಕ್ಕಿಲ್ಲ.

ಇನ್‌ಸ್ಪೆಕ್ಟರ್ : ಯಜಮಾನರಿಲ್ಲದಾಗ ಇವನು ಬರಬಹುದೋ? ನಿನ್ನ ಹೆಸರೇನು?

ಸರೋಜ : ನಾನು ಹೇಳೋದನ್ನ ಕೇಳಿ ಇನ್‌ಸ್ಪೆಕ್ಟರೇ.

ಇನ್‌ಸ್ಪೆಕ್ಟರ್ : *(ಗದರಿ)* ಕೇಳಿದಷ್ಟು ಹೇಳು. ಹೆಸರೇನು?

ಸರೋಜ : *(ಗಾಬರಿಯಾಗಿ)* ಸರೋಜ. *(ಇನ್ನೊಬ್ಬ ಪೋಲೀಸ್ ಬರೆದುಕೊಳ್ಳುವನು)*

ಇನ್‌ಸ್ಪೆಕ್ಟರ್ : ವಯಸ್ಸು?

ಸರೋಜ : ಮೂವತ್ತು, ನೋಡಿ ಯಾವ್ದೋ ಬೀದಿ ಹೆಂಗಸಿನ ಥರಾ ನನ್ನನ್ನ ಟ್ರೀಟ್ ಮಾಡಿದರೆ ನಾನ್ ಸುಮ್ನೆ ಇರೋದಿಲ್ಲ. ಇಲ್ಲೀ ತನಕ ಮರ್ಯಾದೆ ಕೊಟ್ಟು ಮಾತಾಡ್ಸಿದೀನಿ ( *ಇನ್‌ಸ್ಪೆಕ್ಟರ್ ಥಟ್ಟನೆ ಅವಳ ಕೆನ್ನೆಗೆ ಬಿಗಿಯುವನು)*

ಇನ್‌ಸ್ಪೆಕ್ಟರ್ : ನನಗೊತ್ತಿಲ್ಲ ಅಂತೀಯಾ? ಎಷ್ಟು ವರ್ಷ ಸರ್ವೀಸಾಗಿದೆ ನನಗೆ! ಮರ್ಯಾದೆ ಬೇರೆ ಕೇಡು ನಿನಗೆ. *(ಪೇದೆಗೆ)* ಏನೇನಿದೆಯೋ?

ಪೇದೆ : ಒಂದು ನಿರೋದ್ ಪಾಕೆಟ್ಟಿದೆ; ನೋಟಿನ ಕಂತೆ ಇದೆ.

ಇನ್‌ಸ್ಪೆಕ್ಟರ್ : *(ಅವನ್ನು ಇಸಿದುಕೊಂಡು ನೋಟಿನ ಕಂಥೆ ನೋಡುತ್ತಾ)* ಸಾಕೆ ಸಾಕ್ಷಿ ಪುರಾವೆ?

ವ್ಯಕ್ತಿ : ಅದು ನನ್ನ ಹಣ ಸ್ವಾಮಿ,

ಸರೋಜ : *(ಭಾರಿ ಅವಮಾನಿತಳಾಗಿ ಕುಸಿದು ಅಳುತ್ತಾ)* ನಿಮ್ಮ ಕೈ ಮುಗೀತೇನೆ. ನನ್ನ ಮಾತು ಕೇಳಿ; ನಾನು ಅಂಥವಳಲ್ಲ, ಇವರು ನನ್ನ ಹತ್ರ ಹಣ ಕೇಳೋಕೆ ಬಂದಿದ್ರು.

ಇನ್ಸ್‌ಪೆಕ್ಟರ್ : ಇದನ್ನೆಲ್ಲಾ ಸ್ಟೇಷನ್ನಿನಲ್ಲೇ ಹೇಳೀಯಂತೆ ಬಾ.ಎಳ್ಕೊಂಡು ನಡಿಯೋ
*(ತಕ್ಷಣ ಏನೋ ಹೊಳೆದಂತೆ ಸರೋಜ ಫೋನಿಗೆ ಓಡುವಳು. ಅವಸರದಲ್ಲಿ ಫೋನ್ ಮಾಡುವಳು ಶೂನ್ಯ ಸ್ಥಳದಲ್ಲೊಬ್ಬ ಕ್ಲಾರ್ಕ್ ಕಾಣಿಸುವರು)*

ಸರೋಜ : ಹಲೇ ಹಲೋ,

ಕ್ಲಾರ್ಕು : ಹಲೋ ಗೌರ್ನಮೆಂಟ್ ಆರ್ಟ್ಸ್ ಕಾಲೇಜ್.

ಸರೋಜ : ಅಲ್ಲಿ ಪ್ರೊ. ಪ್ರಕಾಶ್ ಇದಾರಾ ನೋಡಿ. ನಾನು ಅವರ ಮಿಸ್ಸೆಸ್. ಅರ್ಜೆಂಟ್ ಪ್ಲೀಸ್.

ಕ್ಲಾರ್ಕ್ : ಅವರನ್ನು ಹುಡುಕಿಕೊಂಡು ಯಾರ್ರೀ  ಹೋಗ್ತಾರೆ? *(ಫೋನ್ ಕುಕ್ಕುವನು)*

ಸರೋಜ : ಹಲೋ ಹಲೋ ದಯವಿಟ್ಟು ನೋಡಯಪ್ಪಾ, ಪ್ಲೀಸ್.
*(ಉತ್ತರ ಸಿಗದ್ದಕ್ಕೆ ಫೋನಿಟ್ಟು ನಿರಾಶೆಯಿಂದ ತಿರುಗುವಳು. ಬಾಗಿಲಲ್ಲಿ ರುದ್ರಪ್ಪ ಕಾಣಿಸಿಕೊಳ್ಳುವನು)*

ರುದ್ರಪ್ಪ : ಏನು ಸಮಾಚಾರ? ಏನಿದು ಇನ್ಸ್‌ಪೆಕ್ಟರೆ?

ಸರೋಜ : *(ಓಡಿಬಂದು ರುದ್ರಪ್ಪನ ಮುಂದೆ ಕೈ ಜೋಡಿಸಿ ನಿಂತು ಅಳುತ್ತಾ)* ನೋಡಿ ಸಾರ್ ನೀವಾದ್ರೂ ಹೇಳಿ, ಇದ್ದಕ್ಕಿದ್ದಹಾಗೆ ಮನೆಗೆ ನುಗ್ಗಿ ಸ್ಟೇಷನ್ನಿಗೆ ಬಾ ಅಂತಿದಾರೆ. ನಾ ಅಂಥವಳಾ? ನನ್ನ ಯಜಮಾನರು ಕಾಲೇಜು ಪ್ರೊಫೆಸರ್. ನನಗೆ ವಿಧಾನಸೌಧದಲ್ಲಿ ಕೆಲಸ ಇದೆ; ಏನಂದಕೊಂಡಿದಾರೆ ಇವ್ರು ನಮ್ಮನ್ನ? ಹೇಳೋರು ಕೇಳೋರು ಯಾರೂ ಇಲ್ವಾ? ನಾವು ಬದ್ಕೋದೆ ತಪ್ಪಾ? ಯಜಮಾನರು ಬರೋತನಕ ಕಾಯಿರಿ ಅಂದ್ರೂ ಕೇಳ್ತಾ ಇಲ್ಲ, ಏನ್ಸಾರ್ ಇದರರ್ಥ? ನಮಗೇನು ಮಾನ ಮರ್ಯಾದೆ ಇಲ್ವಾ?

ರುದ್ರಪ್ಪ : ಏನಿದು ಇನ್ಸ್‌ಪೆಕ್ಟರೇ?

ಇನ್ಸ್‌ಪೆಕ್ಟರ್ : ನೋಡಿ ಸಾರ್, ನಾವು ಪೋಲೀಸಿನೋರು, ವಿನಾಕಾರಣ ಯಾರದೋ ಮನೆ ನುಗ್ಗಿದರೆ ನಾಳೆ ಜನ, ಸರ್ಕಾರ ನಮ್ಮನ್ನ ಹಾಗೇ ಬಿಡ್ತಾರಾ? ನೀವು ಸುಮ್ನಿರ್ತೀರಾ? ಈ ಮನೇಲೇನೋ ನಡೀತಿದೆ ಅಂತ ತುಂಬಾ ದಿನದಿಂದ ನಾವೂ ವಾಚ್ ಮಾಡ್ತಾ ಇದ್ವಿ. ಈಗ ಕೆಲವು ದಿನಗಳ ಹಿಂದೆ ಯಾವನೊ ಒಬ್ಬ ರಾತ್ರಿ ಎಂಟು ಗಂಟೆ ಸುಮಾರಿಗೆ ಬಂದ. ಬಾಗಿಲು ತೆಗೀತು. ಮುಚ್ಚಿಕೊಂಡಿತು, ಸರಿರಾತ್ರಿಗೆ ವಾಪಸ್ಸು ಹೋದ. ದಿನಾ ನಡೀತಾನೆ ಇದೆ ಇದು. ನೋಡಿ ನೋಡಿ ಸಾಕಾಗಿ ಹೋಯ್ತು, ಇವರು ಕಲಿತವರು ನೋಡಿ ಸಾಕ್ಷಿ ಪುರಾವೆ ಬೇಕು. ಅದಕ್ಕೆ ಕಾಯ್ತಾ ಇದ್ವಿ. ಈವೊತ್ತು ಈ ನನ್ಮಗ ಸಿಕ್ಕ.

ಸರೋಜ : ಏನೋ ವ್ಯವಹಾರ ಇತ್ತು ಮಾತಾಡ್ಲಿಕ್ಕೆ ಬಂದಿದ್ರು. ಬೇಕಾದ್ರೆ ನೀವೇ ಕೇಳಿ ನೋಡಿ ಸಾರ್.

ಇನ್ಸ್‌ಪೆಕ್ಟರ್ : ನೋಡಿ ಸಾರ್. ಇವ್ನು ಯಜಮಾನನಲ್ಲ ಫ್ರೆಂಡ್, ಅಂತೆ. ಹಾಡಾಹಗಲೊತ್ತಿನಲ್ಲಿ ಫ್ರೆಂಡ್‌ನ ಕರ್ಕೊಂಡು ಯಾರಾದರೂ ಬಾಗಿಲ ಹಾಕ್ಕೊಂಡಿರ್ತಾರಾ ಸ್ವಾಮಿ? ನೀವು ಆಪೋಸಿಟ್ ಪಾರ್ಟಿ ಲೀಡರು. ನಾಳೆ ನಿಮ್ಮ ಪಾರ್ಟಿ ಗೆದ್ದು ಬಂದ್ರೆ ಮಂತ್ರಿ ಆಗೋರು, ನೀವೇ ಹೇಳಿ.

ರುದ್ರಪ್ಪ : ಇದು ಪ್ರೊ. ಪ್ರಕಾಶ್ ಅವರ ಮನೆ ಅಲ್ವೆ?

ಸರೋಜ : ಹೌದು ಸಾರ್, ನಾನು ಅವರ ಹೆಂಡತಿ.

ರುದ್ರಪ್ಪ : ಪ್ರಕಾಶ್ ಇಲ್ವಾ?

ಸರೋಜ : ಇಲ್ಲ ಸಾರ್ ಎಲ್ಲಿ ಹಾಳಾಗಿ ಹೋಗಿದಾರೋ. ಕಾಲೇಜಿನಲ್ಲೂ ಇಲ್ಲ.

ರುದ್ರಪ್ಪ : ಇನ್ಸ್ ಪೆಕ್ಟರ್, ನನ್ನ ಮೇಲೆ ನಿಮಗೆ ನಂಬಿಕೆ ಇದೆಯಾ?

ಇನ್‌ಸ್ಪೆಕ್ಟರ್ : ಇಡಾನ ಸಾರ್ ಅದಕ್ಕೇನಂತೆ, ಆದರೆ ನಾನು ನಿಮಗೆ ಹೇಳೋದು ಇಂಥ ಕೇಸಿನಲ್ಲಿ ತಾವು ತಲೆ ಹಾಕೋದು ಒಳ್ಳೇದಲ್ಲಾಂತ. ನಾಳೆ ಏನೇನೋ ಆಗಬೇಕಾದವರು . ನಿಮಗ್ಯಾಕೆ ತರಲೆ ತಾಪತ್ರಯ? ನಾಳೆ ಈ ಕೇಸು ಹೆಂಗೆಂಗೋ ಟರ್ನಾಗೋಣ, ನೀವು ಸಿಕ್ಕಿ ಬೀಳೋಣ, -ಸುಮ್ನೆ ನಿಮಗ್ಯಾಕೆ….

ರುದ್ರಪ್ಪ : ಪಾಪ ಮನೇಲಿ ಒಬ್ಬರೇ ಇದ್ದಾರೆ. ಪ್ರೊ. ಪ್ರಕಾಶ್ ಬರಲಿ, ಆಮೇಲೆ ಬೇಕಾದರೆ ಇಬ್ಬರೂ ಸ್ಟೇಷನ್‌ಗೆ ಬರ್ತಾರೆ.

ಇನ್‌ಸ್ಪೆಕ್ಟರ್ : ಏನು ಮಾತು ಸಾರ್ ಇದು! ಸಿಕ್ಕಾಗಲೆ ಇವರು ನಡೆದದ್ದನ್ನು ಒಪ್ಪಿಕೊಳ್ತಾ ಇಲ್ಲ. ಆಮೇಲೆ ತಾವೇ ಬಂದು ಒಪ್ಪಕೊಳ್ತಾರಾ?

ರುದ್ರಪ್ಪ : ನೋಡಿ ಇನ್‌ಸ್ಪೆಕ್ಟರ್, ಪ್ರಕಾಶ್ ನನ್ನ ಸ್ನೇಹಿತ ಅವರು ಬಂದ ಮೇಲೆ ವಿಚಾರ ಮಾಡಿ ಖಂಡಿತಾ ನಾನೇ ಕರ್ಕೊಂಬರ್ತೀನಿ. ಕೊನೇ ಪಕ್ಷ ಉಸಿರಾಡೋದಕ್ಕಾದರೂ ಟೈಂ ಕೊಡೀಯಪ್ಪ.

ಇನ್ ಸ್ಪೆಕ್ಟರ್ : ಏನೋ ನೀವು ಹೇಳತೀರಿ, ದೊಡ್ಡವರು, ಹೋಗಿರ್ತೇನೆ, ಕೇಸು ಹಾಕಾಗಿದೆ. ಅವರನ್ನ ಕರ್ಕಂಬಂದು ಸ್ಟೇಷನ್‌ಗೆ ಹಾಜರ್ಮಾಡೋದು ನಿಮ್ಮ ಜವಾಬ್ದಾರಿ. ನಮಸ್ಕಾರ.

*(ಇನ್‌ಸ್ಪೆಕ್ಟರ್ ಮತ್ತು ಅವನ ಪರಿವಾರ ವ್ಯಕ್ತಿಯೊಂದಿಗೆ ಹೋಗುವರು. ಸರೋಜ ಸೋಫಾದಲ್ಲಿ ಕುಳಿತು ಅಳುತ್ತಿದ್ದಾಳೆ. ದುಃಖವನ್ನು ನಿಯಂತ್ರಿಸಿ ಮತ್ತೆ ಫೋನ್ ಮಾಡಿ ಪ್ರೊ. ಪ್ರಕಾಶ್ ಬಂದ್ರಾ ಎಂದು ಕೇಳಿ ನಿರಾಶಳಾಗಿ ಬಂದು ಸೋಫಾದಲ್ಲಿ ಕುಸಿಯುವಳು)*

ರುದ್ರಪ್ಪ : ನಾನು ರುದ್ರಪ್ಪ ಅಂತ. ವಿರೋಧ ಪಕ್ಷದ ನಾಯಕ ಪ್ರೊ. ಪ್ರಕಾಶ್ ಸ್ನೇಹಿತ.

ಸರೋಜ : ಗೊತ್ತು ಸಾರ್.

ರುದ್ರಪ್ಪ : ಏನಮ್ಮ ಇದೆಲ್ಲ?

ಸರೋಜ : ನೀವೇ ನೋಡಿ ಸಾರ್! ಮಾರ್ವಾಡಿ ಹತ್ತಿರ ನಾನು ಸಾಲ ತಂದಿದ್ದೆ. ಅವನ ಮನೆ ರೇಡ್ ಆಗಿದೆಯಂತೆ. ಈಗ್ಲೇ ಹಣ ಬೇಕೂಂತ ತಮ್ಮ ನನ್ನ ಕಳಿಸಿದ್ದ. ನಾವ್ ನಾವು ಮಾತಾಡಿಕೊಳ್ತಿದ್ರೆ ಪೋಲೀಸರು ಬಂದವರೆ ನಾನು ಕೆಟ್ಟ ಹೆಂಗಸು ಅಂತ ಕೇಸಿಉ ಹಾಕಿದರು. ಇದು ನ್ಯಾಯವಾ ಸಾರ್?

ರುದ್ರಪ್ಪ : ಬಾಗಿಲು ಹಾಕಿತ್ತು ಅಂತ ಹೇಳಿದ್ರಲ್ಲಾ?

ಸರೋಜ : ನಿಜ ಸಾರ್ : ನನ್ನ ಹತ್ತಿರ ಹಣ ಇರ್ಲಿಲ್ಲ. ಆ ಮಾರ್ವಾಡಿ ಈಗ್ಲೇ ಹಣ ಬೇಕು ಅಂತ ಒದರಾಡ್ಲಿಕ್ ಸುರು ಮಾಡಿದ. ಅಕ್ಕಪಕ್ಕ ಕೇಳಿಸಿಕೊಳ್ತಾರೆ ಅಂತ ಬಾಗಿಲು ಹಾಕಿದ್ದೆ, ತಪ್ಪ?

ರುದ್ರಪ್ಪ : ಪ್ರೊಫೆಸರ್ ಗೆ ಇದು ಗೊತ್ತ?

ಸರೋಜ : *(ದುಃಖದಿಂದ)* ಅದೇ ನಾನು ಮಾಡಿದ ತಪ್ಪು ಸಾರ್. ಸುಲಭ ಕಂತಿನಿಂದ ತಿಂಗಳೂ ತಿಂಗಳೂ ಹಣ ಕೊಡಬಹುದು ಅಂತ ಹೇಳಿದ್ದರಿಂದ ಸಾಲ ಮಾಡಿ ಬಳೆ ತಕ್ಕೊಂಡೆ. ಪ್ರಕಾಶ್ ಎದುರಿಗೆ ಉಮಾಗೋಲ್ಡಂತ ಸುಳ್ಳು ಹೇಳಿದೆ.

ರುದ್ರಪ್ಪ : ಈಗ ಈ ಕೇಸು ಭಾರಿ ಜಟಿಲ ಅನ್ನಿಸುತ್ತೆ. ಆ ಮಾರ್ವಾಡಿ ಪರಿಚಯ ಪ್ರಕಾಶ್‌ಗಿಲ್ಲ. ಹಗಲೊತ್ತಿನಲ್ಲಿ ನೀವಿಬ್ಬರೂ ಒಳಗಿದ್ದಾಗ ಹಿಡಿದಿದ್ದೀವಿ ಅಂತ ಪೋಲೀಸರು ಹೇಳ್ತಾರೆ. ಕೇಸು ದಾಖಲಾಯಿತು. ಫೋಟೋ ಕೂಡ ಹಿಡ್ಕೊಂಡರು. ನಡೆದದ್ದನ್ನ ನಡೆದ ಹಾಗೇ ಹೇಳಿದಿರಿ ಅಂತಿಟ್ಕೊಳ್ಳೋಣ. ನಾನೇನೊ ಎಲ್ಲಾ ನೋಡ್ದೆ. ನಂಬಿದೆ ಪ್ರಕಾಶ್ ನಂಬ್ತಾರೆಯೇ ಅಂತ.

ಸರೋಜ : *(ಹೊಸ ಗಾಬರಿಯಲ್ಲಿ)* ಸಾರ್!

ರುದ್ರಪ್ಪ : ನೋಡಿ, ನೀವೇ ಯೋಚನೆ ಮಾಡಿ. ನನ್ನ ಹೆಂಡತಿ ಇದೇ ಕಥೆಯನ್ನ ಹೀಗೇ ಹೇಳಿದ್ದರೂ ನಾನು ನಂಬುತ್ತಿರಲಿಲ್ಲ ಅನ್ನಿಸುತ್ತೆ.

ಸರೋಜ : ಇರೋ ವಿಷಯ ಎಲ್ಲ ಹೇಳ್ತೀನಿ, ನಂಬದಿದ್ದರೆ ಮಾರ್ವಾಡಿ ಹತ್ರ ಕರೆದೊಯ್ತೀನಿ.

ರುದ್ರಪ್ಪ : ಅದೇನೋ ಸರಿಯೇ. ಆದರೆ ಮಾರ್ವಾಡಿ ಮನೆ ರೇಡ್ ಆಗಿ ಅವನೇ ಭಗವಂತಾ ಅಂತ ಕೂತಿರೋವಾಗ ನಿಮಗೆ ಎಷ್ಟರಮಟ್ಟಿಗೆ ಸಹಾಯ ಮಾಡ್ತಾನೆ ಅನ್ನೋದು ಅನುಮಾನ. ಸಹಾಯ ಮಾಡಿದ ಅನ್ನೋಣ. ಪೋಲೀಸರು ಈಗ ಇನ್ನೊಂದು ಕಥೆ ಹೇಳ್ತಿದಾರೆ ಆ ಇನ್ನೊಂದು ಕಥೆ ಏನದು?

ಸರೋಜ : ಸಾರ್!

ರುದ್ರಪ್ಪ : ನೋಡಿ, ಕೇಸು ಪೋಲೀಸ್ ತನಕ ಹೋಗಿದೆ. ಅಂದ ಮೇಲೆ ಪ್ರಕಾಶ್ ಪೋಲೀಸ್ ಸ್ಟೇಷನ್ನಿಗೆ ಹೋಗಲೇಬೇಕು. ಆಗ್ಲಾದರೂ ಆ ಇನ್ನೊಂದು ಕಥೆ ಬಯಲಿಗೆ ಬಂದೇ ಬರುತ್ತೆ, ಆವಾಗ ನೀವು ಏನು ಹೇಳಿದರೂ ಪ್ರಕಾಶ್ ನಂಬೋದು ಕಷ್ಟ. ಹಾಲಿನಂಥ ಸಂಸಾರ ವ್ಯರ್ಥ ಒಡೆದು ಹೋಗುತ್ತಲ್ಲಾ ಅಂತ ಬೇಜಾರಾಗುತ್ತೆ. ಪ್ರಕಾಶ್ ಕವಿ ಬೇರೆ, ತುಂಬ ಸೆನ್ಸಿಟಿವ್.

ಸರೋಜ : *(ದುರಂತದ ಅಂದಾಜಿನಿಂದ ಗಾಬರಿಯಾಗಿ)* ನಾನೇನು ಮಾಡ್ಲಿ ಸಾರ? ನೀವೇ ಕಾಪಾಡಿ ಹೀಗಾಗುತ್ತೆ ಅಂತ ಗೊತ್ತಿದ್ರೆ...

ರುದ್ರಪ್ಪ : ಈಗಿನ ಕಥೆ ಹೇಳಿದ ಹಾಗೆ ಮೊದಲ್ನೇ ಕಥೆಯನ್ನೂ ವಿವರವಾಗಿ ಹೇಳಿದ್ರೆ ನಾನು ಯಾವ ರೀತಿ ನಿಮಗೆ ಸಹಾಯ ಮಾಡಬಹುದು ಅಂತ ಯೋಚಿಸಬಲ್ಲೆ. ಇಂಥ ಕೇಸುಗಳಲ್ಲಿ ನನಗೆ ಆಸಕ್ತಿ ಕಡಿಮೆ. ಹೇಳಬಹುದು ಅಂತ ಅನ್ನಿಸಿದರೆ ಹೇಳಿ. ಯಾಕೆ ಅಂದ್ರೆ ಪೋಲೀಸರಲ್ಲಿ ಈ ಕೇಸಾಗಲೇ ದಾಖಲಾಗಿದೆ.

ಸರೋಜ : ಯಾವ್ದು ಸಾರ್?

ರುದ್ರಪ್ಪ : ಅದೇ ರಾತ್ರಿ ಎಂಟು ಗಂಟೆ ಸುಮಾರಿಗೆ ಯಾರೋ ಬಂದು ಮನೆ ಹೊಕ್ರು. ಬಾಗಿಲಿಕ್ಕಿತು ಅಂತ ಇನ್‌ಸ್ಪೆಕ್ಟರ್ ಏನೋ ಹೇಳಿದರಲ್ಲ ಹೋಗ್ಲಿ, ನಿಜಾನಾ ಅದು?

ಸರೋಜ : ನಿಜ.

ರುದ್ರಪ್ಪ : ಏನದು?

ಸರೋಜ : *(ಮೌನ)*

ರುದ್ರಪ್ಪ : ಒತ್ತಾಯ ಮಾಡ್ತಾ ಇಲ್ಲ. ಅದರಿಂದ ನಿಮಗೆ ನೋವಗೋ ಹಾಗಿದ್ರೆ ಹೇಳೋದೆ ಬೇಡ. ಈ ಕೇಸಿನಲ್ಲಿ, ಪೋಲೀಸರು ಅದನ್ನೂ ಸೇರಿಸಿರೋದ್ರಿಂದ ಕೇಳಿದೆ ಅಷ್ಟೆ. ಬೇಕಾದ್ರೆ ಯಾವುದಕ್ಕೂ ಪ್ರಕಾಶ್ ಜೊತೆ ಮಾತಾಡಿ ಆ ಮೇಲೆ ನನಗೆ ಫೋನ್ ಮಾಡಿ *(ರುದ್ರಪ್ಪ ಎದ್ದು ಹೊರಡುವನು.)*

ಸರೋಜ : ಒಂದ್ನಿಮಿಷ ಸಾರ್, ಎಲ್ಲಾ ಹೇಳ್ತೀನಿ *(ರುದ್ರಪ್ಪ ಮತ್ತೆ ಕೂರುವನು)* ಯಾರೆದುರಿಗೆ ಬಾಯಿಬಿಟ್ಟರೂ ನಮ್ಮೆಜಮಾನರನ್ನ ಕೊಲೆ ಮಾಡ್ತೀನಿ ಅಂತ ಹೇಳಿದ್ದಾರೆ ಸಾರ್.

ರುದ್ರಪ್ಪ : ನಾನು ಬೇರೆಯವರೆದುರಿಗೆ ಬಾಯಿಬಿಡಲ್ಲ ಮತ್ತು ನನಗೆ ಹೇಳೊದ್ರಿಂದ ನಿಮಗೆ ಸಹಾಯ ಆಗುತ್ತೆ ಅಂತ ನಂಬಿಕೆ ಇದ್ರೆ ಹೇಳಿ, ನನ್ನ ಪರವಾಗಿ ಇಷ್ಟನ್ನು ಹೇಳಬಲ್ಲೆ; ನಿಮ್ಮ ಗುಟ್ಟು ಕಾಪಾಡುವುದು ನನ್ನ ಹೊಣೆ.

ಸರೋಜ : ಅದು ನಿಮಗೂ ಸಂಬಂಧಪಟ್ಟಿದೆ ಸಾರ್.

ರುದ್ರಪ್ಪ : ಹೇಳಿ.

ಸರೋಜ : ಆ ದಿನ ನಿಮ್ಮ ಪಾರ್ಟಿಯವನೇ ಸಿದ್ದಲಿಂಗು ಬಂದಿದ್ದ.

ರುದ್ರಪ್ಪ : *(ನಿರ್ಭಾವದಿಂದ)* ಸರಿ.

ಸರೋಜ : ಹಾಗಲ್ಲ ಸಾರ್. ಶ್ರೀಕಾಂತಜೀ ಕೊಲೆ ಮಾಡಿ ಬಂದೀನಿ; ಆಶ್ರಯ ಬೇಕು ಅಂತ ಬಂದ.

ರುದ್ರಪ್ಪ : ಶ್ರೀಕಂಆತಜೀನ್ನ ಕೊಲೆ ಮಾಡಿದ್ದು ಅವನಲ್ಲವಲ್ಲ. ನಿಜ ಹೇಳಬೇಕಂದ್ರೆ ಕೊಲೆಗಾರನ ಪತ್ತೆ ಆಗೇ ಇಲ್ಲ. ಸಿದ್ದಲಿಂಗೂನೇ ಕೊಲೆಗಾರ ಅಂತ ಯಾರಿಗೂ ಅನುಮಾನ ಕೂಡ ಬಂದಿಲ್ಲ.

ಸರೋಜ : ಅದೇನ ಓ ನನಗೆ ತೊತಿಲ್ಲ ಸರ್, ಪ್ರಕಾಶ್ ಶ್ರೀಕಾಂತಜೀ ಭಾಷಣ ಕೇಳೋಕ್ಹೋಗಿದ್ದರು. ಮನೇಲಿ ಒಬ್ಬಳೇ ಇದ್ದೆ. ಕಾಲಿಂಗ್ ಬೆಲ್ ಆಯಿತು. ಇವರೇ ಬಂದಿರಬೇಕು ಅಂತ ಹೋಗಿ ಬಾಗಿಲು ತೆಗೆದೆ, ಒಳಗಡೆ ಬಂದವನೇ ನನ್ನ ಬಾಯಿ ಹಿಡಿದು ಕಟ್ಟಿ ಸೋಫಾದಲ್ಲಿ ಕೂರಿಸಿದ. 'ನನ್ನ ಹೆಸರು ಸಿದ್ದಲಿಂಗು, ಶ್ರೀಕಾಂತಜೀ ಕೊಲೆ ಮಾಡಿ ಬಂದೆ. ರಾತ್ರಿ ಹನ್ನೊಂದಲು ಗಂಟೆ ತನಕ ಪೋಲೀಸರಿಂದ ರಕ್ಷಣೆ ಬೇಕು' ಅಂದ. ಬಾಯಿ ಮಾಡಿದರೆ, ಗಂಡನಿಗೆ ಹೇಳಿದರೆ, ಪ್ರಕಾಶನ್ನ ಕೊಲೆ ಮಾಡ್ತೀನಿ ಅಂತ ಹೆದರಿಸಿದ. ಅಡಗಿದ. ಆಮೇಲೆ ಪ್ರಕಾಶ್ ಬಂದ್ರು, ಗಾಬರಿಯಿಂದ ನಾನು ಯಾರಿಗೂ ಹೇಳಲಿಲ್ಲ. ಸ್ವಲ್ಪ ಹೊತ್ತು ಇದ್ದು ಅವನೇ ಹೋಗಿಬಿಟ್ಟ.

ರುದ್ರಪ್ಪ : ಹೋಗುವಾಗ ಪ್ರಕಾಶನ ಕಣ್ಣಿಗೆ ಬೀಳಲಿಲ್ಲವಾ?

ಸರೋಜ : ಇಲ್ಲ ಸಾರ್ ಕಿಟಕಿಯಿಂದ ಹಾರಿಹೋದ.

ರುದ್ರಪ್ಪ : ಸರಿ. ಆ ಹೆದರಿಕೆಯಿಂದ ನೀವಿನ್ನೂ ಪ್ರಕಾಶನಿಗೆ ಈ ಸುದ್ದಿ ಹೇಳಿಲ್ಲ.

ಸರೋಜ : ಇಲ್ಲ ಸಾರ್.

ರುದ್ರಪ್ಪ : ನೀವು ತೆಗೊಂಡಸ ರಿಸ್ಕೇನೋ ದೊಡ್ಡದೇ. ನೋಡಿ ಇದನ್ನೆಲ್ಲ ನೀವು ಪೋಲೀಸರಿಗೆ ವಿವರಿಸಲಿಕ್ಕೂ ಆಗೋದಿಲ್ಲ. ಪ್ರಕಾಶ್‌ನೆದುರಿಗೂ ಹೇಳಲಿಕ್ಕಾಗೋದಿಲ್ಲ, ಹಾಗಂತ ಬಾಯ್ಮುಚ್ಚಿಕೊಂಡ್ರೆ ಮಾನನಷ್ಟ. ಏನು ಮಾಡಬೇಕು ಅಂತೀರಿ?

ಸರೋಜ : ಪ್ರಕಾಶ್ ಎದುರಿಗೆ ಎಲ್ಲಾ ಹೇಳಿಬಿಡೋದೊಂದೇ ದಾರಿ.

ರುದ್ರಪ್ಪ : ಸರಿಯೇ, ಆದರೆ ಕೇಸು ಪೋಲೀಸರ ತನಕ ಹೋಗಿದೆಯೇ! ಪೋಲೀಸರಿಗೆ ಈ ಸೂಕ್ಷ್ಮಗಳೆಲ್ಲ ಗೊತ್ತಿಲ್ಲ. ಅವರು ಹೇಳೋ ಕಥೇನೇ ಬೇರೆ, ಅದು ನಿಮಗೂ ಗೊತ್ತಿದೆ. ಈಗಿರೋ ಸಮಸ್ಯೆ ಇದು; ನೀವು ಪ್ರಕಾಶ್‌ನೆದುರಿಗೆ ಮನಸ್ಸು ಬಿಚ್ಚಿ ಎಲ್ಲಾ ಹೇಳಿದಿರಿ ಅಂತಲೇ ಇಟ್ಕೊಳ್ಳಿ, ಪ್ರಕಾಶ್ ನಂಬ್ತಾರಾ? ನಂಬಿದರಂತಲೇ ಇಟ್ಕೊಳ್ಳೋಣ. ಸಿದ್ದಲಿಂಗು ಯಾವ ಕೇಸಿನಲ್ಲಿ ಸಿಕ್ಕುಬಿದ್ದು ಇಲ್ಲಿಗೆ ಬಂದಿದ್ದನೋ, ಅಥವಾ ಅವನು ಹೇಳೋ ಹಾಗೆ ಶ್ರೀಕಾಂತ್‌ಜೀ ಕೊಲೇನೇ ಮಾಡಿದ್ದಾನೋ ಗೊತ್ತಿಲ್ಲ. ಅದೇನಿದ್ರೂ ಅವನಿಂದ ಅಪಾಯ ತಪ್ಪಿದ್ದಲ್ಲ, ನೋಡಿ. ಸಿದ್ದಲಿಂಗು ಇಲ್ಲೇನಾದ್ರೂ ಮರೆತುಬಿಟ್ಟು ಇಟ್ಟು ಹೋಗಿದ್ದಾನೋ?

ಸರೋಜ : ಇಲ್ಲ ಸಾರ್,

ರುದ್ರಪ್ಪ : ನನಗನ್ನಿಸೋ ಹಾಗೆ ಈಗ್ಲೂ ನೀವು ಇದೆಲ್ಲದರಿಂದ ಪಾರಾಗಬಹುದು. ಪ್ರಕಾಶ್‌ನಿಗೂ ಹೇಳದೆ, ಪೋಲೀಸರಿಗೂ ಹೇಳದೆ,

ಸರೋಜ : ಹ್ಯಾಗೆ ಹೇಳಿ ಸಾರ್,

ರುದ್ರಪ್ಪ : ಮೊದಲು ಪೋಲೀಸ್ ಕೇಸು ರದ್ದಾಗಬೇಕು. ಅಂದ್ರೆ ಮುಂದೆ ಏನಾದ್ರೂ ಮಾಡಬಹುದು, ದಾನಪ್ಪ ಅಂತ ಅಸೆಂಬ್ಲಿ ಮೆಂಬರ್ ಗೊತ್ತಾ ನಿಮಗೆ?

ಸರೋಜ : ನೋಡಿದೀನಿ ಸಾರ್, ಪರಿಚಯ ಇಲ್ಲ.

ರುದ್ರಪ್ಪ : ಇರಬೇಕಾದ್ದಿಲ್ಲ, ದಾನಪ್ಪ ತುಂಬ ಒಳ್ಳೆಯವನು ಅವನಿಗೂ ಈ ಇನ್ಸ್‌ಪೆಕ್ಟರ್ ಗೂ ತುಂಬಾ ಸ್ನೇಹ. ದಾನಪ್ಪನ ಮಾತನ್ನು ಇನ್‌ಸ್ಪೆಕ್ಟರ್ ತೆಗೆದುಹಾಕೋದಿಲ್ಲ. ಯಾಕೆ ಅಂದ್ರೆ ಇವನು ಇನ್ಸ್‌ಪೆಕ್ಟರ್ ಆದದ್ದೇ ದಾನಪ್ಪನಿಂದ.

ಸರೋಜ : ಸಾರ್ ನೀವೆ ಒಂದು ಮಾತು ಹೇಳಬಹುದಲ್ಲ.

ರುದ್ರಪ್ಪ : ಹೇಳ್ತಿದ್ದೆ. ರಾಜಕೀಯ ಹೀಗೆ ಅಂತ ಹೇಳೋಕಾಗೋಲ್ಲ ನೋಡಿ; ಅವನಿಗೂ ನನಗೂ ಈಗ ಸರಿ ಇಲ್ಲ. ಇನ್ಸ್‌ಪೆಕ್ಟರ್ ನನ್ನ ಜೊತೆ ಹ್ಯಾಗೆ ಒರಟಾಗಿ ನಡಕೊಂಡ, ನೀವೇ ನೋಡಿದಿರಲ್ಲ. ಅಷ್ಟೇ ಅಲ್ಲ, ನನ್ನ ಹೆಸರು ಹೇಳಿದರೆ ಈ ಕೆಲಸ ಆಗೋಲ್ಲ. ಇಲ್ಲದಿದ್ರೆ ಈ ಸಮಯದಲ್ಲಲ್ಲದೆ ಇನ್ಯಾವಾಗ ಸಹಾಯ ಮಾಡೋದು? ಆದರೆ ದಾನಪ್ಪನ ಬಗ್ಗೆ ನಿಮಗೆ ಅನುಮಾನ ಬೇಡ, ಯಾರೇ ಹೋಗಿ

ಸಹಾಯ ಕೇಳಿದರೂ ಮುಂದೆ ಬರ್ತಾನೆ. ಅವನು ಅಲ್ಲಿಂದಲೇ ಇನ್ಸ್‌ಪೆಕ್ಟರಿಗೊಂದು ಫೋನ್ ಮಾಡಿದರೆ ಸಾಕು. ಇವನು ಕೇಸ್ ಕೈ ಬಿಡ್ತಾನೆ. ಕೇಸ್ ಒಮ್ಮೆ ರದ್ದಾದರೆ ಪ್ರಕಾಶನನ್ನ ನಿಭಾಯಿಸೋದು ಕಷ್ಟ ಅಲ್ಲ. ಹಾಗೂ ಪ್ರಕಾಶ್ ಮೊಂಡುತನ ಮಾಡಿದರೆ ಇಷ್ಟರಲ್ಲೇ ಸಿದ್ದಲಿಂಗೂ ನಿಮಗೂ ಫೋನ್ ಮಾಡಬಹುದು. ನಮ್ಮ ಸಂಸಾರ ಹಾಳಾಗ್ತಾ ಇದೆ. ನೀನೇ ಖುದ್ದಾಗಿ ಬಂದು ನಮ್ಮೆಜಮಾನರಿಗೆ ಹೇಳಪ್ಪ ಅಂತ ಹೇಳಿ. ಈಗ ದಾನಪ್ಪನ ಕಡೆಗೆ ಹೋಗ್ತೀರಾ? ಬೇಕಾದ್ರೆ ಅವನು ಎಲ್ಲಿದಾನೆ ಅಂತ ಹೇಳ್ತೀನಿ ಇರಿ. *(ಉತ್ತರಕ್ಕೂ ಕಾಯದೆ ಫೋನ್ ಮಾಡುವನು, ಶೂನ್ಯ ಸ್ಥಳದಲ್ಲಿ ಶೀನಿ ಫೋನ್ ತಕೊಳ್ಳುವನು).*

ರುದ್ರಪ್ಪ : ಶೀನೀನಾ?

ಶೀನಿ : ಹೌದು, ನೀವ್ಯಾರು?

ರುದ್ರಪ್ಪ : ನಾನು ರುದ್ರಪ್ಪ, ದಾನಪ್ಪ ಎಲ್ಲಿ?

ಶೀನಿ : ಎಲ್ಲ ರೆಡಿ ಸಾರ್. ದಾನಪ್ಪ ಜನರಲ್ ಹಾಸ್ಟಲ್ ಎಂಟನೇ ರೂಂನಲ್ಲಿದಾರೆ.

ರುದ್ರಪ್ಪ : ಸರಿ. *(ಫೋನ್ ಕೆಳಗಿಡುವನು)* ನೋಡಿಯಮ್ಮ ನೀವು ಕೂಡ್ಲೆ ಜನರಲ್ ಹಾಸ್ಟೆಲ್‌ಗೆ ಹೋಗಿ. ದಾನಪ್ಪ ಎಂಟನೇ ರೂಮಿನಲ್ಲಿ ಇದಾನಂತೆ.

ಸರೋಜ : ಬೇರೆ ದಾರಿ ಇಲ್ಲಾ ಅಂತೀರಾ ಸಾರ್?

ರುದ್ರಪ್ಪ : ಇರಬಹುದು. ಆದರೆ ಅಪಾಯ ಇಲ್ಲದ ದಾರಿ ಅಂದ್ರೆ ಇದೊಂದೇ. ದೇವರ ಮೇಲೆ ಭಾರ ಹಾಕಿ ಹೋಗಿ. ದೇವರು ಒಳ್ಳೇದ್ನ ಮಾಡ್ಲಿ. ನಾನು ಬರ್ತೀನಿ ಆದರೆ ಹುಷಾರಾಗಿರಿ, ದಾನಪ್ಪನ ಮುಂದೆ ಮರೆತು ಕೂಡ ನನ್ನ ಹೆಸರು ಹೇಳಕೂಡದು. ಹೇಳಿದರೆ ಕೆಲಸ ಕೆಟ್ಟ ಹಾಗೆ, ಇಷ್ಟರಲ್ಲೇ ಸಿದ್ದಲಿಂಗು ಫೋನ್ ಮಾಡಿದರೆ ಮನೆಗೇ ಕರೆಸಿ ಪ್ರಕಾಶನಿಗೆ ಹೇಳಿಸಿ,
*(ರುದ್ರಪ್ಪ ಹೋಗುವನು. ಸರೋಜ ಮತ್ತೆ ಮತ್ತೆ ಯೋಚಿಸಿ ಸೀರೆ ಬದಲಿಸಿ ಹೊರಡುವಳು. ಅಷ್ಟರಲ್ಲಿ ಪ್ರಕಾಶ್ ಬರುವನು)*

ಪ್ರಕಾಶ್ : ಎಲ್ಲೋ ಹೊರಟಿದ್ದೀಯ?

ಸರೋಜ : ಬಂದೆ ಇರಿ.

ಪ್ರಕಾಶ್ : ಏನವಸರ? ಫೋನ್ ಮಾಡಿದ್ದೆಯಂತೆ ಕಾಲೇಜಿಗೆ?

ಸರೋಜ : ಮಾಡಿದ್ದೆ. ಬರ್ತೀನಿ ಇರಿ.

ಪ್ರಕಾಶ್ : ನಾನೂ ಬರಲಾ?

ಸರೋಜ : ಬೇಡ. *(ಅವಸರದಲ್ಲಿ ಹೋಗುವಳು.)*

# ನಾಲ್ಕು

*(ಮಾರನೆಯ ದಿನ ಅದೇ ಮನೆ. ಮಧ್ಯಾಹ್ನ ಮೂರು ಗಂಟೆ ಸುಮಾರಿಗೆ ಪ್ರಕಾಶ್ ಮನೆಗೆ ಬರುತ್ತಾನೆ. ಕೀಲಿ ತೆಗೆದು ಬಂದವನು ಡ್ರೆಸ್ ಕೂಡ ಕಳಚದೆ ಜೇಬಿನಿಂದ ಪದ್ಯವೊಂದನ್ನು ತೆಗೆದು ಓದುತ್ತಾ ತಿದ್ದುತ್ತಾ ಕೂರುತ್ತಾನೆ.)*

ಪ್ರಕಾಶ್ : ಕಾಡಿನಲ್ಲೊಂದು ಹುಲಿಯ ಕಾಣುತ್ತೇನೆ
ಹುಲಿಯು ನನ್ನನ್ನು, ನಾನು ಹುಲಲಿಯನ್ನ
ತಿನ್ನಬಯಸಿ ಪರಸ್ಪರ ಹೊಂಚುತ್ತಾ
ನಿಲ್ಲುತ್ತೇವೆ.
ಆದರೆ ಗೆದ್ದವನು ನಾನೇ ಎಂದು ಹುಲಿಯ ಹಿಡಿದು
ಬಾಯಲ್ಲಿ ಹಾಕಿಕೊಂಡು ಅರ್ಧ ತಿಂದಾಗ,
ಒಂದು ಕ್ಷಣ ಯೋಚನೆಗೆ ನಿಲ್ಲುತ್ತೇನೆ,-
ಯಾಕೆಂದರೆ ನಾನು ಬುದ್ಧಿಜೀವಿ.
ಆದರೆ ಅಷ್ಟರಲ್ಲಿ ಮೈಮರೆತ ನನ್ನನ್ನು
ಹುಲಿಯೇ ತಿಂದು ಮುಗಿಸಿರುತ್ತದೆ,
ಹೀಗೆ ಸತ್ತದ್ದು ಗೊತ್ತಾಗದಂತೆ ಓಡುತ್ತೇನೆ.
ನಿಂತರೆ ಸತ್ತದ್ದು ನೆನಪಾಗಬಹುದಾದ್ದರಿಂದ
ಬಿಟ್ಟೂಬಿಡದೆ ಓಡುತ್ತೇನೆ,
ಅಥವಾ ಹೀಗಿರಬಹುದೆ :
ಹುಲಿಯ ಕಾಣುವ ಮುನ್ನ ಇಡಿಯಾಗಿದ್ದವನು
ಈಗ ಎರಡಾಗಿದ್ದೇನೆ : ಸತ್ತವನೊಬ್ಬ.
ಓಡುವವನೊಬ್ಬ
ನೋಡುವವನೊಬ್ಬ ಓಡುವವನೊಬ್ಬ!
ಇಬ್ಬರ ಭೇಟಿ ಸಾಧ್ಯವಿಲ್ಲವೆ!
ಸಾಧ್ಯವಿಲ್ಲವೆ?

*(ಓದಿ ಮತ್ತೆ ತಿದ್ದತೊಡಗುತ್ತಾನೆ. ಬಾಗಿಲಲ್ಲಿ ರುದ್ರಪ್ಪ ಯಾವಾಗಲೋ ಬಂದು ನಿಂತಿದ್ದವನು ಇವನ ಓದು ಮುಗಿದೊಡನೆ ಚಪ್ಪಾಳೆ ತಟ್ಟುತ್ತಾನೆ ಅವನನ್ನು ನೋಡಿ ಪ್ರಕಾಶ್ ಎದ್ದು ನಿಲ್ಲುತ್ತಾನೆ.)*

ಪ್ರಕಾಶ್ : ಅರೆ! ಬನ್ನಿ ಸಾರ್. ಎಷ್ಟು ಅಪರೂಪ ನಿಮ್ಮನ್ನೊಡೋದು!

ರುದ್ರಪ್ಪ : ಹೊರಗಡೆ ಎಲೆಕ್ಷನ್ ಕೌಂಟಿಂಗ್ ನಡೀತಾ ಇದೆ. ಜನಗಳಲ್ಲಿ ಎಷ್ಟೊಂದು ಟೆನ್ಸನ್ ಇದೆ. ನೀವಿಲ್ಲಿ ನಿರುಮ್ಮಳ ಕೂತು. ಪದ್ಯ ಬರೀತಿದೀರಲ್ಲಾ ಸ್ವಾಮಿ,- ಒಳ್ಳೇ ಕವಿಗಳು.

ಪ್ರಕಾಶ್ : ರಾಜಕೀಯ ನಮ್ಮಂಥವರಿಗ್ಯಾಕೆ ಸಾರ್? ನನಗೆ ಅದು ಅರ್ಥವಾಗೋದೂ ಇಲ್ಲ.

ರುದ್ರಪ್ಪ : ಇದೊಳ್ಳೇದಾಯ್ತೆ! ನಿಮ್ಮ ರಾಜ್ಯ, ನಿಮ್ಮ ಸರ್ಕಾರ. ಎಡ ಬಲ ಅಂತ ಬೆಟ್ ಕಟ್ಟಿ ಮತ ಚಲಾಯಿಸಿದ್ದೀರಿ. ಪರಿಣಾಮದ ಬಗ್ಗೆ ಆಸಕ್ತಿ ಇಲ್ವೆ?

ಪ್ರಕಾಶ್ : ನೀವಿದೀರಲ್ಲ ಸಾರ್, ಅದನ್ನೆಲ್ಲಾ ನೋಡ್ಕೊಳ್ಳೋದಿಕ್ಕೆ,

ರುದ್ರಪ್ಪ : ಅದು ನಮ್ಮ ಕರ್ಮ, ನೋಡಿಕೊಳ್ಳತೀವಿ, ನೀವು?

ಪ್ರಕಾಶ್ : ಆಳಿಸಿಕೊಳ್ಳೋದು ನಮ್ಮ ಕರ್ಮ.

ರುದ್ರಪ್ಪ : ಹ್ಹ ಹ್ಹಾ ಭಾರಿ ಜಾಣರು ನೀವು, ಕವಿಗಳಲ್ಲವೆ? ಎಲ್ಲಿ ನಿಮ್ಮ ಮನೆಯವರು ಕಾಣಿಸೋದಿಲ್ಲ?

ಪ್ರಕಾಶ್ : ಯಾರನ್ನೋ ನೋಡೋದಕ್ಕೆ ಹೋಗಿದಾರೆ. ಕೌಂಟಿಂಗ್ ನಡೆದಾಗ ನೀವು ನಮ್ಮನೆಗೆ ಬಂದಿರಲ್ಲ. ಏನಾದ್ರೂ ಕೆಲ್ಸ ಇತ್ತಾ ಸಾರ್?

ರುದ್ರಪ್ಪ : ಇಲ್ಲಪ್ಪ ಟೆನ್ಸನ್ ಇದೆಯಲ್ಲ...ನಿಮ್ಮೊಂದಿಗೆ ಹರಟೆ ಹೊಡೀತಾ ಅದನ್ನ ಮರೆಯೋದಕ್ಕೆ ಬಂದೆ. ನಿಮಗೆ ನಾನು ಡಿಸ್ಟರ್ಬ್ ಮಾಡ್ತಾ ಇಲ್ಲ ತಾನೆ?

ಪ್ರಕಾಶ್ : ಖಂಡಿತಾ ಇಲ್ಲ ಸಾರ್. ಎಲೆಕ್ಷನ್ ಸೀನು ಹ್ಯಾಗಿದೆ ಸಾರ್?

ರುದ್ರಪ್ಪ : ಅದನ್ನ ನೀವು ಹೇಳಬೇಕಪ್ಪ, ಈಗ ಗೊತ್ತಾಗಿರೋ ಸುದ್ದಿ ಪ್ರಕಾರ ನಮ್ಮವರೇ ಮುಂದಿದಾರೆ. ಹನ್ನೆರಡು ಸೀಟು ಅನೌನ್ಸಾಯ್ತು. ಅದರಲ್ಲಿ ನಮ್ಮವರು ಏಳು ಜನ ಬಂದಿದಾರೆ.

ಪ್ರಕಾಶ್ : ಹೌದಾ ಸಾರ್, ಕಂಗ್ರಚುಲೇಷನ್ಸ್!

ರುದ್ರಪ್ಪ : ಕೌಂಟಿಂಗ್ ನಡೀತಾ ಇದೆ. ಅದರಲ್ಲೂ ಮುಂದಿದಾರೆ, ಏನಾಗುತ್ತೋ ನೋಡೋಣ.

ಪ್ರಕಾಶ್ : ಈ ಸಲ ನಿಮ್ಮ ಪಾರ್ಟಿ ಬರೋದು ಗ್ಯಾರಂಟಿ ಸಾರ್.

ರುದ್ರಪ್ಪ : ಹಾಗಂತ ನಾವೂ ನಂಬಿದೀವಿ, ನೋಡಿ ಕೊನೆ ಗಳಿಗೇಲಿ ಏನೇನೋ ಆಗಬಹುದು. ಜನ ಹೀಗೆ ಅಂತ ಹೇಳ್ಳಕ್ಕಾಗಲ್ಲ.

ಪ್ರಕಾಶ್ : ಪಾಪ ಈಗ ಶ್ರೀಕಾಂತಜೀ ಇದ್ದಿದ್ರೆ ಚೆನ್ನಾಗಿರೋದು.

ರುದ್ರಪ್ಪ : ನಮ್ಮ ದುರ್ದೈವ ಅವರನ್ನ ಕಳೆದುಕೊಂಡ್ವಿ, ಅದು ನೆನಪಾದರೆ ಸಾಕು. ಈ ಎಲೆಕ್ಷನ್ನೆಲ್ಲಾ ಯಾರಿಗೆ ಬೇಕು ಅಂತ ಅನ್ಸತ್ತೆ.

ಪ್ರಕಾಶ್ : ಅವರನ್ನ ಕೊಲೆ ಮಾಡಿದವರು ಯಾರು ಅಂತ , ಏನಾದರೂ ಪತ್ತೆ ಆಯ್ತಾ ಸಾರ್?

ರುದ್ರಪ್ಪ : ಅದು ಅಷ್ಟು ಸುಲಭವಾ ಹೇಳಿ? ಒಂದು ಅಂದಾಜಿನ ಪ್ರಕಾರ ಬಲಪಕ್ಷದವರು ಕೊಲೆಗಾರನನ್ನ ಬಚ್ಚಿಟ್ಟಿದಾರೆ ಅಂತೆ. ಕೈಯಲ್ಲಿ ಸರ್ಕಾರ ಇರೋವಾಗ ಇದು ಕಷ್ಟ ಅಲ್ಲ. ಒಂದು ಮುಚ್ಚಿ ಒಂದನ್ನ ಹೇಳಬಹುದು. ಸರ್ಕಾರ ಹೆಂಗಸಿದ್ದ ಹಾಗೆ. ಮನಸ್ಸಿನ

ವಿಕಾರ ಮುಚ್ಚೋದಕ್ಕೆ ಮಾತಾಡಬಹುದು, ಇದನ್ನೂ ಮೀರಿದರೆ ಕರೆದಾಗ ಬರೋ ಕಣ್ಣಿರಂತೂ ಇದ್ದೇ ಇದೆ. ದನಿ ತೆಗೆದು ಅತ್ತರೆ ನಾವೀ ಗಂಡಸರೆಲ್ಲ ಕಣ್ಣೀರು ಒರೆಸ್ತಾರೆ ಅಂತ ಅವಳಿಗ್ಗೊತ್ತು.

ಪ್ರಕಾಶ್ : ಚೆನ್ನಾಗಿ ಹೇಳಿದಿರಿ ಸಾರ್, ಆದರೆ ಅವರೇನೋ ತಿಳಿದುಕೊಂಡು ಶ್ರೀಕಾಂತಜೀನ್ನ ಕೊಂದರೆ-ಅದಿನ್ನೇನೋ ಆಯ್ತಲ್ವ? ಅಥವಾ ಹೀಗಾಗ್ತದೆ ಅಂತ ಗೊತ್ತಿದ್ದರೆ ಕೊಲ್ಲುತ್ತಿದ್ರೋ ಇಲ್ವೊ.

ರುದ್ರಪ್ಪ : ಏನಂದ್ರಿ, ತಿಳೀಲಿಲ್ಲ.

ಪ್ರಕಾಶ್ : ಅಲ್ಲ ಸಾರ್, ವಿರೋಧ ಪಕ್ಷಗಳಲ್ಲಿ ಇಮೇಜಿರೋದು ಶ್ರೀಕಾಂತಜೀ ಒಬ್ಬರಿಗೆ ಮಾತ್ರ. ಅವರನ್ನೇ ತೆಗೆದರೆ ಸಲೀಸಾಗಿ ಎಲೆಕ್ಷನ್ ಗೆಲ್ಲಬಹುದು-ಅಂತ ರೂಲಿಂಗ್ ಪಾರ್ಟಿಯವರು ತಿಳಿದುಕೊಂಡರು. ಕೊಲ್ಲೋದೇನೋ ಕೊಂದ್ರು ಆದರೆ ಜನರ ಸಹಾನುಭೂತಿ ವಿರೋಧ ಪಕ್ಷದ ಕಡೆ ವಾಲಿತು. ಅಷ್ಟರಮಟ್ಟಿಗೆ ಅವರ ಲೆಕ್ಕಾಚಾರ ತಪ್ಪಾಯ್ತಲ್ಲ.

ರುದ್ರಪ್ಪ : ಜನರ ಸಹಾನುಭೂತಿ ನಮ್ಮ ಕಡೆ ವಾಲಿದೆ. ಇಲ್ಲ-ಅಂತ ಆಮೇಲೆ ಹೇಳಬಹುದು.

ಪ್ರಕಾಶ್ : ಆದರೆ ಜನ ಮಾತ್ರ ಕೊಲೆಗಾರನನ್ನ ಕ್ಷಮಿಸೋದು ಸಾಧ್ಯವೇ ಇಲ್ಲ ಸಾರ್.

ರುದ್ರಪ್ಪ : ಹಾಗಂತೀರೇನು?

ಪ್ರಕಾಶ್ : ನಾವು, ಪೇಟೆ ಜನಕ್ಕೆ ನೆನಪಿನ ಶಕ್ತಿ ಕಮ್ಮಿ. ಆದರೆ ಸಾಮಾನ್ಯ ಜನ ಅಷ್ಟು ಸುಲಭವಾಗಿ ಮರೀತಾರಾ? ಶ್ರೀಕಾಂತಜೀ ಅವರ ಸಿನೇಮ ನೋಡಿದಾರೆ. ಜನರಾಡುವ ಮಾತುಗಳನ್ನ ಶ್ರೀಕಾಂತಜೀ ತೆರೆಯ ಮೇಲೆ ಆಡಿದಾರೆ. ಅವರೆಲ್ಲ ಭಾವನೆಗಳಿಗೆ ಅಭಿವ್ಯಕ್ತಿ ಕೊಟ್ಟಿದ್ದಾರೆ. ಅವರ ಕನಸುಗಳಿಗೆ ಬಣ್ಣ ಆಕಾರ ಕೊಟ್ಟಿದಾರೆ . ಗಾಂಧೀಜಿ ತರುವಾಯ ಆ ಸಂಖ್ಯೆಯಲ್ಲಿ ಈ ನಾಡಿನ ಜನರನ್ನ ಆಕರ್ಷಿಸಿದವರು ಶ್ರೀಕಾಂತಜೀ ಒಬ್ಬರೇ ಅಂತ ಪೇಪರಿನವರೇ ಬರೆದಿದ್ದಾರೆ. ಅಂಥವರನ್ನ ಜನ ಮರೀಬಹುದೇ ಸಾರ್? ಕೊಂದವರು ಗೊತ್ತಾಗೋದಿರಲಿ, ಒಬ್ಬನ ಮೇಲೆ ಅನುಮಾನ ಬಂದರೂ ಬಿಡೋದಿಲ್ಲ.

ರುದ್ರಪ್ಪ : ಅದು ಸರಿಯಪ್ಪ, ಕೊಲೆಗಾರ ಸಿಕ್ಕರೆ ನೀವೇನು ಮಾಡ್ತೀರಿ?

ಪ್ರಕಾಶ್ : ನಾನೇನು ಮಾಡ್ಲಿಕ್ಕಾದೀತು ಸಾರ್? ಆಫೀಸು, ಮನೆ, ಬೋರಾದರೆ ಪಿಕ್ಚರು, ಅದೂ ಬೇಡಾದ್ರೆ ಪದ್ಯ.

ರುದ್ರಪ್ಪ : ನೀವು ಬಿಡೀಪ್ಪ, ಪಿಕ್ಚರ್ ನಲ್ಲಿ ಪಿಸ್ತೂಲು ಕಂಡ್ರೆ ಅವಾಸ್ತವ ಅಂತ ಮೂಗು ಮುರಿಯೋರು. ನಾ ಹೇಳೋದು ಅದಲ್ಲ. ಅಥವಾ ಹೀಗನ್ನೋಣ : ಶ್ರೀಕಾಂತ ಜೀನ್ನ ಕೊಂದೋನು ನೇರವಾಗಿ ನಿಮ್ಮ ಮನೆಗೆ ಬಂದ ಅಂತಿಟ್ಕೊಳ್ಳಿ.

ಪ್ರಕಾಶ್ : ಅಯ್ಯೋ ಬಿಟ್ಟು ಅನ್ನಿ ಸಾರ್, ನಮಗ್ಯಾಕೆ?

ರುದ್ರಪ್ಪ : ಹಾಗಂತ ಇಟ್ಕೊಳ್ಳಿಯಪ್ಪ.

ಪ್ರಕಾಶ್ : ಹೋಗಿ ಹೋಗಿ ಅದನ್ಯಾಕೆ ಸಾರ್ ಇಟ್ಕೊಬೇಕು?

ರುದ್ರಪ್ಪ : ಹಾ. ಅದಕ್ಕೇ ಅವನು ಇಲ್ಲಿಗೆ ಬರೋದು. ಇವರು ನಿರುಪದ್ರವಿಗಳು. ಪಿಸ್ತೂಲು ಕಂಡ್ರೆ ಹೆದರೋರು, ತರಲೆ ತಾಪತ್ರಯ ಒಲ್ಲದವರು. ಪದ್ಯದ ಮಾತಿನಲ್ಲಿ ಹೇಳೋದಾದ್ರೆ ಥೇಟ್ ಹಸುವಿನಂಥೋರು ಮುಂದೆ ಬಂದರೆ ಹಾಯಲ್ಲಾ ಹಿಂದೆ ಬಂದರೆ ಒದಿಯಲ್ಲಾ. ಕೆಚ್ಚಲಲ್ಲಿ ಹಾಲಿಲ್ಲದಿದ್ದರೂ ಮಟನ್ ಮಾರ್ಕೆಟ್‌ನಲ್ಲಾದ್ರೂ ಇದಕ್ಕೆ ಬೆಲೆ ಇದೆ ಅಂತ ಅವನಿಗೆ ಗೊತ್ತು, ಇಲ್ಲಿ ಒಬ್ಬ ಕೊಲೆಗಾರ ಅಡಗಿದರೆ ಪೋಲೀಸರಿಗೆ ಅನುಮಾನ ಬರೋಲ್ಲ. ಹೀಗೆ ಯೋಚನೆ ಮಾಡಬಹುದಲ್ಲ !

ಪ್ರಕಾಶ್ : ಮಾಡಬಹುದು. ಆದರೆ ಈತ ಆಶ್ರಯ ಕೊಡಬೇಕಲ್ಲ.

ರುದ್ರಪ್ಪ : ಇದೊಳ್ಳೆ ಮಾತೆ! ಅಲ್ಲ ಮಾರಾಯಾ, ಪಿಸ್ತೂಲು ಹಿಡಿದುಕೊಂಡವನು ಕಾಲಿಂಗ್ ಬೆಲ್ಲೊತ್ತಿ ಮೇ ಐ ಕಮಿನ್ ಸಾರ್ ಅಂತ ನಿಮ್ಮಪ್ಪಣೀ ಕೇಳಿಬರ್ತಾನೋ? ಕಿಟಕೀನೋ ಬಾಗಿಲಾನೋ ಮುರಿದು ಒಳಗಡೆ ನುಗ್ತಾನೆ. ಪಿಸ್ತೂಲು ತೋರಿಸ್ತಾನೆ. ಆವಾಗ ಏನ್ಮಾಡ್ತೀರಿ?

ಪ್ರಕಾಶ್ : ದೇವರೇ ಕಾಪಾಡ್ಬೇಕು

ರುದ್ರಪ್ಪ : ನಿಮಗ್ಗೊತ್ತಿದೆ. ದೇವರು ಆ ದಂಧೆ ಬಿಟ್ಟಿದಾನೆ.

ಪ್ರಕಾಶ್ : ಹಾಗಿದ್ರೆ ಆ ಕೊಲೆಗಾರನೇ ಕಾಪಾಡ್ಬೇಕು.

ರುದ್ರಪ್ಪ : ಇದೀಗ ನಿಮ್ಮ ಮಾತಾಯಿತು. ನಿಮ್ಮ ಮನೆಯವರೊಬ್ಬರೇ ಇದಾರೆ ಅಂತ ಇಟ್ಕೊಳ್ಳಿ. ಆಗ್ಲೇ ಹೇಳಿದ ಹಾಗೆ ಕೊಲೆಗಾರ ಬಂದ. ಇವರೇನ್ಮಾಡಬಹುದು?

ಪ್ರಕಾಶ್ : ಸುಮ್‌ಸುಮ್ನೆ ಇದನ್ನೆಲ್ಲಾ ಯಾಕೆ ಯೋಚನೆ ಮಾಡೋದು ಸಾರ್?

ರುದ್ರಪ್ಪ : ಸುಮ್‌ಸುಮ್ನೆ ಅಂದ್ರೆ ಏನ್ರೀ ಪ್ರಕಾಶ್ ? ಇದು ಯಾವುದೇ ಕುಟುಂಬದಲ್ಲಿ ಯಾವುದೇ ಕ್ಷಣ ನಡೆದಿರಬಹುದಾದ ಘಟನೆ. ಹುಡುಗಾಟೀಕೇನಾ? ಅಷ್ಟಾಗಿ ಸಂದರ್ಭಕ್ಕೆ ತಕ್ಕ ಪ್ರತಿಕ್ರಿಯೆಗಳನ್ನ ಊಹಿಸೋದರಲ್ಲಿ ತಪ್ಪಿಲ್ಲವಲ್ಲ.

ಪ್ರಕಾಶ್ : ಅದು ಅವರವರ ಅಂತಸ್ತುಗಳನ್ನು ಅವಲಂಬಿಸಿರುತ್ತೆ ಅಂತ ನನ್ನ ಅಭಿಪ್ರಾಯ. ನೀವೇನಂತೀರಿ?

ರುದ್ರಪ್ಪ : ಅಂದ್ರೆ ಹ್ಯಾಗೆ?

ಪ್ರಕಾಶ್ : ನೋಡಿ, ಆತ ಹೊಕ್ಕಿದ್ದು ಆರ್ಡಿನರಿ ಬಡವರ ಮನೆಯಾದರೆ ಆ ಹೆಂಗಸು ಅಸಭ್ಯವಾಗಿ ಬಯ್ಯಬಹುದು. ಅವಳೇ ಹೊಡೆಯಬಹುದು. ಗಲಾಟೆ ಮಾಡಬಹುದು. ಸಹಾಯಕ್ಕಗಿ ಅಕ್ಕ ಪಕ್ಕ ಕರೆದು ಆತನನ್ನು ಹೆದರಿಸಿ ಓಡಿಸಬಹುದು.

ರುದ್ರಪ್ಪ : ನಿಜ. ಒಪ್ಪಿಕೊಂಡೆ ನಿಮ್ಮ ಗ್ರಹಣಶಕ್ತಿ ತುಂಬಾ ಚುರುಕು.

ಪ್ರಕಾಶ್ : ಇನ್ನು ಉಪ್ಪರಿಗೆ ಮನೆಗಂತೂ ಅವನು ಹೋಗೋದೇ ಇಲ್ಲ. ಯಾಕೆಂದರೆ ವಾಚ್‌ಮನ್ ಇರ್ತಾನೆ. ನಾಯಿಗಳಿರುತ್ತವೆ, ನಾಲ್ಕೈದು ಕಡೆ ಫೋನುಗಳಿರುತ್ತವೆ.

ರುದ್ರಪ್ಪ : ಭಲೆ ಭಲೆ, ಆಮೇಲೆ?

ಪ್ರಕಾಶ್ : ಇನ್ನು ಮಧ್ಯಮ ವರ್ಗದ ಹೆಂಗಸು. ಅವರೂ ಆರ್ಡಿನರಿ ಹೆಂಗಸರ ಹಾಗೆ ಕಿರುಚಿ, ಒದರಿ ಅಕ್ಕಪಕ್ಕದ ಜನರನ್ನು ಕೂಡಿಸಬಹುದು.

ರುದ್ರಪ್ಪ : ಇದನ್ನು ನಾನು ಒಪ್ಪೋದಿಲ್ಲ. ಇವರು ಸುಶಿಕ್ಷಿತರು. ರೇಡಿಯೋ ಇದ್ದವರು , ರೇಡಿಯೋದ 'ಹೊಸ ರುಚಿ' ಕೇಳಿಯೇ ಅಡಿಗೆ ಮಾಡೋದನ್ನ ಕಲಿತವರು. ಒಟ್ಟಾರೆ ತಾತ್ಪರ್ಯ; ಮನೇಲಿದ್ದಾಗೆಲ್ಲ ರೇಡಿಯೋ ಕೇಳೋರು. ನಿಮಗೇ ಗೊತ್ತಿದೆ. ರೇಡಿಯೋದಲ್ಲಿ ಭಕ್ತಿಗೀತೆ ಜಾಸ್ತಿ ಮತ್ತು ಆ ಗೀತೆಗಳಲ್ಲ ಕಿರುಚುತ್ತವೆ. ಈಕೆ ಕಿರುಚಿದರೆ ಅಕ್ಕ ಪಕ್ಕ ಏನಂದ್ಕೊಳ್ತಾರೆ? ರೇಡಿಯೋ ವಾಲ್ಯೂಂ ಜಾಸ್ತಿ ಇಟ್ಟಿದಾರೆ ಅಂಥ. ಇವಳ ಕಿರುಚಾಟ ಜಾಸ್ತಿಯಾದರೆ ಅವ್ರೂ ತಮ್ಮ ರೇಡಿಯೋ ವಾಲ್ಯೂಂ ಜಾಸ್ತಿ ಇಟ್ಕೊಳ್ತಾರೆ ಅಷ್ಟೆ. ನಿಮಗೆ ಇದೂ ಗೊತ್ತು; ;ಉಪ್ಪರಿಗೆ ಮನೆಯೋರು ಬೇಕಾದರೆ ಹತ್ತು ಗುಡಿಸಲ ಮಧ್ಯೆ ಇದ್ದಾರು. ಆದರೆ ಮಾಧ್ಯಮ ವರ್ಗದವರು ಅಕ್ಕ ಪಕ್ಕ ತಮ್ಮಂಥೋರು ಇದ್ದಲ್ಲೇ, ಕೊನೆಪಕ್ಷ ತಮಗಿಂತ ದೊಡ್ಡೋರಿರೋವಲ್ಲೇ ಇರೋದು. ಒಬ್ಬರ ಸಹಾಯಕ್ಕೆ ಒಬ್ಬರು ಬರೋ ಜನ ಅಲ್ಲ ಅವರು.

ಪ್ರಕಾಶ್ : ಸಾರ್ ನೀವೇನು ಹೇಳಬೇಕಂತೀರಿ?

ರುದ್ರಪ್ಪ : ಹೇಳ್ತಾ ಇಲ್ಲಪ್ಪ, ಕೇಳ್ತಾ ಇದೀನಿ.
*(ವಾಚ್ ನೋಡಿಕೊಂಡು, ಇರಿ, ಒಂದ್ನಿಮಿಷ, ಒಂದು ಫೋನ್ ಮಾಡ್ತೇನೆ)*
*(ಫೋನ್ ಮಾಡುವನು ಶೂನ್ಯ ಸ್ಥಳದಲ್ಲಿ ಚಿಂತಾಮಗ್ನನಾಗಿರುವ ದಾನಪ್ಪ ಫೋನೆತ್ತಿ ಕೊಳ್ಳುವನು)*

ರುದ್ರಪ್ಪ : ಯಾರು, ದಾನಪ್ಪನವರಾ?

ದಾನಪ್ಪ : ಹೌಂದ್ರೀ, ನೀವ್ಯಾರು?

ರುದ್ರಪ್ಪ : ನಾನು ರುದ್ರಪ್ಪ ಸ್ವಾಮಿ. ಅಭಿನಂದನೆಗಳು. ಏನು ಸ್ವಾಮಿ ನಿಮ್ಮ ಪಾರ್ಟಿ ಜಯಭೇರಿ ಹೊಡೀತಾ ಇದ್ರೆ ನೀವಿನ್ನೂ ರೂಮಿನಲ್ಲೇ ಇದ್ದೀರಾ!

ದಾನಪ್ಪ : ಎಲ್ಲಿ ಹೋಗಿದ್ರಿ ಸಾಹೇಬರs? ಐದಾರು ಬಾರಿ ನಿಮಗೆ ಫೋನ್ ಮಾಡಿದ್ದೆ. ಎರಡು ಬಾರಿ ನಿಮ್ಮ ಮನೀಗಿ ಬಂದಿದ್ದೆ.

ರುದ್ರಪ್ಪ : ಯಾಕೆ? ಏನಾದರೂ ಅರ್ಜೆಂಟಿತ್ತೇನು?

ದಾನಪ್ಪ : ಏನಿಲ್ರೀ... ನಿಮ್ಗೇನರೆ ಸುದ್ದಿ ಕಿವಿಗೆ ಬಿದ್ದೈತೇನ್ರಿ?

ರುದ್ರಪ್ಪ : ಹಾ ಏನೋ ಗಲಾಟೆ ಆಯ್ತಂತಲ್ಲ?

ದಾನಪ್ಪ : ಅದsರೀ, ಸಾಹೇಬರ, ಯಾವ್ದೋ ಒಂದು ಹೆಂಗಸು ಬಂದು ಹಿಂಗಿಂಗ್ರೀ ಸಾಹೇಬರ, ನನ್ ಮ್ಯಾಲ ಸುಳ್ಳಕೇಸ್ ಹಾಕ್ಯಾರ, ಇನ್ ಸ್ಪೆಕ್ಟರಗ ನೀವೊಂದು ಮಾತ ಹೇಳಿದರ ಉಪಕಾರ ಆಗತೈತ್ರಿ ಅಂದಳು.

ರುದ್ರಪ್ಪ : ಆಹಾ.

ದಾನಪ್ಪ : ಇನ್ಸ್ಪೆಕ್ಟರಗ ಫೋನು ಮಾಡಿ ಕೇಸ್ ನಿಕಾಲಿ ಮಾಡಿಸಿದೆ. ಆಗ, ಉಪಕಾರಾತ್ರೀ ಸಾಹೇಬರ ಅಂತ ಕಾಲು ಹಿಡ್ಯಾಕ ಬಂದಳ್ರೀ, ಆಗಂದ್ರ ಸಾಹೇಬರ, ಕೇಳಾಕ್ಹತ್ತೀರೇನ್ರೀ.

ರುದ್ರಪ್ಪ : ಹೂ ಹೂ

ದಾನಪ್ಪ : ಆಗ ನೋಡ್ರೀ ಸಾಹೇಬರ, ದೇವರಂತ ತಿಳಿದು ನಿಮ್ಮ ಮುಂದ ಖರೆ ಹೇಳ್ತೀನು, -ಯಾರೋ ಪೇಪರ್ ನವರು ಫೋಟೋ ಹಿಡ್ಕೊಂಬಿಟ್ಟರು.

ರುದ್ರಪ್ಪ : ಛೇ ಛೆ ಇಂಥ ಹೊತ್ನಲ್ಲಿ ಇದೇನು ಮಾತಿಕೊಂಡ್ರೀ ದಾನಪ್ಪ; ನಿಮ್ಮ ಗಲಾಟೆನೆಲ್ಲಾ ರೆಕಾರ್ಡ್ ಮಾಡಿಕೊಂಡಿದಾರಂತೆ.

ದಾನಪ್ಪ : *(ಗಾಬರಿಯಾಗಿ)* ಹೌಂದ್ರೀ? ನನಗ್ಗೊತ್ತಿಃಲ್ರೀ ಸಾಹೇಬರ ನೀಔಏನಾರ ಮಾಡಿ ಕಾಪಾಡಕಃಬೇಕ್ರೀ... ಆ ಪೇಪರ್ ನವರು ಹೆಂಗೂ ನಿಮ್ಮ ಮಾತು ಮೀರೋದಿಲ್ಲ.

ರುದ್ರಪ್ಪ : ನಡದದ್ದೇನು?

ದಾನಪ್ಪ : ನೀವೆಲ್ಲಿಂದ ಮಾತಾಡ್ರೀರಿ ಸಾಹೇಬರಃ? ಬೇಕಾದರ ನಾ ಅಲ್ಲಿಗೇ ಬರ್ತೀನಿ.

ರುದ್ರಪ್ಪ : ಅಲ್ಲಿಂದಲೇ ಹೇಳಿ, ಪರವಾಗಿಲ್ಲ.

ದಾನಪ್ಪ : ಸಾಹೇಬರಃ ನೀವು ನನ್ನ ತಂದಿ ಸಮ. ನಿಮ್ಮ ಮುಂದ ಮುಚ್ಚಿಟ್ಟುಕೊಳ್ಳುವಂಥಾದ್ದೇನೈತ್ರೀ? ಆ ಹೆಂಗಸು ಬಂದಳು ನೋಡಾಕ ಚೆಂದಿದ್ದಳಲು ಅನ್ರಿ! ಪೊಲೀಸ್ ಕೇಸಾಗೇತಿ, ಕಾಲ್ ಬೀಳ್ತೀನಿ ತಗಸ್ರೀ ಅಂದಳು. ಫೋನ್ ಮಾಡಿ ಕೇಸ ತೆಗೆಸಿದೆ. ನಾವಂಚೂರು ಗುಂಧಾಕಿದ್ದೆ ಸಾಹೇಬರ... ಮೈಮರತು ಏನೋ ಕೈ ಹಾಕಿದೆ; ಆ ಹೆಂಗಸು ಚೀರ್ಯಾಡಿ ತಪ್ಪಿಸ್ಕಂಡು ಓಡಿಹೋದಳು! ಇಷ್ಟುಃ ನಡೆದದ್ರೀ ಸಾಹೇಬರ. ದೇವರಾಣಿ ಇನ್ನೇನೂ ನಡೀಲಿಲ್ರೀ.

ರುದ್ರಪ್ಪ : ಮತ್ತೆ ಅದೇ ಹೊತ್ತಿಗೆ ಕೃಷ್ಣಪ್ಪ ಬಂದನಂತೆ.

ದಾನಪ್ಪ. ಹೌಂದು ಹೌಂದ್ರೀ ಸಾಹೇಬರಃ!

ರುದ್ರಪ್ಪ : ನೋಡಿ....ಮಾತಾಡಿದ್ದೆಲ್ಲ ರೆಕಾರ್ಡಾಗೋದು, ಫೋಟೋ ಹಿಡಿಯೋದು, ಹೊತ್ತಿಗೆ ಸರಿಯಾಗಿ ಕೃಷ್ಣಪ್ಪ ಬರೋದು, ಇದೆಲ್ಲ ಮುಂಚೆ-ಪ್ಲಾನ್ ಮಾಡಿದ್ದು ಅಂತ ಅನ್ನಿಸೋದಿಲ್ವಾ ನಿಮ್ಗೆ?

ದಾನಪ್ಪ : ಅಂದ್ರ ಹೆಂಗಂದಿರಿ ಸಾಹೇಬರ?

ರುದ್ರಪ್ಪ : ನೀವು ಮುಗ್ಧರು ಅನ್ನೋದು ಇದಕ್ಕೇ ನೋಡಿ. ನಾನೇನೋ ಮೊನ್ನೆ ನಿಮಗೆ ಶ್ರೀಕಾಂತಜೀ ಕೊನೆ ಆಸೆ ಹೇಳಿದ್ದೆ. ನೀವು ಅದನ್ನ ಯಾರ್ಯಾರಿಗೋ ಹೇಳಿದ್ದೀರಿ.

ದಾನಪ್ಪ : ನಾ ಯಾರ್ಮುಂದೂ ಬಾಯಿ ಬಿಟ್ಟಿಲ್ಲರೀ ಸಾಹೇಬರ!

ರುದ್ರಪ್ಪ : ಹೇಳ್ಬಿರ್ಲೆಬೇಕು. ನೀವು ಮುಖ್ಯಮಂತ್ರಿ ಸ್ಪರ್ಧೆಗೆ ನಿಲ್ತೀರಿ ಅಂತ ಯಾವಾಗ ಗೊತ್ತಾಯ್ತೋ? ಕೃಷ್ಣಪ್ಪನಿಗೆ, ಆವಾಗ್ಲೆ ಇದೆಲ್ಲ ಆಗಿರೋದು.

ದಾನಪ್ಪ : *(ಖಾತ್ರಿಯಾಗಿ ತಲೆಯಲ್ಲಿ ಬೆಳಕು ಹೊಳೆದಂತೆ)* ಆಹಾ ಹಾಹಾ.. ಹೌಂದ್ರೀ ಸಾಹೇಬರ! ಏನ್ ಖೊಟ್ಟಿ ಮಗಾರೀ ಆ ಕೃಷ್ಣಪ್ಪ! ಸಾಹೇಬರs, ನಾ ಮಂತ್ರಿ ಆಗ್ಲಿ ಬಿಡ್ಲಿ ಆ ಕೃಷ್ಣ್ಯಾ ಅದ್ಹೆಂಗ ಮುಖ್ಯಮಂತ್ರಿ ಆಗ್ತಾನೊ ನೋಡೇ ಬಿಡ್ತೇನಿ. ಸಾಹೇಬರ ಈ ಪೇಪರ್ ಕೇಸೊಂದು ಬರದಾಂಗ ಮಾಡ್ರೀ ಅಷ್ಟೆ.

ರುದ್ರಪ್ಪ : ಪೇಪರ್ ನವರಿಗೆ ಹೇಳ್ತೀನಿ, ಅದು ಬೇರೆ ಮಾತು,-

ದಾನಪ್ಪ : ಅಷ್ಟಾದರ ಸಾಕ್ರೀ ಸಾಹೇಬರ. ನೀವs ನಮ್ಮ ಮುಖ್ಯಮಂತ್ರಿಗೋಳು. ನೀವು ಪ್ರಮಾಣ ವಚನ ಸ್ವೀಕರಿಸಿದ ಕೂಡಲೆ ಪೈಲಾ ಮಾಲಿ ನಂದs ನೋಡ್ರಿ.

ರುದ್ರಪ್ಪ : ಈ ಸಿದ್ಧಲಿಂಗೂ…….

ದಾನಪ್ಪ : ಏ ಬಿಡ್ರೀ. ನೀವೆಲ್ಲಿದ್ದೀರಿ ಹೇಳ್ರಿ. ಈಗ ಬಂದ್ಬಿಡ್ತೇನಿ. ಮಾತಾಡೋಣು.

ರುದ್ರಪ್ಪ : ಮನೆ ಕಡೆ ಬನ್ನಿ. ನಮಸ್ಕಾರ,

ದಾನಪ್ಪ : ಈಗ್ಬಂದ ಬಡ್ತೇನಿ ನೋಡ್ರಿ.
*(ಇಬ್ಬರೂ ಫೋನಿಡುವರು. ರುದ್ರಪ್ಪ ಬಂದು ಮತ್ತೆ ಮೊದಲಿನಂತೆಯೇ ಕೂರುತ್ತಾ)*

ರುದ್ರಪ್ಪ : ಕೇಳಿದಿರೇನಪ್ಪ ರಾಜಕೀಯ?

ಪ್ರಕಾಶ್ : ನನಗೇನೂ ಅರ್ಥವಾಗಲಿಲ್ಲ ಸಾರ್.

ರುದ್ರಪ್ಪ : ಅಯ್ಯೋ ಬಿಡಿ, ಪಾಪ ನಿಮಗ್ಯಾಕೆ? ಮೂಲ ಸಮಸ್ಯೆಗೆ ಬರೋಣ, ನೀವು ಅಥವಾ ನಿಮ್ಮಂಥೋರು ಮನೆಯಲ್ಲಿದ್ದಾಗ ಅಂದರೆ ನಿಮ್ಮ ಹೆಂಗಸರು ಅಥವಾ ಮಧ್ಯಮ ವರ್ಗದ ಹೆಂಗಸು ಒಬ್ಬಳೆ ಮನೆಯಲ್ಲಿದ್ದಾಗ ಶ್ರೀಕಾಂತಜೀನ್ನ ಕೊಂದವನು ಬಂದ. ಬಂದರೆ ಆವಾಗ ಇವರು ಏನು ಮಾಡ್ತಾರೆ?

ಪ್ರಕಾಶ್ : ಮೂರ್ಛೆ ಬೀಳಬಹುದು. ಸಾಯಬಹುದು. ಅಥವಾ ಬಾಯಿ ಮುಚ್ಚಿಕೊಂಡು ಅವನಿಗೆ ಆಶ್ರಯ ಕೊಡಬಹುದು, ಆಗದಿರೋ ಮಾತಿಗೆ ನಾವ್ಯಾಕೆ ತಲೆ ಕೆಡಿಸಿಕೋಬೇಕು? ನಿಮ್ಮ ಮಾತು ಕೇಳಿದರೆ, ನನ್ನಿಂದ ನಿಮಗೆ ಯಾವುದೋ ಒಂದು ಉತ್ತರಬೇಕು; ಅದು ಸಿಕ್ತಾ ಇಲ್ಲ ಸಿಕ್ಕೋ ತನಕ ನೀವು ಬಿಡೋದಿಲ್ಲ. ಅಥವಾ ಅದು ಯಾವ ಉತ್ತರ ಅಂತ ಹೇಳಿದರೆ ಅದನ್ನೇ ಹೇಳಿ ಬಿಡಬಹುದು. ಸುಮ್ನೆ ಎಷ್ಟಂತ ಶಬ್ದಗಳನ್ನು ಎಳೆದಾಡೋದು?

ರುದ್ರಪ್ಪ : ಸಿಟ್ಟಿಗೇಳಬೇಡೀಪ್ಪಾ, ನೀವು ಬುದ್ಧಿ ಜೀವಿಗಳು, ಮಾತೆತ್ತಿದರೆ ಜನ, ದೇಶ, ಸಂಸ್ಕೃತಿಯನ್ನ ಬಯ್ಯಬೇಕಾದವರು, ಇಂಥಾದ್ದನ್ನೆಲ್ಲಾ ವೈಯಕ್ತಿಕವಾಗಿ ತಗೊಂಡರೆ ಹೇಗೆ? ನೀವೇ ಹೇಳಿ, ನಾನೆಂದಾದರೂ ಹರಟೆ ಹೊಡೆಯೋ ಪೈಕೀನಾ? ಆಕಳಿಸೋದಕ್ಕೂ ಟೈಮಿಲ್ಲಾಂತೀನಿ ಖಂಡಿತ ನಾನೇನೊ ನಿಮ್ಮನ್ನ ಕೇಳಬೇಕಾದ್ದಿದೆ. ಮತ್ತು ಅದಕ್ಕಾಗಿ ಸಂಕೋಚವಾಗ್ತಾ ಇದೆ.

ಪ್ರಕಾಶ್ : ನನ್ಹತ್ರ ನಿಮಗ್ಯಾಕೆ ಸಾರ್ ಸಂಕೋಚ? ನಿಮಗೂ ಗೊತ್ತಿದೆ-ನಾನು ನಿಮ್ಮನ್ನ ಇಷ್ಟ ಪಡ್ತೀನಿ. ನಾಳೆ ನೀವು ಮಂತ್ರಿ ಆದ್ರೆ ನಿಮ್ಮೆಲ್ಲ ಅಭಿಮಾನಿಗಳ ಹಾಗೆ ನನಗೂ ಸಂತೋಷವಾಗ್ತದೆ. ನಿಸ್ಸಂಕೋಚವಾಗಿ ಹೇಳಿ.

ರುದ್ರಪ್ಪ : ಹೇಳಿದೆನಲ್ಲ ಕವಿಗಳೇ,

ಪ್ರಕಾಶ್ : ಏನಂತ, ಆ ಕೊಲೆಗಾರ ನಾನಿಲ್ಲದಾಗ ನನ್ನ ಮನೆಗೆ ಬಂದಿದ್ದಾಂತ್ಲ?

ರುದ್ರಪ್ಪ : ಹೌದು.

ಪ್ರಕಾಶ್ : *(ಆಘಾತದಿಂದ ಎದ್ದು ನಿಂತು)* ಏನಂದ್ರಿ ಸಾರ್!

ರುದ್ರಪ್ಪ : ಇವೊತ್ತು ಪೋಲೀಸ್ ಇನ್ಸ್‌ಪೆಕ್ಟರ್ ಫೋನ್ ಮಾಡಿದ್ರು. ಶ್ರೀಕಾಂತಜೀನ್ನ ಕೊಂದ ವ್ಯಕ್ತಿ ಆ ದಿನ ನಿಮ್ಮ ಮನೆಯಲ್ಲಿ ಅಂದ್ರೆ ಈ ಮನೆಯಲ್ಲಿ ಬಚ್ಚಿಟ್ಟು ಕೊಂಡಿದ್ದ ಅಂತ ಅವರಿಗೆ ಗೊತ್ತಾಗಿದೆ. ನಿಮ್ಮ ಬಗ್ಗೆ ನನ್ನನ್ನ ಕೇಳಿದರು. ಇದು ಸಾಧ್ಯವಿಲ್ಲ ನಾನೊಂದು ಸಲ ಮಾತಾಡಿ ಹೇಳ್ತೀನಿ ಅಂದೆ. ಸುಮ್ಮನಾಗಿದಾರೆ. ಪೋಲೀಸರು ಮತ್ತು ನಿಮ್ಮ ಮಧ್ಯೆ ಮೂಗು ತೂರೋದಕ್ಕೆ ನನಗೆ ಇಷ್ಟ ಇಲ್ಲ. ಆದರೆ ನೀವು ನನ್ನ ಜನ ಈ ಮನೆಯನ್ನ ನಿಮಗೆ ಕೊಡಿಸಿದವ ನಾನು. ಅಥವಾ ಈ ಕೇಸಿನಲ್ಲಿ ನೀವ್ಯಾಕೆ ತಲೆ ಹಾಕಬೇಕು ಅಂತ ನೀವು ಹೇಳೋದಾದರೆ, ಇಗೋ ಹೊರಟೆ.

ಪ್ರಕಾಶ್ : *(ಭೀತನಾಗಿ)* ಸಾರ್ ಇದು ಶುದ್ಧ ಸುಳ್ಳು. ಆ ದಿನ ನಾನು ಮನೆಯಲ್ಲೇ ಇದ್ದೆ.

ರುದ್ರಪ್ಪ : ನೀವು ಮನೆಯಲ್ಲಿದ್ದಿರಿ ಅಂದರೆ ಆ ಮಾತು ಅಲ್ಲಿಗೆ ಮುಗೀತು.

ಪ್ರಕಾಶ್ : ಪೋಲೀಸರು?

ರುದ್ರಪ್ಪ : ನಿಜ, ಪೋಲೀಸರು ಅನುಮಾನಪಡೋದಕ್ಕೆ ಕಾರಣ ಇರಬೇಕಲ್ಲ?

ಪ್ರಕಾಸ್ : ಏನಿದ್ದೀತು?

ರುದ್ರಪ್ಪ : ಅದು ನಿಮಗ್ಗೊತ್ತಿರಬೇಕು. ಅದನ್ನೇ ಕೇಳ್ತಾ ಇದೀನಿ. ಆದರೆ ನೀವು ಈ ಥರಾ ಖಂಡಿತಾ ಗಾಬರಿಯಾಗಬಾರದು. ನೀವೆಂಥ ಜನ ಅಂತ ನನಗ್ಗೊತ್ತು. ನೀವು ನಿಧಾನವಾಗಿ ಆ ದಿನ ನಡೆದದ್ದನ್ನ ಹೇಳಿದರೆ ನಾನು ನಿಮಗೆಲ್ಲ ಸಹಾಯ ಮಾಡಬಲ್ಲೆ-ಅಂತ ತಿಳ್ಕೋಬಹುದು. ದಿನಾ ಬೆಳಗಾದರೆ ನೋಡಿ. ಎಷ್ಟೊಂದು ಕೆಟ್ಟ ಸುದ್ದಿ ಕಿವಿಗೆ ಬೀಳುತ್ತವೆ. ಅದಕ್ಕೆಲ್ಲಾ ನಾ ಬೆಚ್ಚಿ ಬೀಳ್ತೀನಾ? ಕೇಳಿದ ಕೂಡಲೆ ನಕ್ಕು ಬಿಡ್ತೇನೆ ಅಷ್ಟೆ. ನೀವೂ ಹಾಗಿರಬೇಕು.

ಪ್ರಕಾಶ್ : ಅದರಿದು ಸತ್ಯ ಅಲ್ಲ ಸಾರ್. ಆ ದಿನ ನಾನು ಮನೆಯಲ್ಲಿದ್ದೆ.

ರುದ್ರಪ್ಪ : ಶ್ರೀಕಾಂತಜೀ ಭಾಷಣ ಕೇಳಲಿಕ್ಕೆ ಹೋಗಿರ್ಲಿಲ್ವಾ?

ಪ್ರಕಾಶ್ : ಹೋಗಿದ್ದೆ.

ರುದ್ರಪ್ಪ : ನೋಡಿ, ನೋಡಿ-ಮನೇಲೂ ಇದ್ರಿ, ಶ್ರೀಕಾಂತಜೀ ಭಾಷಣ ಕೇಳಲಿಕ್ಕೂ ಹೋಗಿದ್ರಿ! ನೀವು ಒಂದೇ ಉಸಿರಿನಲ್ಲಿ ಎರಡಭಿಪ್ರಾಯದ ಮಾತು ಹೇಳಿದರೆ ಹ್ಯಾಗೆ?

ಪ್ರಕಾಶ್ : ಭಾಷಣಕ್ಕೆ ಹೋಗಿದ್ದೆ. ಗಲಾಟೆ ಆದ ಕೂಡಲೇ ಮನೆಗೆ ಬಂದೆ. ಮನೇಲಿ ಸರೋಜ ಬಿಟ್ಟು ಯಾರೂ ಇರಲಿಲ್ಲ.

ರುದ್ರಪ್ಪ : ಅಂದ್ರೆ ಶ್ರೀಕಾಂತಜೀ ಕೊಲೆ ಆದ ಮೇಲೆ ನೀವು ಮನೆಗೆ ಬಂದ್ರಿ .

ಪ್ರಕಾಶ್ : ಹೌದು. ಆದರೆ ಕೊಲೆಗಾರ ಇಲ್ಲಿಗೆ ಬಂದಿದ್ದ ಅನ್ನೋದಕ್ಕೆ ಪೋಲೀಸರ ಹತ್ತಿರ ಸಾಕ್ಷಿ ಏನಿದೆ? ಅಥವಾ ಕೊಲೆ ಆದ ಮೇಲೆ ಓಡಿ ಓಡಿ ಮನೆಗೆ ಬಂದೆ. ನನ್ನನ್ನೇ ಕೊಲೆಗಾರ ಅಂದ್ಕೊಂಡ್ರೋ!

ರುದ್ರಪ್ಪ : ನಿಮ್ಮ ಬಗ್ಗೆ ಅಂಥ ಅನುಮಾನ ಸಾಧ್ಯ ಇಲ್ಲ. ಆದರೂ ಆಧಾರ ಇಲ್ಲದೆ ಪೋಲೀಸರು ಅನುಮಾನಪಡಲಾರರು. ಅಥವಾ ಸ್ಟೇಷನ್‌ಗೆ ಜೊತೆಯಲ್ಲಿ ಬರ್ತೀರೇನು? ವಿಚಾರಿಸೋಣ.

ಪ್ರಕಾಶ್ : ಬನ್ನಿ ಹೋಗೋಣ
*(ಪ್ರಕಾಶ್ ಅವಸರದಲ್ಲಿ ಚಪ್ಪಲಿ ಹಾಕಿಕೊಂಡು ಸಿದ್ಧನಾಗುವನು. ಆದರೆ ಮತ್ತೆ ರುದ್ರಪ್ಪನ ಬಳಿಗೆ ಬಂದು)*
ಸಾರ್ ಇಲ್ಲಿಂದಲೇ ನೀವು ಫೋನು ಮಾಡಿದರೆ?-

ರುದ್ರಪ್ಪ : ಹಾಗೂ ಆದೀತು.
*(ರುದ್ರಪ್ಪ ಫೋನ್ ಮಾಡುವನಲು. ಶೂನ್ಯ ಸ್ಥಳದಲ್ಲಿ ಒಬ್ಬ ಹೆಂಗಸು ಬರುವಳು)*

ರುದ್ರಪ್ಪ : ಹಲೋ, ಇನ್‌ಸ್ಪೆಕ್ಟರಿದ್ದಾರೇನು?

ಹೆಂಗಸು : ಹಲೋ, ಯಾರು ಬೇಕಿತ್ತು?

ರುದ್ರಪ್ಪ : ಸ್ವಲ್ಪ ಇನ್‌ಸ್ಪೆಕ್ಟರನ್ನ ಕರೀತೀರಾ? ಅಜೇಂಟ್ ಪ್ಲೀಸ್.

ಹೆಂಗಸು : ಇದು ಇನ್‌ಸ್ಪೆಕ್ಟರ್ ಮನೆ ಅಲ್ವಲ್ಲ. ಯಾವ ನಂಬರ್ ಬೇಕಿತ್ತು ನಿಮಗೆ?

ರುದ್ರಪ್ಪ : ಹಲೋ ಇನ್‌ಸ್ಪೆಕ್ಟರ್. ನಮಸ್ಕಾರ ಹ್ಯಾಗಿದ್ದೀರಿ ಸ್ವಾಮಿ?

ಹೆಂಗಸು : ಯಾರು ನೀವು?

ರುದ್ರಪ್ಪ : ಮತ್ತೆ ಯಾರ ಮೇಲೆ ಬಲೆ ಬೀಸಿದ್ದೀರಿ? ಯಾರಾದರೂ ಸಿಕ್ಕರಾ? ನೀವು ಬಿಡಿ, ಎಷ್ಟೆಷ್ಟು ಜನ ಸಿಕ್ಕರೆ ಅಷ್ಟಷ್ಟೂ ಹಿಡಿದುಕೊಂಡು ಹಿಂಡ್ತೀರಾ.

ಹೆಂಗಸು : ಹಲೊ ರಾಂಗ್ ನಂಬರ್ *(ಫೋನು ಕುಕ್ಕುವಳು)*

ರುದ್ರಪ್ಪ : ನಾನು ರುದ್ರಪ್ಪ ಸ್ವಾಮಿ. ಆಪೋಸಿಟ್ ಪಾರ್ಟಿ ಲೀಡರ್. ಗುರುತಾಯ್ತಾ? ಆದಾಯ್ತಲ್ಲ-ಇವೊತ್ತು ಬೆಳಿಗ್ಗೆ ನನಗೇನೋ ಹೇಳಿದಿರಲ್ಲಾ ಅದೇ ನಮ್ಮ ಮಿಸ್ಟರ್ ಪ್ರಕಾಶ್ ಮನೆಯಲ್ಲಿ ಶ್ರೀಕಾಂತಜೀ ಕೊಲೆಗಾರ ಬಚ್ಚಿಟ್ಟುಕೊಂಡಿದ್ದ ಅಂತ... ಹಾಹಾ ಆ

ವಿಚಾರಾನೇ ಕೇಳ್ತಾ....ಅಲ್ಲಾ ಸ್ವಾಮಿ ಆ ಕೊಲೆಗಾರ ಇಲ್ಲೇ ಅಡಗಿದ್ದ ಅನ್ನೋಕೆ ನಿಮ್ಮಲ್ಲೇನಾದರೂ ಸಾಕ್ಷಿ ಪುರಾವೆ ಇದೆಯಾ?... ಪಿಸ್ತೂಲು... ಅಂಥಾದ್ದೇನೂ ಇಲ್ಲ ಸ್ವಾಮಿ, ಸ್ವತಃ ನಾನೇ ನೋಡಿದೆ... ಯಾರದೋ ಮಾತು ಕೇಳಿಕೊಂಡು ನನ್ನ ಸ್ನೇಹಿತರ ಬಗ್ಗೆ ಅನುಮಾನ ಪಟ್ಟರೆ ಹೇಗೆ?...ಹೂ...ಹೂಹೂ... ಥ್ಯಾಂಕ್ಸ್ *(ಫೋನ್ ಕೆಳಗಿಡುವನು)* ಅವರು ಹೇಳಿದ್ದು ಕೊಲೆಗಾರ ಬಚ್ಚಿಟ್ಟುಕೊಂಡಲ್ಲೆ ಪಿಸ್ತೂಲು ಬಚ್ಚಿಟ್ಟಿದ್ದಾನಂತೆ. ಅದು ಇದ್ರೆ ನೋಡಿ ಅಂಥ ಹೇಳಿದ್ರು, ಇಲ್ಲಿಲ್ಲಾ ಅಂದೆ.

ಪ್ರಕಾಶ್ : *(ದೊಡ್ಡ ಭಾರ ಇಳುವಿದ ಹಾಗೆ)* ಸಧ್ಯ!

ರುದ್ರಪ್ಪ : ಯಾವುದಕ್ಕೂ ಒಂದ್ಸಲ ಮನೆ ಹುಡುಕಿ ನೋಡಿ; ಪೋಲೀಸರಿಗೆ ಅನುಮಾನ ಇದ್ದ ಮೇಲೆ...

ಪ್ರಕಾಶ್ : ಇದ್ರೆ ತಾನೆ ಏನಾದ್ರೂ ಸಿಕ್ಕೋದು?

ರುದ್ರಪ್ಪ : ಅದು ಸರಿ, ಮಧ್ಯೆ ನಾನು ನಿಂತಿರೋದರಿಂದ ನನ್ನ ಸಮಾಧಾನಕ್ಕಾಗಿಯಾದರೂ ಒಂದು ಸಲ ನೋಡಿಯಪ್ಪಾ.

ಪ್ರಕಾಶ್ : ನೀವೇ ನೋಡ್ಕೊಳ್ಳಿ ಸಾರ್

ರುದ್ರಪ್ಪ : ಮನೆ ನಿಮ್ಮದು. ನೀವು ನೋಡಿ.

ಪ್ರಕಾಶ್ : *(ಆತಂಕರಹಿತನಾಗಿ ಒಂದೊಂದನ್ನೇ ರುದ್ರಪ್ಪನಿಗೆ ಸಾಕ್ಷಿಗಾಗಿ ಎಂಬಂತೆ ತೋರಿಸುವನು)* ನೋಡಿ ಸಾರ್ ಇದು ಬೀರು. ಸರಿಯಾ? ಇದು ಡ್ರಾಯರ್ ಸರಿಯಾ? ಇದು ಡ್ರೆಸ್ಸಿಂಗ್ ಟೇಬಲ್ ಸರಿಯಾ?

ರುದ್ರಪ್ಪ : ನಾನಿನ್ನು ಬರ್ತೇನೆ ಪ್ರಕಾಶ್, ನೋಡಿ ನಿಮಗೆ ಖಾತ್ರಿ ಆದರಾಯ್ತು-ಹಾಗೇ ಹಾಸಿಗೆ ಕೆಳಗೆಲ್ಲ ನೋಡಿ. ಸಿಕ್ಕರೆ ಸರಿ ಸಿಗದಿದ್ದರೆ ಇನ್ನೂ ಸರಿ.
*(ರುದ್ರಪ್ಪ ಮೆಲ್ಲಗೆ ಹೊರಡುವನು . ಪ್ರಕಾಶ್ ಹಾಗೇ ಹುಡುಕುತ್ತಾ ಹಾಸಿಗೆ ಎತ್ತುವನು. ಅದರ ಕೆಳಗೆ ಪಿಸ್ತೂಲನ್ನು ಕಂಡು ಸಾರ್ ಎಂದು ಕಿರಚುವನು. ರುದ್ರಪ್ಪನೂ ಹೋಫಿ ನೋಡಿ ಆಘಾತವನ್ನು ಅಭಿನಯಿಸಿವನು. ಪ್ರಕಾಶ್ ಹಾಸಿಗೆ ಮೇಲೆ ಅಲ್ಲೇ ಕುಸಿಯುತ್ತಾನೆ.)*

ರುದ್ರಪ್ಪ : ಧೈರ್ಯ ತಗೋಬೇಕು ಪ್ರಕಾಶ್. ನೀವು ಮುಗ್ಧರು ಅಂತ ನಾನು ಬಲ್ಲೆ, ಹಾಗಂತ ಯಾರ ಎದುರಿಗೂ ಸಾಕ್ಷಿ ಹೇಳಬಲ್ಲೆ. ಬೆನ್ನ ಹಿಂದೇನೋ ಮೋಸ ನಡೆದಿರಬೇಕು. ಯಾವುದಕ್ಕೂ ನಾನಿದ್ದೀನಿ ಅಂತ ನಿಮಗೆ ನೆನಪಿರಲಿ. ನನಗೂ ಇದು ಆಘಾತವೆ. ನಿಮಗಾದದ್ದು ನನಗಾಗಿದ್ದರೆ ಇಷ್ಟೊತ್ತಿನಲ್ಲಿ ನಾಕೈದು ಬಾರಿ ಮೂರ್ಛೆ ಬಿದ್ದಿರುತ್ತಿದ್ದೆ. ನೀವು ಬುದ್ದಿ ಜೀವಿಗಳು ಧೈರ್ಯ ತಂದ್ಕೋಬೇಕು. ನಿಮ್ಮ ಮನೆಯವರ ಜೊತೆ ಈ ಬಗ್ಗೆ ಮಾತಾಡಿದ್ದೀರಾ?

ಪ್ರಕಾಶ್ : *(ನಿರಾಶೆಯಿಂದ)* ಎಲ್ಲ ಸಾರ್,

ರುದ್ರಪ್ಪ : ಅಥವಾ ಅವರೇ ಏನಾದರೂ ಹೇಳಿದರಾ?

ಪ್ರಕಾಶ್ : ಇಲ್ಲ ಸಾರ್.

ರುದ್ರಪ್ಪ : ನೀವು ಸಿಟ್ಟಾಗೋಲ್ಲ ಅಂದ್ರೆ ಒಂದು ಮಾತು ಕೇಳ್ತೀನಿ.

ಪ್ರಕಾಶ್ : ಕೇಳಿ ಸಾರ್.

ರುದ್ರಪ್ಪ : ನಿಮ್ಮ ಮನೆಯವರ ಮೇಲೆ ನಿಮಗೆ ನಂಬಿಕೆ ಇದೆಯಾ?

ಪ್ರಕಾಶ್ : ಸಾರ್!

ರುದ್ರಪ್ಪ : ಇದು ನನಗೆ ಮುಖ್ಯ ಈಗಷ್ಟೇ ಇನ್‌ಸ್ಪೆಕ್ಟರಿಗೆ ಮನೆಯೆಲ್ಲ ನಾನೇ ಹುಡುಕಿದೆ ಅಂತ ಹೇಳಿದೆ . ಈಗ ನೋಡಿದರೆ ನಾ ಎಂಥ ದಡ್ಡ ಅನ್ನಸ್ತಿದೆ. ಎಲ್ಲರ ಆತ್ಮಗಳು ಕಪ್ಪಾಗಿವೆ ಪ್ರಕಾಶ್ ಇದ್ದುದರಲ್ಲಿ ಪಾಲಿಷ್ ಮಾಡಿಕೊಂಡು ತೋರಿಸಬೇಕು.

ಪ್ರಕಾಶ್ : ಸಾರ್ ನನ್ನ ಹೆಂಡತಿ ಮೇಲೆ ನನಗೆ ವಿಶ್ವಾಸ ಇದೆ.

ರುದ್ರಪ್ಪ : ಹಾಗಿದ್ದರೆ ಇದು ಪಿಸ್ತೂಲಲ್ವಾ?

ಪ್ರಕಾಶ್ : *(ಮೌನ).*

ರುದ್ರಪ್ಪ : ಇಬ್ಬರಲ್ಲಿ ಒಬ್ಬರಿಗೂ ಗೊತ್ತಿಲ್ಲದೆ ಇದಿಲ್ಲಿ ಬಂದಿರಲಾರದು ಅಲ್ವಾ?

ಪ್ರಕಾಶ್ : *(ಮೌನ).*

ರುದ್ರಪ್ಪ : ಹೆಂಗಸು ಅನೇಕ ಅರ್ಥಗಳಲ್ಲಿ ಅಪಾಯಕಾರಿ ಪ್ರಕಾಶ್. ಕೆನ್ನೆ ಮೇಲೆ ರೇಜರ್ ಆಡಿಸಿದ ಹಾಗೆ ಹೆಂಗಸನ್ನ ಆಡಿಸಬೇಕು, ತುಸು ಎಚ್ಚರ ತಪ್ಪಿದರೂ ಆಯ್ತು ರಕ್ತ ಸುರಿಸಬೇಕಾಗ್ತದೆ. ಅಥವಾ ಇಂಥ ಮಾತನ್ನ ನಾನು ಯಾಕೆ ಹೇಳ್ತಾ ಇದೀನಂತಲೂ ನೀವು ಬುದ್ಧಿಜೀವಿಗಳು ತಿಳ್ಕೊಬೇಕು. ಇಷ್ಟಾಗಿ ನೀವು ದಡ್ಡನಾಗಿರಬೇಕಂತ ತೀರ್ಮಾನ ಮಾಡಿದ್ದರೆ ನಾನೇನೂ ಮಾಡ್ಲಿಕ್ಕಾಗೋದಿಲ್ಲ. ಗಂಡ ಹೆಂಡತಿ ಇಬ್ಬರೂ ಮಾತಾಡಿಕೊಂಡು ನನಗೆ ಆಮೇಲೆ ತಿಳಿಸಿ. ಈ ಮಧ್ಯೆ ಕೊಲೆಗಾರನೇನಾದರೂ ಈ ಕಡೆ ಬಂದರೆ - ನೆನಪಿರಲಿ. ಪೋಲೀಸರಿಗೆ ಫೋನ್ ಮಾಡಬೇಡಿ. ಯಾವುದರಲ್ಲೂ ನನ್ನ ಹೆಸರು ತರಬೇಡಿ, ತಂದರೆ ಖಂಡಿತಾ ನಿಮಗೆ ಅಪಾಯ ತಪ್ಪಿದ್ದಲ್ಲ. ನಾನು ಬಂದಿದ್ದೆ ಅಂತ ಕೊಲೆಗಾರನಿಗೂ ಹೇಳಬೇಡಿ. ನಿಮ್ಮ ಹೆಂಡತಿಗೂ ಅಷ್ಟೆ. ಕೊನೇಪಕ್ಷ ನಿಮ್ಮನ್ನು ಉಳಿಸೋದಕ್ಕಾದರೂ ನಾನು ಶುದ್ಧನಾಗಿರಬೇಕು.
*(ಹೋಗುವನು, ಪ್ರಕಾಶ್ ಕಂಗಾಲಾಗಿ ಕೂರುವನು.)*

## ಐದು

*(ಅದೇ ಮನೆ . ಪ್ರಕಾಶ್ ಕಂಗಾಲಾಗಿ ಕೂತಿದ್ದಾನೆ. ತುಸು ಹೊತ್ತು ಯೋಚಿಸಿ ಮತ್ತೆ ಎದ್ದು ಮನೆಯಲ್ಲಿ ಇನ್ನೇನಿದೆ ಎಂದು ಹುಡುಕತೊಡಗುತ್ತಾನೆ. ಸಿಗರೇಟಿನ ತುಂಡು ಸಿಕ್ಕುತ್ತದೆ. ಮತ್ತೆ ಹುಡುಕುತ್ತಾನೆ. ವಿಸ್ಕಿಯ ಖಾಲಿ ಬಾಟ್ಲಿ ಸಿಕ್ಕುತ್ತದೆ. ಆಘಾತವನ್ನು ಸಹಿಸಲಾರದೆ ಕೂರುತ್ತಾನೆ. ಬಹಳ ಹೊತ್ತು ಯೋಚಿಸಿ ಕೊನೆಗೆ ಅದನ್ನು ಜೇಬಿನಲ್ಲಿ ತುರುಕಿಕೊಂಡು ನಿರ್ವಿಣ್ಣನಾಗಿ ಕೂತಿದ್ದಾಗ ಸರೋಜ ಬರುತ್ತಾಳೆ. ಪೋಲೀಸ್ ಕೇಸು, ದಾನಪ್ಪನೊಂದಿಗೆ ಹೆಣಗಿದ್ದು - ಇದೆಲ್ಲದರಿಂದ ಹೈರಾಣಾದ ಅವಳ ಮುಖದಲ್ಲಿ ಗೆಲುವೆಂಬುದೇ ಇಲ್ಲ. ಪ್ರಕಾಶ್ ಅವಳ ಚಲನವಲನಗಳನ್ನು ತೀಕ್ಷ್ಣವಾಗಿ ಗಮನಿಸುತ್ತಿದ್ದಾನೆ.)*

ಸರೋಜ : ಈಗಷ್ಟೇ ಬಂದಿರೋ ಹಾಗಿದೆ. ಬಟ್ಟೆ ಕೂಡ ಬದಲಾಯಿಸಿಲ್ಲ.
*(ಸರೋಜ ವ್ಯಾನಿಟಿ ಬ್ಯಾಗನ್ನು ಟೇಬಲ್ ಮೇಲಿಟ್ಟು ಬೆಡ್ ರೂಮಿನ ಕಡೆ ಹೋಗುತ್ತಿದ್ದಾಗ)*

ಪ್ರಕಾಶ್ : ಹೂ.

ಸರೋಜ : ಬಟ್ಟೆ ಬದಲಾಯಿಸಬಾರದೆ?

ಪ್ರಕಾಶ್ : ಹೂ.

ಸರೋಜ : ಮತ್ತೆ ಇನ್ನೂ ಹಾಗೇ ಕೂತಿದೀರಿ, ಯಾಕೆ ಒಂಥರಾ ಇದ್ದೀರಿ? ಕಾಲೇಜಿನಲ್ಲೇನಾದರೂ ಜಗಳಾಡಿದಿರಾ?

ಪ್ರಕಾಶ್ : ಇಲ್ಲ.

ಸರೋಜ : ಮತ್ಯಾಕೆ ಹೀಗಿದೀರಿ? ಮೈಯಲ್ಲಿ ಹುಷಾರಿಲ್ಲೇನು?
*(ತಿರುಗಿ ಬಂದು ಕಾಳಜಿಯಿಂದ ಅವನ ಮೈ ಮುಟ್ಟಿ ನೋಡಲು ಹೋದೊಡನೆ ಪ್ರಕಾಸ್ ಮೆಲ್ಲಗೆ ನಿವಾರಿಸುವನು)*

ಪ್ರಕಾಶ್ : ಕಾಫಿ ಮಾಡು.

ಸರೋಜ : ಯಾಕೆ, ಏನಾಯ್ತು ಹೇಳೀಂದ್ರೆ?

ಪ್ರಕಾಶ್ : ಯೋಚನೆ ಮಾಡ್ತಾ ಇದೀನಿ. ನಾನು ಯೋಚನೆ ಮಾಡಿದರೆ ನಿನಗೆ ತಲೆ ನೋವೇನೂ ಬರೋದಿಲ್ವಲ್ವಾ?
*(ಸರೋಜ ಚಕಿತಳಾಗಿ ಅವನನ್ನೇ ನೋಡುತ್ತಾ ಕಿಚನ್ನಿಗೆ ಹೋಗುವಳು. ಪ್ರಕಾಶ್ ರೇಡಿಯೋ ಆನ್ ಮಾಡುವನು.)*
ರೇಡಿಯೋದಲ್ಲಿ : ಮತಗಳ ಎಣಿಕೆ ಮುಂದುವರಿದಲ್ಲೆಲ್ಲಾ ಎಡರಂಘದ ಉಮೇದುವಾರರು ತಮ್ಮ ಎದುರಾಳಿಗಿಂತ ಮುಂದೆ ಇರುವುದು ಕಂಡುಬಂದಿದೆ. ಈಗ ಬಂದ ಸುದ್ದಿಯ ಪ್ರಕಾರ ಎಡರಂಗದ ಉಮೇದುವಾರರಾದ….
*(ತಕ್ಷಣ ಪ್ರಕಾಶ್ ರೇಡಿಯೋ ಆಫ್ ಮಾಡುವನು ಸರೋಜ ಕಿಚನ್ ಬಾಗಿಲಿಗೆ ಬಂದು ಪ್ರಕಾಶ್‌ನನ್ನೇ ಹೆದರಿಕೆಯಿಂದ ನೋಡುತ್ತಿದ್ದಾಳೆ.)*

ಪ್ರಕಾಶ್ : ಸರೋಜ, ಒಬ್ಬ ಹುಡುಗಿ ಅನೇಕ ಕಥೆಗಳಿಗೆ ಹೀರೋಯಿನ್ ಆಗಬಹುದಲ್ವಾ?

ಸರೋಜ : *(ಮುಖ ಒರೆಸಿಕೊಳ್ಳುತ್ತಾ)* ಏನಂದ್ರೀ.

ಪ್ರಕಾಶ್ : ಏನಿಲ್ಲ, ಎಷ್ಟು ಪೌಡರ್ ಬಳಿದುಕೊಂಡಿದ್ದೀ! ಇಷ್ಟು ದಪ್ಪ ಪೌಡರ್ ಬಳಿದುಕೊಂಡರೆ ನಿನ್ನ ನಿಜವಾದ ಬಣ್ಣ ಗೊತ್ತಾಗೋದೇ ಇಲ್ಲ!

ಸರೋಜ : *(ಆತಂಕವಿದ್ದರೂ ಧೈರ್ಯ ತೆಗೆದುಕೊಂಡು)* ಈಗ್ಲೂ ಪೌಡರ್ ಇದೆಯಾ? ಇವೊತ್ತು ಯಾಕೋ ನಿಮ್ಮ ಕಣ್ಣು ಸರಿ ಇಲ್ಲ. ಇವೊತ್ತೇನಾಗಿದೆ ನಿಮಗೆ?

ಪ್ರಕಾಶ್ : ನನಗೆ?

ಸರೋಜ : ಕನ್ನಡೀಲಿ ಮುಖ ನೋಡಿಕೊಂಡ್ರಾ?

ಪ್ರಕಾಶ್ : ಇಲ್ಲ, ಯಾಕೆ?

ಸರೋಜ : ಹೊಗೆ ಹಿಡಿದ ಹಾಗೆ ಕಪ್ಪಿಟ್ಟಿದೆ. ಹೇಳಿ ನನ್ಮುಂದೆ ಹೇಳಬಾರದಂಥ ಯೋಚನೆ ಏನದು?

ಪ್ರಕಾಶ್ : ಏನಿಲ್ಲವಲ್ಲ.

ಸರೋಜ : *(ಒತ್ತಾಯದಿಂದ ನಗೆ ತಂದುಕೊಂಡು)* ಬೆಂಕಿ ಇದೆ ಅನ್ನೋದಕ್ಕೆ ಹೊಗೆ ಬಿಟ್ಟು ಬೇರೆ ಸಾಕ್ಷಿ ಬೇಕಾ?

ಪ್ರಕಾಶ್ : ದಿನಾ ಮಧ್ಯಾಹ್ನ ನಾನಿಲ್ಲದೇ ಇರೋವಾಗ ಮನೇಗೆ ಬರ್ತೀ ಅಂತೆ ಹೌದಾ?

ಸರೋಜ : ನಿಮಗ್ಗೊತ್ತು ನನಗೆ ಬಿಡುವಾಗೋದಿಲ್ಲಾ ಅಂತ.

ಪ್ರಕಾಶ್ : ನೇರವಾಗಿ ಉತ್ತರ ಹೇಳು ಇವೊತ್ತು ಬಂದಿದ್ದೆಯಾ ಇಲ್ವಾ?

ಸರೋಜ : ಯಾಕೆ, ಏನಾದರೂ ಕಳುವಾಗಿದೆಯಾ?

ಪ್ರಕಾಶ್ : ಸುತ್ತು ಬಳಸಿದಷ್ಟೂ ನೀನೂ ಜಾರಿಕೊಳ್ಳೋ ಅವಕಾಶ ಕಮ್ಮಿ *(ಕಿರುಚಿ)* ನನಗೆ ನೇರ ಉತ್ತರ ಕೊಡು.

ಸರೋಜ : *(ಗಾಬರಿಯಾಗಿ)* ಇವೋತ್ತೇನಾಗಿದೆ ನಿಮಗೆ? ಯಾಕೆ ಈಥರಾ ಮಾತಾಡ್ತಾ ಇದೀರಿ?

ಪ್ರಕಾಶ್ : *(ಕಣ್ಣು ಕಿಸಿದು ಅವಳ ಭುಜ ಗಟ್ಟಿಯಾಗಿ ಹಿಡಿದು)* ಹೇಳ್ತಿಯೋ ಇಲ್ಲವೋ?

ಸರೋಜ : ಏನಂತ?

ಪ್ರಕಾಶ್ : ಮನೆಗೆ ಬಂದಿದ್ದೆಯಾ?

ಸರೋಜ : ಹೇಳಿದೆನಲ್ಲಾ ಇಲ್ಲಾಂತ.

ಪ್ರಕಾಶ್ : *(ನೂಕಿ)* ಈಗ ಈ ಮಾತನ್ನ ನಾನು ನಂಬೋದಿಲ್ಲ.

ಸರೋಜ : ಅಂದ್ರೆ ನಾನು ಮನೆಗೆ ಬಂದಿದ್ದೇ ಅಂತ್ಲ ನೀವು ಹೇಳೋದು?

ಪ್ರಕಾಶ್ : ಹೌದು.

ಸರೋಜ : ಇಲ್ಲಾರೀ ನಾ ಖಂಡಿತಾ ಬಂದಿರ್ಲಿಲ್ಲ. ಇವೊತ್ತು ಬುಧವಾರ ಅಲ್ವಾ? ಕೈ ತುಂಬಾ ಕೆಲಸ.

ಪ್ರಕಾಶ್ : ಸುಳ್ಳು ಹೇಳಬೇಡ, ಇದು ಕೋರ್ಟಲ್ಲ.

ಸರೋಜ : ಏನು ಹಾಗಂದ್ರೆ?

ಪ್ರಕಾಶ್ : *(ಜೇಬಿನಿಂದ ಖಾಲಿ ಬಾಟ್ಲಿ ತೆಗೆದು ತೋರಿಸುತ್ತಾ)* ಜ್ಞಾಪಕ ಆಯ್ತಾ? ಏನಾಗಿದೆ ಅಂತಾ ಗೊತ್ತಾಯಿತಾ?

ಸರೋಜ : *(ಇನ್ನೂ ಗಾಬರಿಯಿಂದ)* ಕುಡಿಯೋದಕ್ಕೂ ಸುರು ಮಾಡಿದಿರಾ? ಅದಕ್ಕೇ ಈ ಥರಾ ಮಾತಾಡ್ತಿರೋದು.

ಪ್ರಕಾಶ್ : ಇದು ನಾನು ಕುಡಿದದ್ದಲ್ಲ.

ಸರೋಜ : ಇನ್ನೇನು, ಬೇರೆಯವರು ಕುಡಿದು ಖಾಲಿ ಮಾಡಿದ್ದನ್ನ ಜೇಬಿಗೆ ಇಟ್ಕೊಂಡು ಬಂದಿರಾ?

ಪ್ರಕಾಶ್ : ಹೌದು ನನಗೆ ಖಾಲಿ ಬಾಟ್ಲಿ, ಸಿಗರೇಟಿನ ತುಂಡು ಕಲೆಕ್ಟ್ ಮಾಡೋ ಹವ್ಯಾಸ ಇದೆ. ಇಗಾ ನೋಡು *(ಜೇಬಿನಿಂದ ಸಿಗರೇಟು ತುಂಡು ತೋರಿಸವನು)*

ಸರೋಜ : ನೀವು ಮುಂಚಿನಿಂದಲೂ ಸಿಗರೇಟು ಸೇದುತೀರಿ ಅಂತ ನನಗೆ ಅನುಮಾನ ಇತ್ತು.

ಪ್ರಕಾಶ್ : ಎಷ್ಟು ವಿಷಯೊ ತಿಳಕೊಂಡೀಯೆ! ಕಣ್ಣೀರಿನಿಂದ ಮೋಸ ಮಾಡಬಹುದು ಅಂತ್ಲೂ ತಿಳಕೊಂಡಿದ್ದೀ ಅಲ್ವಾ?

ಸರೋಜ : *(ಚಕಿತಳಾಗಿ)* ಯಾಕೆ ಸುತ್ತೂ ಬಳಸಿ ಮಾತಾಡ್ತೀರಿ? ನೇರಾವಾಗಿ ಮಾತಾಡಬಾರದಾ?

ಪ್ರಕಾಶ್ : ಮಾತಾಡ್ತೀನಿ. ಕೇಳು : ಹೊರಗಡೆ ಕಣ್ಣೀರು ಸುರಿಸುತ್ತಾ ಒಳಗಡೆ ನನ್ನ ಫೂಲ್ ಮಾಡಿ ನಗ್ತಾ ಇದ್ದೀಯ. ಕೊರೆಯೋ ಸತ್ಯಗಳನ್ನ ಒಳಗಿಟ್ಟುಕೊಂಢು ಬೆಚ್ಚನೆಯ ಸುಳ್ಳುಗಳನ್ನ ನನ್ನ ಕಣ್ಣಿಗೆ ಲೇಪಿಸುತ್ತ ಇದ್ದೀಯಾ. ಛೆ! ಪತಿವ್ರತೆ ಆಗೋದು ಈ ದೇಶದಲ್ಲಿ ಎಷ್ಟು ಸುಲಭ, - ಒಂದು ತಾಳಿ, ಹಣೆ ಮೇಲೆ ಕುಂಕುಮ - ಇಷ್ಟು ಮೇಕಪ್ಪಿದ್ದರಾಯ್ತು.

ಸರೋಜ : *(ಭಾರಿ ಆಘಾತ ಹೊಂದಿ ಆದರೂ ಕೂಲಾಗಿ)* ನಾನು ನಿಮ್ಮನ್ನ ಫೂಲ್ ಮಾಡಿದೆನಾ? ಪತಿವ್ರತೆ ಹಾಗೆ ಮೇಕಪ್ ಮಾಡಿಕೊಂಡು ಸುಳ್ಳು ಹೇಳಿದೆನಾ? ನೀವೇನು ಮಾತಾಡ್ತಾ ಇದ್ದೀರಂತ ನಿಮಗ್ಗೊತ್ತಾ? ನನ್ನನ್ನ ನಂಬಿ ಪ್ರಕಾಶ್. ನಿಮ್ಮ ಜೊತೆ ನಾನು ತುಂಬಾ ಮಾತಾಡಬೇಕು. ನಾನೆಲ್ಲ ನಿಮಗೆ ಹೇಳ್ತೀನೆ ಬನ್ನಿ *(ಹೋಗಿ ಬಾಗಿಲು ಹಾಕಿಕೊಂಡು ಬರುವಳು).*

ಪ್ರಕಾಶ್ : ಇವೊತ್ತು ಯಾರೋ ನನ್ನನ್ನು ಸ್ಕೂಟರ್ ಮೇಲೆ ಫಾಲೋ ಮಾಡ್ತಿದ್ರು.

ಸರೋಜ : *(ಗಾಬರಿಯಿಂದ ಹೌಹಾರಿ)* ಹಾ! ಯಾರು?

ಪ್ರಕಾಶ್ : ಯಾರಂತ ನಿನಗೇನಾದರೂ ಗೊತ್ತಾ?

ಸರೋಜ : ನಿಮ್ಮನ್ನು ಫಾಲೋ ಮಾಡಿದವರು ನನಗೆ ಹ್ಯಾಗೆ ಗೊತ್ತು?

ಪ್ರಕಾಶ್ : ಕೊಲೆ ಮಾಡ್ತೀವಿ ಅಂತ ಹೆದರಿಸೋ ಫೋನ್ ಬರುತ್ತವೆ. ಕಾಲೇಜಿಗೆ.

ಸರೋಜ : *(ಗಕ್ಕನೆ ಪ್ರಕಾಶನನ್ನು ತಬ್ಬಿ ಅಳುತ್ತಾ)* ಪ್ರಕಾಶ್ ಪ್ರಕಾಶ್ ನಿಮಗೇನೂ ಆಗಿಲ್ಲ ತಾನೆ?

ಪ್ರಕಾಶ್ : ಕಣ್ಣೀರಿನ ಮಹಾಪೂರದಲ್ಲಿ ಕೊಚ್ಚಿ ಹೋಗ್ತೀನಿ ಅಂದ್ಕೊಂಡ್ಯಾ?

ಸರೋಜ : *(ಅದೆ ಗಾಬರಿಯಲ್ಲಿ)* ಪೋಲೀಸರಿಗೆ...ಅಥವಾ ಪೋಲೀಸರಿಗೆ ಹೇಳಿದರೆ ಇನ್ನೇನಾಗುತ್ತೋ... ಅಯ್ಯೋ ಏನಾಗ್ತಿದೆ.

ಪ್ರಕಾಶ್ : ತುಂಬಾ ಮಾತಾಡ್ಬೇಕು ಅಂದೆ.

ಸರೋಜ : ನಾನಾ? ಏನಿಲ್ಲವಲ್ಲ....

ಪ್ರಕಾಶ್ : ಈ ಪಿಸ್ತೂಲು ಹ್ಯಗೆ ಬಂತಿಲ್ಲಿ?

ಸರೋಜ : ಪಿಸ್ತೂಲು? ಇಲ್ಲಿತ್ತ? ಹ್ಯಾಗೆ ಬಂತೋ ನನಗೇನು ಗೊತ್ತು? ನೋಡಿ, ಯಾರ್ಯಾರೋ ಏನೇನೋ ಹೇಳಿ ನಿಮ್ಮ ತಲೆ ಕೆಡಿಸಿದಾರೆ, ನಿಜ ನಿಮಗ್ಗೊತ್ತಿಲ್ಲ...

ಪ್ರಕಾಶ್ : ಆಯ್ತು, ಅವರು ಸುಳ್ಳು ಹೇಳ್ತಾರೆ ಅಂತಿಟ್ಕೊಳ್ಳೋಣ. ನಿಜ ಏನಂತ ನೀ ಹೇಳಬಹುದಲ್ಲ?

ಸರೋಜ : ಕಾಲ ಬಂದಾಗ ಹೇಳ್ತೀನಿ.

ಪ್ರಕಾಶ್ : ಇದಲ್ವಾ ಕಾಲ? ಹೇಳೆ, ಇಷ್ಟು ದಿನ ಕುರುಡಾಗಿದ್ದೆ. ಈಗ ನೀನು ಹೇಳೋ ಫಳ ಫಳ ಹೊಳೆಯುವ ಸತ್ಯದಿಂದ ಈ ಪಾಮರನಿಗೆ ಕಣ್ಣಾದರೂ ಬರಲಿ, ಹೇಳು.

ಸರೋಜ : ನಿಮ್ಮ ಬುದ್ಧಿ ಸರಿಯಿಲ್ಲ.

ಪ್ರಕಾಶ್ : ನಿಜ, ಇಲ್ಲೀ ತನಕ ಬುದ್ಧಿಗೆ ರಜಾ ಕೊಟ್ಟಿದ್ದೆ, ಈಗ ನನಗೆಲ್ಲಾ ತಿಳೀತಾ ಇದೆ. ಈಗ ನೀನು ಶಬ್ದ ಮತ್ತು ವೈಯಾರಗಳಿಂಥ ಆಟ ಆಡೋದು ಸಾಧ್ಯ ಇಲ್ಲ ಸರೋಜ. ನನಗೆ ಈಗ ಬುದ್ಧಿ ಬಂದಿದೆ; ಹೇಳಲಾ? ಇದೂ ಇಲ್ಲಿದೆಯಲ್ಲಾ ಇದು ಪಿಸ್ತೂಲು. ನೀನು ನನ್ನ ಹೆಂಡತಿ. ನನಗೆ ಬುದ್ಧಿ ಬಂದ ಬಗ್ಗೆ ಖಾತ್ರಿ ಆಯ್ತಾ? ಅಷ್ಟೇ ಅಲ್ಲ ನೀ ಹೇಳದಿದ್ದರೂ ನಿನ್ನ ಬಗ್ಗೆ ನನಗೆ ನನ್ನದೇ ಆದ ಸ್ವಂತ ಅಭಿಪ್ರಾಯ ಕೂಡ ಇದೆ; ಗೊತ್ತಾ?

ಸರೋಜ : ನೀವು ಗಂಡಸರು, ಬೇಕಾದ್ದರೆ ಬಗ್ಗೆ ಅಭಿಪ್ರಾಯ ಕೊಡಬಲ್ಲಿರಿ.

ಪ್ರಕಾಶ್ : ಹೌದು, ಈಗ ನನ್ನ ಅಭಿಪ್ರಾಯ ಏನಂದರೆ, ನೀನು ಸೂಳೆ! ಯೂ ಆರ್ ಎ ಬಿಚ್. *(ಸರೋಜ ಅಳಲಾರದೆ ಸುಮ್ಮನಿರಲಾರದೆ ಏಳಲಾರದೆ ಎದ್ದು ಪ್ರಕಾಶನೆದುರು ಹೋಗಿ ನೊಂದ ಧ್ವನಿಯಲ್ಲಿ ಹೇಳುತ್ತಾಳೆ)*

ಸರೋಜ : ಪ್ರಕಾಶ್, ನೀವಾ ಈ ಮಾತು ಹೇಳಿದ್ದು? ನನ್ನ ಮುಖ ನೋಡಿ...

ಪ್ರಕಾಶ್ : ಥೂ! *(ತಿರುಗಿ ನಿಲ್ಲುತ್ತಾನೆ)*

ಸರೋಜ : *(ಗದ್ಗದಳಾಗಿ)* ನನ್ನ ಮುಖ ನೋಡಿ ಹೇಳಿ. ನಾನು ಸೂಳೇನಾ? ಈ ಮಾತು ಯಾರು ಹೇಳಿದ್ದುದು ನಿಮಗೆ?

ಪ್ರಕಾಶ್ : ಹಾಗಾದರೆ ನಾನು ಹೇಳಿದ್ದು ನಿಜ ತಾನೆ? ಹೇಳು : ಶ್ರೀಕಾಂತಜೀ ಕೊಲೆ ಆದ ದಿವಸ ಯಾವ ಬೋಳೀಮಗ ಬಂದಿದ್ದ? ಯಾವನ್ನ ಬೆಡ್ ರೂಮಿನಲ್ಲಿಟ್ಟುಕೊಂಡು ನನ್ನ ಜೊತೆ ಆಟ ಆಡ್ತಿದ್ದೆ? ಯಾ ಬೋಳೀಮಗ ನನ್ನ ಕೊಲ್ತಿನಂತ ಫೋನ್ ಮಾಡ್ತಿದಾನೆ?

ಸರೋಜ : *(ಅಳುತ್ತಾ)* ಪ್ರಕಾಶ್, ಪ್ಲೀಸ್ ಕೇಳಬೇಡಿ, ನನ್ನ ನಂಬಿ.

ಪ್ರಕಾಶ್ : ಇನ್ನೂ ನಂಬಬೇಕಾ? ನಾನು ಆಫೀಸಿನಲ್ಲಿದ್ದಾಗ ನೀನು ಯಾರ್ದೋ ಜೊತೆ, ಇಲ್ಲಿ ಮನೇಲಿ ಚಕ್ಕಂದ ಆಡ್ತಾ ಇದ್ದರೆ, - ಆಹಾ ನನ್ನ ಮಡದಿ ಎಂಥಾ ಪತಿವ್ರತೆ ಅಂತ ನಂಬಿದೆ. ಸಾಲದಾ? ನನಗೆ ಸಂದೇಹ ಬರದ ಹಾಗೆ ನನ್ನ ಮುಂದೆ ಥರಾವರಿ ವೈಯಾರದ ಆಟ ಆಡಿದೆ. ಆಹಾ ನನ್ನ ಹೆಂಡತಿ ಎಷ್ಟು ಗಾಢವಾಗಿ ಪ್ರೀತಿಸ್ತಾಳೆ ನನ್ನ! ಅಂತ ನಂಬಿದೆ, ಸಾಲದಾ? ಇನ್ನೆಷ್ಟು ನಂಭಬೇಕು? ಅಥವಾ ಅವನು ಮನೆಗೆ ಬಂದೊಡನೆ ಕಂಡೂ ಕಾಣದ ಹಾಗೆ ಹೋಗಿಬಿಡಲಾ?
*(ಬೆಡ್‌ರೂಂ ಕಿಟಕಿಯ ಮೇಲೆ ಯಾರದೋ ನೆರಳು ಸರಿದು ಹೋಗುತ್ತದೆ. ಅದು ಅವಳಿಗೆ ಮಾತ್ರ ಕಾಣಿಸುತ್ತದೆ.)*
ಹೇಳೇ ಆ ನಿನ್ನ ಮಿಂಡನ ಹೆಸರು ಹೇಳು.

ಸರೋಜ : *(ಅಳುತ್ತಾ)* ಪ್ರಕಾಶ್ ದಯವಿಟ್ಟು ಕೇಳಬೇಡಿ. ಆಮೇಲೆ ಒಂದು ದಿನ ಎಲ್ಲ ಹೇಳ್ತೇನೆ. ನನ್ನನ್ನು ನಂಬಿ, ಪ್ಲೀಸ್.

ಪ್ರಕಾಶ್ : ಕಂತು ಕಂತಾಗಿ ಸತ್ಯ ಬೇಡವೆ. ಇಡಿಯಾಗಿ ಈ ಕ್ಷಣವೇ ಬೇಕು.

ಸರೋಜ : ನಾನೆಲ್ಲ ಆಮೇಲೆ ಹೇಳ್ತೇನೆ ಅಂದ್ರೆ ಯಾಕೆ ನಂಬೋದಿಲ್ಲ ನೀವು?
*(ಹೋಗಿ ಕುಸಿದು ಕಾಲು ತಬ್ಬಿಕೊಳ್ಳುವಳು. ಪ್ರಕಾಶ್ ಜಿಗುಪ್ಸೆಯಿಂದ ಅವಳನ್ನು ದೂರಕ್ಕೆ ತಳ್ಳಿ ವೇದನೆಯನ್ನು ಸಹಿಸಿಕೊಳ್ಳಲಾರದೆ ತನ್ನ ತಾನೇ ಎಂಬಂತೆ ಆಡಿಕೊಳ್ಳುತ್ತಾನೆ.)*

ಪ್ರಕಾಶ್ : ಥೂ ಹೆಣ್ಣೆ, ಸೊನ್ನೆ ತುಂಬಿದ ನನ್ನ ಬಾಳಿಗೆ ಹೊಸ ಬಣ್ಣ ಬಳಿದವಳು ನೀನು ಅಂದುಕೊಂಡೆ. ನನ್ನ ಆತ್ಮಕ್ಕೆ ಹೊಸ ಹುಟ್ಟುಕೊಟ್ಟವಳು ಅಂದುಕೊಂಡೆ. ನನ್ನೆಲ್ಲ ಕನಸುಗಳಿಗಿಮತ ನಿನ್ನೊಂದಿಗಿನ ಒಂದು ಕ್ಷಣದ ಜೀವನ ದೊಡ್ಡದು ಅಂದುಕೊಂಡೆ. ನಿನ್ನ ಸಣ್ಣ ತಕರಾರುಗಳನ್ನು ಪ್ರೀತಿಯ ಗೀತೆ ಮಾಡಿ ಹಾಡಿದೆ. ಸಾಮಾನ್ಯಳಲ್ಲ ನೀನು, ಎಲ್ಲ ಋತುಮಾನಗಳನ್ನು ತೀವ್ರವಾಗಿ ಪ್ರೀತಿಸಬಲ್ಲ ದೇವತೆ. ನಿನ್ನ ಕಣ್ಣಿನಲ್ಲಿ ನೀಲಿ ರತ್ನಗಳಿವೆ. ಪ್ರಪಂಚದ ಎಲ್ಲ ದನಿ ಸಪ್ಪಳಗಳು, ವಾಸನೆ, ಸ್ಪರ್ಶಗಳು, ಬಿಸಿಬಿಸಿಯಾದ ಅರ್ಥಗಳು, ಹೊರಡೋದು ಅಲ್ಲಿಂದ ಅಂದುಕೊಂಡೆ…. ಆದರೆ ಹೆಣ್ಣೇ ನಿನ್ನ ಮುಖ ಯಾವುದೋ! ಬೆನ್ನು ಎಲ್ಲಿದೆಯೋ? ಬೆನ್ನಿನಲ್ಲಿ ಇನ್ನೇನಿದೆಯೋ! ಮುಖದಲ್ಲಿ ನಿನಗೆ ಎರಡೇ ಕಣ್ಣಾದರೆ ಬೆನ್ನಿನಲ್ಲಿ ಸಾವಿರ ಕಣ್ಣು! ಮುಖದ ಕಣ್ಣಿನ ಹೊಳಪಿಗೇ ಕುರುಡಾದವನು, ಬೆನ್ನಿನ ಕಣ್ಣಿಗೆ ಬೆಳಕಿಗೆ ಏನಾಗುವೆನೋ! ದೇವರೇ! ದೇವರೇ! ಈಗ ದೊಡ್ಡ ಮಳೆಯಾಗಿ ಮಳೆಯಲ್ಲಿ ನಿಂತು ನಾನು ನೆನೆಯೋ ಹಾಗಾದರೆ!… ರಪರಪ ಹೊಯ್ದು ಮಳೆಯಲ್ಲಿ ಒದ್ದೆಯಾಗಿ ಬಿದ್ದುಕೊಂಡರೆ!.. ಬಿದ್ದ ನೀರನ್ನು ತುಂಬಿಕೊಂಡು, ಇಡೀ ಹಗಲನ್ನು ಕನ್ನಡಿ ಮಾಡಿ ನನ್ನ ಬಿಂಬ ನೋಡಿಕೊಳ್ಳೊ ಹಾಗಾದರೆ! ಮಳೆ ಬರಲಿ ದೇವರೇ ಮಳೆ ಬರಲಿ!
*(ಕುರ್ಚಿಯಲ್ಲಿ ಕುಸಿದು ಮುಖ ಮುಚ್ಚಿಕೊಳ್ಳುವನು. ತುಸು ಹೊತ್ತು ನೀರವ, ಸರೋಜ ಮೆಲ್ಲಗೆ ಎದ್ದು ಬರುವಳು. ಈಗ ಗಂಭೀರವಾಗಿ ದ್ದಾಳೆ.)*

ಸರೋಜ : ಪ್ರಕಾಶ್ ನಿಮಗೆ ಸತ್ಯ ಬೇಕಲ್ಲವೆ?

ಪ್ರಕಾಶ್ : ಹೌದು.

ಸರೋಜ : ಈಗಲೇ ಬೇಕಲ್ಲವೆ?

ಪ್ರಕಾಶ್ : ಹೌದು. ಹೌದು.

ಸರೋಜ : *(ಪಿಸ್ತೂಲು ತೆಗೆದುಕೊಂಡು ಅವನ ಕೈಗಿಡುತ್ತಾ)* ತಗೊಳ್ಳಿ ನನ್ನನ್ನ ಕೊಂದುಹಾಕಿ.

ಪ್ರಕಾಶ್ : ಓಹೋ! ಪ್ರೇಮಿಗೋಸ್ಕರ ಪ್ರಾಣಾರ್ಪಣೆಯೋ? ನಿನ್ನ ಮಾತಿನ ಕವರಿನಲ್ಲಿ ಏನಿದೆ, ನಾ ಬಲ್ಲೆ ನಿನಗ್ಗೊತ್ತಿದೆ ನಾನಿನ್ನ ಕೊಲ್ಲೋದಿಲ್ಲ ಅಂತ. ನನಗೆ ನಿನ್ನನ್ನು ಕೊಲ್ಲೋ ತಾಕತ್ತಿಲ್ಲ ಅಂತ. ನನ್ನ ಕನಸನ್ನ ನಾನೇ ಕೈಯಾರ ಕೊಲ್ಲಲಾರೆ ಅಂತ. ಆದ್ರೂ ಕೇಳ್ತಾ ಇದ್ದೀ ನೋಡು! ಈ ಬಣ್ಣ ನೀನೇ ಹಚ್ಚಿಕೊಂಡಿದ್ದೋ ಅಥವಾ ಇನ್ಯಾರಾದರೂ ಹಚ್ಚಿದ್ದೋ? ನನ್ನಿಂದಾಗೋಲ್ಲ.

ಸರೋಜ : ಯಾಕಾಗೋಲ್ಲ?

ಪ್ರಕಾಶ್ : ಯಾಕಂದ್ರೆ ನನ್ನತ್ರ ಇದ್ದಬಿದ್ದದ್ದನ್ನೆಲ್ಲಾ ನಿನ್ನ ಪ್ರೀತಿ ಮೇಲೆ ಪಂಧ್ಯ ಕಟ್ಟಿ ಹಾಳಾಗಿದ್ದೀನಿ.

ಸರೋಜ : ನನ್ನನ್ನ ನಾನೇ ಕೊಂದುಕೊಳ್ಳಲಾ?

ಪ್ರಕಾಶ್ : ನಿನ್ನ ಪ್ರೇಮಿಗೋಸ್ಕರ ಪ್ರಾಣ ಕೋಡೋದಕ್ಕೂ ಸಿದ್ಧಳಾಗಿದ್ದೀಯಾ; ನನಗೋಸ್ಕರ ಒಂದು ಸಣ್ಣ ಸತ್ಯ ಹೇಳೋದಕ್ಕೂ ಸಿದ್ಧಳಿಲ್ಲ, ಅಲ್ವಾ? ಇಟ್ಟುಕೊಂಡವ ನಿಜ ನಿನಗೆ, ಕಟ್ಟಿಕೊಂಡವ ನಾನು ಏನೂ ಅಲ್ಲವ? ಛೆ! ಅವನ್ಯಾರೋ ದೊಡ್ಡ ಮನುಷ್ಯನೇ ಇರಬೇಕು. ಪ್ರಾಣ ಕೂಡ ಕ್ಷುದ್ರವಗಿ ಕಾಣೋ ಹಾಗೆ ಪ್ರೀತ್ಸಿದಾನೆ ನೋಡು. ಕೊನೇ ಪಕ್ಷ ಅವನ ಹೆಸರಾದರೂ ಹೇಳು, -ಅವನಿಗೆ ಧನ್ಯವಾದಗಳನ್ನಾದರೂ ಹೇಳ್ತೀನೆ.

ಸರೋಜ : *(ಅಳುತ್ತಾ)* ಕಾಲಿಗೆ ಬೀಳ್ತೇನೆ ನನ್ನನ್ನ ಒತ್ತಾಯ ಮಾಡಬೇಡಿ ಪ್ರಕಾಶ್,

ಪ್ರಕಾಶ್ : ಹೇಳದಿದ್ರೆ... ಹೇಳದಿದ್ದರೇ ನಾನೇ ಸಾಯ್ತೇನೆ.
*(ತಕ್ಷಣ ಪಿಸ್ತೂಲು ತೆಗೆದುಕೊಂಡು ತನ್ನ ಎದೆಗೆ ಗುರಿ ಹಿಡಿದುಕೊಂಡು ನಿಲ್ಲುತ್ತಾನೆ. ಸರೋಜಳಿಗೆ ಆಘಾತವಾಗಿ ಬಿಡಿಸಿಕೊಳ್ಳಲು ಮುಂದೆ ಬರುತ್ತಾಳೆ.)*

ಸರೋಜ : ಪ್ರಕಾಶ್.

ಪ್ರಕಾಶ್ : ಒಂದು ಹೆಜ್ಜೆ ಮುಂದೆ ಬಂದ್ರೆ ಸಾಯ್ತೇನೆ.
*(ಸರೋಜ ಅಪ್ರತಿಭಳಾಗಿ ನಿಲ್ಲುತ್ತಾಳೆ. ಇಬ್ಬರಲ್ಲೂ ಟೆನ್‌ಶನ್ ಇದೆ. ಪ್ರಕಾಶ್ ಸಂಕಟವನ್ನನುಭವಿಸಿ ಮೆಲ್ಲಗೆ ಪಿಸ್ತೂಲು ಕೆಳಗೆ ಬಿಡು ತ್ತಾನೆ.)*

ಪ್ರಕಾಶ್ : ಸಾಯಲಿಕ್ಕೂ ತಾಕತ್ತಿಲ್ಲ ನನಗೆ, ಕೊಲ್ಲೋದಕ್ಕಿಲ್ಲ; ಬದುಕಲಿಕ್ಕೂ ಇಲ್ಲ. ನನ್ನಿಂದೇನೂ ಆಗೋದಿಲ್ಲ. ಈ ಮನೇಲಿರೋದು ಸಾಧ್ಯವಿಲ್ಲ. ಆದರೆ ಇದನ್ನು ಬಿಟ್ಟು ಬೇರೆ ಕಡೆ ಇರೋದೂ ಸಾಧ್ಯ ಇಲ್ಲ. ಇದು ಬಿಟ್ಟು ನನಗೆ ಇರೋದಕ್ಕೆ ಬೇರೆ ಸ್ಥಳ ಬೇಕು. ಆದರೆ ಆ ಸ್ಥಳ ಈ ಜತ್ತಿನಲ್ಲೇ ಇಲ್ಲ.
*(ವಿಕಾರವಾಗಿ ಮುಖ ಮಾಡಿಕೊಂಡು ಕುರ್ಚಿಯಲ್ಲಿ ಕುಸಿಯುತ್ತಾನೆ.)*

ಸರೋಜ : *(ಅಳುತ್ತಾ)* ನಾನೇ ಸಾಯ್ತೀನಿ. ಇದಕ್ಕೆಲ್ಲಾ ನಾನೇ ಕಾರಣ. ನಾನು ಸತ್ತರೆ ಇದೆಲ್ಲ ಸರಿಹೋಗುತ್ತದೆ. ನಾನು ಸೂಳೆ ಅಲ್ಲ. ಖಂಡಿತವಾಗಿಯೂ ನಾನು ನಿಮಗೆ ದ್ರೋಹ ಮಾಡಿಲ್ಲ ಪ್ರಕಾಶ್ ....

*(ದನಿ ತೆಗೆದು ಅಳುತ್ತಿರುವಾಗ ಫೋನ್ ರಿಂಗಾಗುತ್ತದೆ. ಸರೋಜ ಗಡಿಬಿಡಿಸಿ ಎದ್ದು ಹೋಗಿ ಫೋನೆತ್ತುತ್ತಾಳೆ. ಶೂನ್ಯ ಸ್ಥಳದ ಪಬ್ಲಿಕ್ ಫೋನಿನಲ್ಲಿ ಸಿದ್ದಲಿಂಗೂ ಕಾಣಿಸಿಕೊಳ್ಳುತ್ತಾನೆ.)*

ಸಿದ್ದಲಿಂಗು : ಯಾರು? ಸರೋಜಾನ?

ಸರೋಜ : ಹೌದು, ನೀವ್ಯಾರು?

ಸಿದ್ದಲಿಂಗು : ಹ್ಯಾಗಿದೀರಿ ಮೇಡಂ?

ಸರೋಜ : ನಿವ್ಯಾರೂಂದ್ರೆ?

ಸಿದ್ದಲಿಂಗು : ಯಾಕೆ ಗುರ್ತು ಸಿಕ್ಕಿಲ್ವಾ? ನಾನು ನಿಮ್ಮ ಕಥೆಯಲ್ಲಿ ಬರುವ ವಿಲನ್, ಖಳನಾಯಕ! ಹಾಹಾಹಾ ಗೊತ್ತಾಯ್ತಾ ಯಾರೂ ಅಂತ?

ಸರೋಜ : ಸಿದ್ದಲಿಂಗೂ ಏನ್ರೀ!

ಸಿದ್ದಲಿಂಗು : ಈಗ ಗುರ್ತಾಯಿತೋ? ಏನಂತಾನೆ ಹೀರೋ?

ಸರೋಜ : ಥೂ. ನೀವು ಮನುಷ್ಯರೇನ್ರೀ? ನಾವಿಲ್ಲಿ ಗಂಡ ಹೆಂಡ್ತಿ ಪರಸ್ಪರ ಹಿಂಸೆ ಕೊಟ್ಕೊಂಡು ಸಾಯ್ತಾ ಇದ್ದೀವಿ. ನೀವ್ ಬಚಾವ್ ಆಗಿ ಆಹಾಹಾ ಅಂಥ, ನಗ್ತಾ ಇದೀರಿ. ನಿಮಗೆ ನಾಚಿಕೆ ಆಗೋಲ್ವೇನ್ರೀ? ನೀವೇನೇನೋ ಕೆಟ್ಟ ಕೆಲ್ಸ ಮಾಡಿದಕ್ಕೆ ನಾವ್ಯಾಕ್ರೀ ಒದ್ದಾಡಬೇಕು.?

ಸಿದ್ದಲಿಂಗು : ನೀವು ಪ್ರಕಾಶ್ ವಿಷಯ ತಾನೇ ಹೇಳ್ತಾ ಇರೋದು? ಅಯ್ಯೋ ಒಂದು ಪದ್ಯ ಬರೆದರೆ ತಾನೇ ಸರಿಹೋಗ್ತಾನೆ ಬಿಡಿ ಮೇಡಂ.

ಸರೋಜ : ಪದ್ಯ ಬರೆದರೆ ಸಂಸಾರ ಸರಿ ಹಗೋದುಂಟೇನ್ರೀ? ಭಾರಿ ಬುದ್ಧಿಜೀವಿ ಥರಾ ಮಾತಾಡ್ತಿದೀರಿ. ನಮ್ಮ ಸಂಸಾರ ಎಂಥಾ ಪೇಚಿಗೆ ಸಿಕ್ಕೊಂಡಿದೆ ಅಂತಾ ನಿಮಗೇನ್ರೀ ಗೊತ್ತು? ನೋಡಿ ನಮ್ಮ ಸಂಸಾರದಲ್ಲಿ ಹುಳಿ ಹಿಂಡಿದೋರು ನೀವು. ಈಗ ನೀವೇ ಬಂದು ಸರಿಪಡಿಸಬೇಕು. *(ಕಿರಚಿ ಅಳುವ ಧ್ವನಿಯಲ್ಲಿ)* ಇಲ್ಲದಿದ್ರೆ ನಾನು ಖಂಡಿತಾ ಹುಚ್ಚಿ ಆಗ್ತೇನೆ.

ಸಿದ್ದಲಿಂಗು : ಈಗಾಗ್ಲೆ ಆಗಿದೀರ. ನನ್ನ ಮಾತು ಸ್ವಲ್ಪ ಕೇಳಿ. ನಾನು ಬರೋವಾಗ ನಿಮ್ಮ ಮನೆಯಲ್ಲಿ ನನ್ನ ಪಿಸ್ತೂಲು ಮರೆತು ಬಂದಿದೇನೆ.

ಸರೋಜ : ಅದರಿಂದಲೇ ಇಷ್ಟೆಲ್ಲಾ ಆದದ್ದು.

ಸಿದ್ಧಲಿಂಗು : ಆ ಪಿಸ್ತೂಲು ತೆಗೆದು ಜಾಗ್ರತೆಯಾಗಿ ಯಾರಿಗೂ ತೋರಿಸದೆ ಮುಚ್ಚಿಡಿ. ಏನೇ ಆದರೂ ರುದ್ರಪ್ಪನಿಗೆ ಅದರ ಸುಳಿವು ಹತ್ತಬಾರದು . ಹತ್ತಿದರೆ ನಾವಿಬ್ಬರೂ ನಾಶವಾದ ಹಾಗೆ.

ಸರೋಜ : ನಾನು ಕೇಳ್ತಾ ಇರೋದು, -ನೀವು ಯಾವಾಗ ಬಂದು ನಮ್ಮ ಜಗಳ : ಬಗೆ ಹರಿಸ್ತೀರಿ ಅಂತ?

ಸಿದ್ದಲಿಂಗು : ನಾಳೆ ರಾತ್ರಿ ಎಂಟು ಗಂಟೆಗೆ ಬರ್ತೀನಿ, ಆದೀತಾ?

ಸರೋಜ : ಅಲ್ಲೀ ತನಕ ಪ್ರಕಾಶ್‌ಗೆ ಏನಾದ್ರೂ ಆದರೆ? ಏನ್ರೀ ಕೊಲೆ ಮಾಡ್ತೀವಿ ಅಂತ ಪ್ರಕಾಶ್‌ಗೆ ಫೋನ್ ಮಾಡ್ತೀರಾ? ಸ್ಕೂಟರ್ ನಲ್ಲಿ ಫಾಲೋ ಮಾಡ್ತೀರಾ? ಆಶ್ರಯ ಕೊಟ್ಟು ಉಪಕಾರ ಮಾಡಿದ್ದಕ್ಕೆ ಈ ರೀತೀನಾ ನೀವು ಉಪಕಾರ ತೀರಿಸೋದು?

ಸಿದ್ದಲಿಂಗು : *(ಚಕಿತನಾಗಿ)* ನೋಡಿ, ನಾಳೆ ನಾನು ಇನ್ನೂ ಬೇಗನೆ ಬರ್ತೀನಿ ಆಯ್ತಾ?

ಸರೋಜ : ಅಲ್ಲೀತನಕ ನಾ ಹ್ಯಾಗೆ ಬದುಕಿರಲಿ? ಈಗ ಪ್ರಕಾಶ್ ಕೈಲಿ ಫೋನು ಕೊಡ್ತೀನಿ ಮಾತಾಡಿ.

ಸಿದ್ದಲಿಂಗು : ಎಲ್ಲಾ ನಾಳೆ.
*(ಸಿದ್ದಲಿಂಗು ಫೋನಿಟ್ಟು ಮಾಯವಾಗುತ್ತಾಣೆ. ಹಲೋ ಹಲೋ ಎಂದು ಸರೋಜ ಕಿರಚಿ ನಿರಾಶೆಯಿಂದ ಅವಳೂ ಫೋನಿಟ್ಟು ಬರುತ್ತಾಳೆ. ಪ್ರಕಾಶ್ ಅವಳ ಮುಖವನ್ನೇ ನಿರಾಶೆಯಿಂದ ನೋಡುತ್ತಾನೆ. ದುಃಖ ಒತ್ತರಿಸಿ ಬಂದು ಸರೋಜ ಅಳುತ್ತಾ)*

ಸರೋಜ : ನಾಳೆ ರಾತ್ರಿ ಎಂಟು ಗಂಟೆಗೆ ಸತ್ಯ ತಿಳಿಯುತ್ತೆ. ನಿಮಗೆ ಸತ್ಯ ತಗಿಳಿಸಿಯೇ ಸಾಯ್ತೀನೆ, ಆಯ್ತಾ? ಅಲ್ಲೀತನಕ ಬದುಕಲಿಕ್ಕೆ ಬಿಡೀಯಪ್ಪ.
*(ಎಂದು ಅಳುತ್ತಾ ಬೆಡ್‌ರೂಮಿಗೆ ಹೋಗಿ ಹಾಸಿಗೆಯ ಮೇಲೆ ಉರುಳಿ ದುಖಿಸುವಳು. ಪ್ರಕಾಶ್ ಮೆಲ್ಲನೆ ರೇಡಿಯೋ ಆನ್ ಮಾಡುವನು.)*

ರೇಡಿಯೋದಲ್ಲಿ : ಜನಮತ ಗೆಲ್ಲಲು ವಿಫಲವಾದ ಬಲಪಕ್ಷವು ಸ್ವಾತಂತ್ರ್ಯಾನಂತರ ಮೊದಲ ಬಾರಿಗೆ ರಾಜ್ಯದಲ್ಲಿ ಇಂದು ಅಧಿಕಾರ ಪೀಠದಿಂದ ಕೆಳಗಿಳಿಯಿತು. ಚಿಂಚಿಲೀಪುರದಲ್ಲಿ ಮುಖ್ಯಮಂತ್ರಿ ಶ್ರೀ ಎಸ್.ಎಂ. ನಾಯಕ್ ಅವರು ಸೋತು ಕೂಡಲೇ ಇಂದು ರಾಜೀನಾಮೆ ಸಲ್ಲಿಸಿದರು. ನಾಲ್ಕು ವಿರೋಧಪಕ್ಷಗಳು ಸೇರಿದ ಎಡ ರಂಗವು ಹಲವೆಡೆ ಬಲ ಪಕ್ಷದ ಪ್ರಮುಖರನ್ನು ಬಲಿ ತೆಗೆದುಕೊಂಡು ವಿಧಾನ ಸಭೆಯಲ್ಲಿ ಅತಿ ದೊಡ್ಡ ಪಕ್ಷವಾಗಿ ಉದಯಿಸಿದೆ. ಈವರೆಗೆ ಪ್ರಕಟವಾದ ಇನ್ನೂರ ಮೂವತ್ತು ಸ್ಥಾನಗಳ ಪೈಕಿ ನೂರಾಮೂವತ್ತೆಂಟು ಸ್ಥಾನಗಳನ್ನು ಗಳಿಸಿರುವ ಎಡರಂಗವು ಸರಕಾರ ರಚಿಸುವ ಸನ್ನಾಹದಲ್ಲಿವೆ. ಚುನಾವಣೆಯಲ್ಲಿ ಸೋಲು ಅನುಭವಿಸಿದ ಮುಖ್ಯಮಂತ್ರಿ ಶ್ರೀ ಎಸ್.ಎಂ. ನಾಯಕ್ ಅವರು ಇಂದು ತಮ್ಮ ರಾಜೀನಾಮೆ ಸಲ್ಲಿಸಿದರು. ಅವರ ರಾಜೀನಾಮೆಯನ್ನು ಅಂಗೀಕರಿಸಿದ ರಾಜ್ಯಪಾಲರು ಮುಂದಿನ ವ್ಯವಸ್ಥೆ ಆಗುವ ತನಕ ಅಧಿಕಾರದಲ್ಲಿ ಮುಂದುವರಿಯಬೇಕೆಂದು ಅವರಿಗೆ ಸೂಚಿಸಿದ್ದಾರೆ. ನಾಲ್ಕು ವಿರೋಧಪಕ್ಷಗಳು ಕೂಡಿದ ಎಡರಂಗದ ನಾಯಕ ಶ್ರೀ ರುದ್ರಪ್ಪ ಅವರು ಇದು ತಮ್ಮ ಪಕ್ಷದ ಜಯವಲ್ಲ ಜನತಾದ ಜಯವೆಂದು ಹೇಳಿದರು. ಆಳುವ ಪಕ್ಷದ ಎಲ್ಲ ಆಮಿಷಗಳನ್ನು ಮೀರಿ ತಮಗೆ ಮತ ನೀಡಿದ ಜನತೆಯನ್ನು ಅವರು ಅಭಿನಂದಿಸಿ ಜನತೆ ತಮ್ಮ ಮೇಲೆ ಇರಿಸಿರುವ ವಿಶ್ವಾಸಕ್ಕೆ ತಾವೆಂದೂ ದ್ರೋಹ ಬಗೆಯುವುದಿಲ್ಲವೆಂದು ಹೇಳಿದರು. ಆಗಲೇ ಬಹುಮತ ಗಳಿಸಿರುವ ಎಡರಂಗದ ಗೆದ್ದು ಬಂದ ಸದಸ್ಯರು ನಾಳೆಯೇ ಸಭೆ ಸೇರಿ, ವಿಧಾನ ಸಭೆಯಲ್ಲಿ ತಮ್ಮ ನಾಯಕನನ್ನು ಆರಿಸುವರೆಂದು ಅವರು ಹೇಳಿದರು.

***